ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ

ಕನ್ನಡ ವಿಷಯದಲ್ಲಿ ಎಂ. ಫಿಲ್ ಪದವಿಯ ಪ್ರಬಂಧ

"ಚಂದ್ರಕಾಂತ ಕುಸನೂರರವರ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳು"

ಸಂಶೋಧಕರು

ಶ್ರೀ ರಾಘವೇಂದ್ರ ಅ. ಪತ್ತಾರ.
ಸ.ಹಿ.ಪ್ರಾ.ಕನ್ನಡ ಶಾಲೆ, ಹೊನ್ನಿಹಳ್ಳಿ

ಮಾರ್ಗದರ್ಶಕರು

ಡಾ॥ ಕೆ.ಆರ್.ಸಿದ್ದಗಂಗಮ್ಮ

ಮುಖ್ಯಸ್ಥರು, ಕನ್ನಡ ವಿಭಾಗ
ಲಿಂಗರಾಜ ಮಹಾವಿದ್ಯಾಲಯ, ಬೆಳಗಾವಿ.

ಶ್ರೀ ಬಿ.ಆರ್.ದರೂರ, ಸಂಶೋಧನಾ ಕೇಂದ್ರ, ಹಾರೂಗೇರಿ ಜಿಲ್ಲೆ:
ಬೆಳಗಾವಿ ಮಾನ್ಯತೆ ಕನ್ನಡ ವಿಶ್ವವಿದ್ಯಾಲಯ ಹಂಪಿ

2014–15

ಸಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ

ಕನ್ನಡ ವಿಷಯದಲ್ಲಿ ಎಂ. ಫಿಲ್ ಪದವಿಯ ಪ್ರಬಂಧ

"ಚಂದ್ರಕಾಂತ ಕುಸನೂರರವರ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳು"

ಸಂಶೋಧಕರು

ಶ್ರೀ ರಾಘವೇಂದ್ರ ಅ. ಪತ್ತಾರ.
ಸ.ಹಿ.ಪ್ರಾ.ಕನ್ನಡ ಶಾಲೆ, ಹೊನ್ನಿಹಳ್ಳಿ

ಮಾರ್ಗದರ್ಶಕರು

ಡಾ॥ ಕೆ.ಆರ್.ಸಿದ್ದಗಂಗಮ್ಮ

ಮುಖ್ಯಸ್ಥರು, ಕನ್ನಡ ವಿಭಾಗ
ಲಿಂಗರಾಜ ಮಹಾವಿದ್ಯಾಲಯ, ಬೆಳಗಾವಿ.

ಶ್ರೀ ಬಿ.ಆರ್.ದರೂರ, ಸಂಶೋಧನಾ ಕೇಂದ್ರ, ಹಾರೂಗೇರಿ ಜಿಲ್ಲೆ:

ಬೆಳಗಾವಿ ಮಾನ್ಯತೆ ಕನ್ನಡ ವಿಶ್ವವಿದ್ಯಾಲಯ ಹಂಪಿ

2014–15

ಅಭ್ಯರ್ಥಿಯ ಪ್ರಮಾಣ ಪತ್ರ

ಶ್ರೀ ಬಿ.ಆರ್.ಸಂಶೋಧನಾ ಕೇಂದ್ರ ಹಾರೂಗೇರಿ ಮೂಲಕ ಹಂಪಿ ಕನ್ನಡ ವಿಶ್ವ ವಿದ್ಯಾಲಯಕ್ಕೆ 2014–15ನೇ ಸಾಲಿನ ಎಂ.ಫಿಲ್. ಪದವಿಗಾಗಿ **"ಚಂದ್ರಕಾಂತ ಕುಸನೂರರವರ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳು"** ಎಂಬ ಸಂಶೋಧನಾ ಪ್ರಬಂಧವನ್ನು ಡಾ॥ ಕೆ.ಆರ್.ಸಿದ್ಧಗಂಗಮ್ಮ ಅವರ ಮಾರ್ಗದರ್ಶನದಲ್ಲಿ ಸಿದ್ಧ ಪಡಿಸಿ ಸಲ್ಲಿಸುತ್ತೇನೆ.

ಈ ಪ್ರಬಂಧ ನನ್ನ ಸ್ವಂತ ಬರವಣಿಯಾಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ಧೃಡೀಕರಿಸುತ್ತೇನೆ.

ದಿನಾಂಕ : 27-8-2015

ಸ್ಥಳ : ಹಾರೂಗೇರಿ.

Pattar

(ರಾಘವೇಂದ್ರ ಪತ್ತಾರ)
ಸಂಶೋಧನಾ ವಿದ್ಯಾರ್ಥಿ

ಮಾರ್ಗದರ್ಶಕರ ಪ್ರಮಾಣ ಪತ್ರ

ಶ್ರೀ ಬಿ.ಆರ್.ದರೂರ ಸಂಶೋಧನಾ ಕೇಂದ್ರ ಹಾರೂಗೇರಿ ಮೂಲಕ ಹಂಪಿ ಕನ್ನಡ ವಿಶ್ವ ವಿದ್ಯಾಲಯಕ್ಕೆ 2014-15ನೇ ಸಾಲಿನ ಎಂ.ಫಿಲ್. ಪದವಿಗಾಗಿ **"ಚಂದ್ರಕಾಂತ ಕುಸನೂರರವರ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳು"** ಎಂಬ ಪ್ರಬಂಧವನ್ನು ಶ್ರೀ ರಾಘವೇಂದ್ರ ಪತ್ತಾರ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ಪ್ರಬಂಧವು ವಿದ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಿಸಿಲ್ಲ. ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: 26-8-2015

ಸ್ಥಳ : ಬೈಲಗಾಉ

ಮಾರ್ಗದರ್ಶಕರು

ಡಾ॥ ಕೆ. ಆರ್. ಸಿದ್ಧಗಂಗಮ್ಮ
ಕನ್ನಡ ವಿಭಾಗದ ಮುಖ್ಯಸ್ಥರು
ಲಿಂಗರಾಜ ಮಹಾವಿದ್ಯಾಲಯ, ಬೆಳಗಾವಿ

ಡಾ॥ ಕೆ.ಆರ್.ಸಿದ್ಧಗಂಗಮ್ಮ

ಹಿರಿಯ ಸಾಹಿತಿ ಚಂದ್ರಕಾಂತ ಕುಸನೂರ





ಪರಿವಿಡಿ

ಅಧ್ಯಾಯ-1

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ:

ಸಾಹಿತ್ಯ ಎಂಬುದು ನಿಂತ ನೀರಲ್ಲ. ಸದಾಚಲನಶೀಲವಾಗಿರುತ್ತದೆ. ಅದು ಸದಾಕಾಲ ಹೊಸತನ್ನು ಬಯಸುತ್ತ, ಹಳೆಯ ನೀರನ್ನು ಹೊಸ ನೀರು ಕೊಚ್ಚಿಕೊಂಡೊಯ್ಯುವಂತೆ ಅದು ಸದಾಕಾಲ ವಿನೂತನವಾಗಿ ಸೃಷ್ಠಿಯಾಗುತ್ತ ಇರುತ್ತದೆ. ಸಾಹಿತ್ಯ ಎಂಬುದು ಆಯಾಕಾಲದ ಮಾನವನ ಸಾಮಾಜಿಕ ಚಿತ್ರಣ ಸಾಹಿತ್ಯವೂ ಆಯಾಕಾಲದ ಸಾಂಸ್ಕೃತಿಕ ಚಿತ್ರಣಗಳನ್ನು ಬಿಂಬಿಸುತ್ತ ಮುಂದಿನ ತಲೆಮಾರಿಗೆ ಕೊಂಡೊಯ್ಯುತ್ತದೆ. ಕನ್ನಡ ಸಾಹಿತ್ಯವು ಅನೇಕ ರೂಪಗಳನ್ನೂ ತಳೆಯುತ್ತ, ಹೊಸತನವನ್ನು ಪಡೆಯುತ್ತ ಹರಿಯುತ್ತಿದೆ. ಅಧ್ಯಯನದ ಸಲುವಾಗಿ ಹೊಸಗನ್ನಡ ಸಾಹಿತ್ಯವನ್ನು ನಾಲ್ಕು ಪ್ರಮುಖ ಘಟ್ಟಗಳಲ್ಲಿ ಗುರುತಿಸಬಹುದು. ನವೋದಯ ಪ್ರಗತಿಶೀಲ, ನವ್ಯ, ದಲಿತ ಮತ್ತು ಬಂಡಾಯ ಎಂಬ ಈ ನಾಲ್ಕು ಘಟ್ಟಗಳಲ್ಲಿ ಸಮೃದ್ಧವಾಗಿ ಬೆಳೆದ ಹೊಸ ಕನ್ನಡ ಸಾಹಿತ್ಯದಲ್ಲಿ ಹಲವಾರು ಪ್ರಕಾರಗಳಿವೆ. ಕಥೆ, ಕಾದಂಬರಿ,ಕಾವ್ಯ, ಸಣ್ಣಕಥೆ, ಪ್ರವಾಸಕಥನ, ವಿಮರ್ಶೆ ಮುಂತಾದವು. ಈ ಎಲ್ಲ ಪ್ರಕಾರಗಳಲ್ಲಿ ಜನಮನಕ್ಕೆ ಹತ್ತಿರವಾದುದು ಕಾದಂಬರಿ.

1900 ಸುಮಾರಿಗೆ ಹೊಸಗನ್ನಡ ಆಧುನಿಕ ಸಾಹಿತ್ಯದಲ್ಲಿ ಕಾದಂಬರಿಯು ಅತ್ಯಂತ ಜನಪ್ರೀಯವಾದ ಒಂದು ಸಾಹಿತ್ಯದ ಪ್ರಕಾರ. ಈ ಪ್ರಕಾರವು ಜನಸಾಮಾನ್ಯರ ಆಸೆ, ಅಭಿರುಚಿ ಹಾಗೂ ಸಂಸ್ಕೃತಿಯ ಮಟ್ಟವನ್ನು ವಿವರಿಸುವ ಮಾಧ್ಯಮವಾಗಿದೆ. ಕಾದಂಬರಿ ಸಾಹಿತ್ಯಕ್ಕೆ ರೂಪ, ಗುಣ ಲಕ್ಷಣಗಳು, ನಿಯಮ ನಿರ್ಬಂಧಗಳು ವಿಶೇಷವಾಗಿ ಕಂಡು ಬರದಿದ್ದರೂ , ಅದಕ್ಕೆ ಅದರದೇ ಆದ ತಾತ್ವಿಕ ಚೌಕಟ್ಟು ಇರುತ್ತದೆ. ಸಾಮಾನ್ಯವಾಗಿ ಕಾದಂಬರಿ ಎಂದರೆ ಜೀವನ ಸಿದ್ಧಾಂತವನ್ನು ಪ್ರಯೋಗಾತ್ಮಕವಾಗಿ ವಸ್ತು, ಪಾತ್ರ, ಘಟನೆಗಳಿಂದ ವಿಸ್ತರಿಸುವ ರೂಪವೇ ಕಾದಂಬರಿ.

'ಕಾದಂಬರಿಯನ್ನು ಕರತಲ ರಂಗಭೂಮಿ' ಎಂದು ಔಚಿತ್ಯ ಪೂರ್ಣವಾಗಿ ಕರೆಯುತ್ತಾರೆ. ಮಸಿ ಮತ್ತು ಕಾಗದ, ಸಾಕಷ್ಟು ವಿರಾಮ, ತಾಳ್ಮೆಗಳಿದ್ದರೆ ಯಾರೂ ಬೇಕಾದರೂ ಕಾದಂಬರಿಯನ್ನು ಬರೆಯಬಹುದೆಂಬ ಮಾತು ಕಾದಂಬರಿಯ ಸರಳ, ಸ್ವತಂತ್ರ , ಸ್ವಚ್ಛಂದತೆಯನ್ನು ಕುರಿತು ಹೇಳುತ್ತದೆ. ಕಾದಂಬರಿ ಎಂದರೆ ಘಟನೆಗಳು ಮತ್ತು ಕ್ರಿಯೆಗಳೊಡನೆ ಅನುಭವಿಸಿದ ಸಂಗತಿಗಳು, ಇವು ಜನಜೀವನದಲ್ಲಿ ಘಟಿಸಿ ಕಾದಂಬರಿಯ ಪಾತ್ರಗಳಾಗುತ್ತವೆ. ಸಾಮಾನ್ಯವಾಗಿ ಕಾದಂಬರಿಯಲ್ಲಿ ಪಾತ್ರಗಳ ಸಂಭಾಷಣೆ, ಜೀವನದ ಬಗೆಗಿನ ಒಂದು ನಿಶ್ಚಿತ ದೃಷ್ಟಿ, ಬದುಕಿನ ಕೆಲವು ಸಮಸ್ಯೆಗಳ ನಿರೂಪಣೆಗಳು ಇರುತ್ತವೆ.

ಹೊಸ ಕನ್ನಡ ಸಾಹಿತ್ಯದ ಮೊದಲ ಘಟ್ಟವಾದ ನವೋದಯದಲ್ಲಿ, ಗುಲ್ವಾಡಿ ವೆಂಕಟರಾಯರು 'ಕಾದಂಬರಿ' ಎಂಬ ಬೀಜವನ್ನು ಮೊದಲು ಬಿತ್ತಿದರು. ನಂತರ ಬಿ.ವೆಂಕಟಾರ್ಯ, ಗಳಗನಾಥರು, ಎಂ.ಎಸ್.ಪುಟ್ಟಣ್ಣ ಮುಂತಾದವರು ಈ ಬೀಜವನ್ನು ಮೊಳೆಯಲು ಅನುವು ಮಾಡಿಕೊಟ್ಟರು. ನಂತರ ಈ ಕ್ಷೇತ್ರವನ್ನು ಮರವಾಗಿ ಬೆಳೆಸಿದವರು ಶಿವರಾಮಕಾರಂತ ಮತ್ತು ಕುವೆಂಪು ಮುಂತಾದವರು. 'ಮರಳಿಮಣ್ಣಿಗೆ', 'ಮೂಕಜ್ಜಿಯ ಕನಸುಗಳು', 'ಅಳಿದಮೇಲೆ', 'ಇಳೆ' ಮುಂತಾದ ಕಾದಂಬರಿಗಳನ್ನು ಕಾರಂತರು ನೀಡುವುದರ ಮೂಲಕ, ಕುವೆಂಪುರವರು-'ಮಲೆಗಳಲ್ಲಿ ಮದುಮಗಳು' 'ಕಾನೂರು ಹೆಗ್ಗಡತಿ' ಕಾದಂಬರಿಗಳನ್ನು ನೀಡುವುದರ ಮೂಲಕ ನವೋದಯ ಸಾಹಿತ್ಯದಲ್ಲಿ 'ಕಾದಂಬರಿ' ಎಂಬ ಪ್ರಕಾರವು ಗಟ್ಟಿಯಾಗಿ ನೆಲೆಯೂರಿದ್ದನ್ನು ಕಾಣಬಹುದು.

ಎರಡನೆಯ ಹಂತದಲ್ಲಿ ಅನಕೃಷ್ಣರಾಯರು, ತರಾಸುಬ್ಬರಾಯರು, ಚದುರಂಗ, ವ್ಯಾಸರಾಯ ಬಲ್ಲಾಳರು ಮುಂತಾದವರು. ಕಾದಂಬರಿಯ ವಾಚಕ ವಲಯವನ್ನು ವಿಸ್ತರಿಸಿದರು. ಅದನ್ನು ಪ್ರಗತಿಶೀಲ ಸಾಹಿತ್ಯವೆಂದು ಗುರುತಿಸಲಾಗಿದೆ. 'ಸಂಧ್ಯಾರಾಗ', 'ಉದಯರಾಗ', 'ನಟಸಾರ್ವಭೌಮ' 'ನಗ್ನಸತ್ಯ' 'ಸಂಜೆಗತ್ತಲು' 'ಶನಿಸಂತಾನ' ಮುಂತಾದವುಗಳು ಅನಕೃರವರ ಸೃಷ್ಟಿಗಳು. ಬಸವರಾಜ ಕಟ್ಟಿಮನಿಯವರ 'ಜರತಾರಿ ಜಗದ್ಗುರು' ,'ಮಾಡಿ ಮಡಿದವರು' ಮತ್ತು 'ಜ್ವಾಲಾಮುಖಿಯ ಮೇಲೆ' ನಿರಂಜನರವರ-'ಮೃತ್ಯುಂಜಯ', 'ಚಿರಸ್ಮರಣೆ', ತ.ರಾ.ಸು.ರವರ-'ರಕ್ತಕ್ರಾಂತಿ' 'ಕಂಬನಿಯ ಕುಯಿಲು' 'ಚದುರಂಗರವರ-'ಸರ್ವಮಂಗಳ' 'ಉಯ್ಯಾಲೆ' 'ವೈಶಾಖ' ವ್ಯಾಸರಾಯ ಬಲ್ಲಾಳರ 'ಕಾಡುಮಲ್ಲಿಗೆ' 'ಬಂಡಾಯ' ಮುಂತಾದ ಕಾದಂಬರಿಗಳು ಪ್ರಗತಿಶೀಲ ಪಂಥದ ಬಂಡವಾಳಶಾಹಿ ಸಂಸ್ಕೃತಿಯ ವಿರುದ್ಧ ಸಾಮ್ಯವಾದವನ್ನು ಸಾರಲು ಶ್ರಮಿಸಿದವು.[1]

ಸಾಹಿತ್ಯದ ಮೂರನೆಯ ಘಟ್ಟ ನವ್ಯ ಪ್ರಕಾರ. ಇಲ್ಲಿ ಯು.ಆರ್. ಅನಂತಮೂರ್ತಿ, ಪಿ.ಲಂಕೇಶ, ಪೂರ್ಣಚಂದ್ರ ತೇಜಸ್ವಿ, ಶಾಂತಿನಾಥ ದೇಸಾಯಿ, ಗಿರಿ, ಯಶವಂತ ಚಿತ್ತಾಲ, ಶ್ರೀ ಕೃಷ್ಣ ಆಲನಹಳ್ಳಿ ಮುಂತಾದವರು 'ಕಾದಂಬರಿ' ಎಂಬ ಮರವನ್ನು ನೀರು ಗೊಬ್ಬರ ಹಾಕಿ ಸಮೃದ್ಧವಾಗಿ ಬೆಳೆಯಲು ಅನುವು ಮಾಡಿದರು. ಯು.ಆರ್.ಅನಂತಮೂರ್ತಿಯವರು 'ಸಂಸ್ಕಾರ', 'ಭಾರತೀಪುರ' ಪಿ.ಲಂಕೇಶರವರು 'ಅಕ್ಕ', 'ನಿವೃತ್ತರು', ತೇಜಸ್ವಿಯವರು 'ಜುಗಾರಿಕ್ರಾಸ್', 'ಕಿರಿಯೂರಿನ ಗಯ್ಯಾಳಿಗಳು', 'ಚಿದಂಬರ ರಹಸ್ಯ' ಶಾಂತಿನಾಥ ದೇಸಾಯಿಯವರು 'ಭೇದ', 'ವಿಕ್ಷಿಪ್ತ', 'ಮುಕ್ತಿ'. ಯಶವಂತ ಚಿತ್ತಾಲರು 'ಪುರುಷೋತ್ತಮ', 'ಕೇಂದ್ರ ವೃತ್ತಾಂತ', 'ಸೆರೆ', ಶ್ರೀಕೃಷ್ಣ ಆಲನಹಳ್ಳಿರವರು 'ಕಾಡು' 'ಸಂಬಂಧ' ಕಾದಂಬರಿಗಳ ಮೂಲಕ ಕಾದಂಬರಿ ಪ್ರಕಾರವನ್ನು ಬೆಳೆಸಿದರು.

ಹೊಸಗನ್ನಡ ಸಾಹಿತ್ಯದ ನಾಲ್ಕನೆಯ ಘಟ್ಟವಾದ ದಲಿತ ಮತ್ತು ಬಂಡಾಯ ಸಾಹಿತ್ಯದ ಪ್ರಕಾರದಲ್ಲಿ ದೇವನೂರು ಮಹಾದೇವ, ಡಾ॥ಸಿದ್ದಲಿಂಗಯ್ಯ, ಬರಗೂರು

ರಾಮಚಂದ್ರಪ್ಪ, ಬಿ.ಟಿ.ಲಲಿತಾನಾಯಕ, ಚೆನ್ನಣ್ಣ ವಾಲೀಕಾರ, ರಂಜಾನದರ್ಗಾ, ಮುಂತಾದವರು ಪ್ರಮುಖರು. 'ಬೆಂಕಿ', 'ಸೂತ್ರ', 'ಉಕ್ಕಿನ ಕೋಟೆ', 'ಒಂದು ಊರಿನ ಕತೆ', 'ಸಂಗಪ್ಪನ ಸಾಹಸಗಳು', 'ಭರತನಗರಿ' ಮುಂತಾದವು ಬರಗೂರು ರಾಮಚಂದ್ರಪ್ಪನವರ

ಕೃತಿಗಳು. 'ಗತಿ', 'ನೆಲೆ-ಬೆಲೆ' ಮುಂತಾದವು ಬಿ.ಟಿ.ಲಲಿತ ನಾಯಕರಿಂದ ರಚಿತವಾದ ಕಾದಂಬರಿಗಳು. ಹೀಗೆ ಕಾದಂಬರಿ ಸಾಹಿತ್ಯ ಕ್ಷೇತ್ರವು ಆಲದ ಮರದಂತೆ ಹೆಮ್ಮರವಾಗಿ ಕನ್ನಡ ಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಿದೆ.

ಕಾದಂಬರಿಗಳಲ್ಲಿ ಅಧ್ಯಯನದ ಸಲುವಾಗಿ ನಾಲ್ಕು ಭಾಗಗಳನ್ನು ಮಾಡಿಕೊಳ್ಳಬಹುದು. ಅವು- 1) ಘಟನಾ ಪ್ರಧಾನವಾದ ಕಾದಂಬರಿಗಳು. 2) ಪಾತ್ರ ಪ್ರಧಾನವಾದ ಕಾದಂಬರಿಗಳು. 3) ನಾಟಕೀಯ ಕಾದಂಬರಿಗಳು. 4)ಬೃಹತ್ ಕಾದಂಬರಿಗಳು.

ಪಾತ್ರ ಪ್ರಧಾನವಾದ ಕಾದಂಬರಿಗಳನ್ನು ಸೃಷ್ಟಿಸುವುದರ ಮೂಲಕ ಕನ್ನಡ ವಾಚಕರ ಹಾಗೂ ಕನ್ನಡಿಗರ ಮನದಲ್ಲಿ ಸದಾಕಾಲ ಉಳಿಯುವಂತೆ ಅನೇಕ ಅಸಂಗತ ನಾಟಕಗಳನ್ನೂ, ಕಾದಂಬರಿಗಳನ್ನು, ಕವನ-ಸಂಕಲಗಳನ್ನು ತಮ್ಮದೇ ಆದ ಹೈದರಾಬಾದ-ಕರ್ನಾಟಕದ ಭಾಷಾ ಶೈಲಿಯಲ್ಲಿ ಸೃಷ್ಟಿಸಿ, ಹೈದರಾಬಾದ ಕರ್ನಾಟಕದ ಕನ್ನಡ ಭಾಷೆಯ ವೈಶಿಷ್ಟವನ್ನು ಕರುನಾಡ ತುಂಬೆಲ್ಲಾ ಪಸರಿಸುವಂತೆ ಮಾಡಿದವರು ಚಂದ್ರಕಾಂತ ಕುಸನೂರರವರು. ಸಾಮಾಜಿಕ ಕಾದಂಬರಿಗಳಲ್ಲಿ ಚಂದ್ರನ ಕಾಂತಿಯನ್ನು ತುಂಬಿದವರು.

ಚಂದ್ರಕಾಂತ ಕುಸನೂರವರ ಕಾದಂಬರಿಗಳು ವಿಶೇಷವಾಗಿ ಪಾತ್ರ ಪ್ರಧಾನವಾವಾದ ಕಾದಂಬರಿಗಳು. ಅವರ ಕಾದಂಬರಿಗಳಲ್ಲಿ ಪುರುಷ ಮತ್ತು ಸ್ರೀ ಪಾತ್ರಗಳು, ಅಲ್ಲದೆ ಭೌಗೋಲಿಕ ಕ್ಷೇತ್ರವೂ ಜೀವಂತಿಕೆಯಿಂದ ಮೆರೆಯುತ್ತದೆ. ಚಿತ್ರಕಲೆಯ ಆರಾಧಕರಾದ ಕುಸನೂರರವರು ತಮ್ಮ ಕಾದಂಬರಿಯಲ್ಲಿ ಬರುವ ಪಾತ್ರಗಳಿಗೆ ತಮ್ಮ ಪ್ರತಿಭೆಯ ಕುಂಚದಿಂದ ಜೀವ ತುಂಬುವ ಕಲೆಯಿಂದ ಹೆಸರುವಾಸಿಯಾಗಿದ್ದಾರೆ. ಅವರ ಕಾದಂಬರಿಗಳು ಪುರುಷ ಮತ್ತು ಸ್ತ್ರೀಯನ್ನು ಸಮಾನ ದೃಷ್ಟಿಯಿಂದ ನೋಡಿದ್ದರೂ ಕೂಡ, ಸ್ತ್ರೀಯ ಸ್ವಾತಂತ್ರ, ಶೋಷಣೆ, ಶಿಕ್ಷಣ, ನೋವು-ನಲಿವುಗಳನ್ನು ಕಣ್ಣಿಗೆ ಕಾಣುವಂತೆ ಚಿತ್ರಿಸಿದ್ದಾರೆ. ಇಂದಿನ ಸ್ರೀಯರ ಸಾಮಾಜಿಕ ಸ್ಥಿತಿಗತಿಯ ಬಗ್ಗೆ ಅವರಿಗಿರುವ ಕಾಳಜಿ, ಸ್ತ್ರೀಯರ ಸ್ವಾತಂತ್ರದ ಬಗ್ಗೆ ಅವರಿಗಿರುವ ನೋವು, ಕೆಳಜಾತಿ ಸ್ತ್ರೀಯರು ಅನುಭವಿಸುವ ನೋವುಗಳು ಮುಂತಾದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು 'ಚಂದ್ರಕಾಂತ ಕುಸನೂರರವರ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳು' ಎಂಬ ಶೀರ್ಷಿಕೆಯಡಿ ಈ ಪ್ರಬಂಧ ರಚಿಸಲಾಗಿದೆ.

ಈ ಅಧ್ಯಯನದಲ್ಲಿ ಒಟ್ಟು ಆರು ಅಧ್ಯಾಯಗಳಿವೆ. ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿಯನ್ನು ವಿವರಿಸಲಾಗಿದೆ. ಅಧ್ಯಾಯ ಎರಡರಲ್ಲಿ ಚಂದ್ರಕಾಂತ ಕುಸನೂರುರವರ ಬದುಕು ಮತ್ತು ಬರಹದ ಬಗ್ಗೆ ಪ್ರಸ್ತಾಪಿಸಲಾಗಿದೆ. ಅಧ್ಯಾಯ ಮೂರರಲ್ಲಿ ಕುಸನೂರರವರ ಕಾದಂಬರಿಗಳ ವಸ್ತು ಸ್ವರೂಪದ ಬಗ್ಗೆ ಪರಿಚಯಿಸಲಾಗಿದೆ. ಅಧ್ಯಾಯ ನಾಲ್ಕರಲ್ಲಿ ಸ್ತ್ರೀ ಪಾತ್ರ ಚಿತ್ರಣವನ್ನು ವಿವರಿಸಲಾಗಿದೆ. ಸ್ತ್ರೀಯ ಬಗ್ಗೆ ಅವರಿಗಿರುವ ಚಿಂತನೆಗಳೇನು? ಮಹಿಳೆಯ ಸ್ವಾತಂತ್ರದ ಬಗ್ಗೆ ಅವರ ನಿಲುವೇನು? ಮಹಿಳಾ ಶೋಷಣೆಯ ವಿಮೋಚನೆಗೆ ಅವರು ತಾಳುವ ನಿಲುವೇನು? ಎಂಬ ವಿಶ್ಲೇಷಣೆ ಈ ಅಧ್ಯಾಯದಲ್ಲಿದೆ. ಅಧ್ಯಾಯ ಐದರಲ್ಲಿ ಕುಸನೂರವರ ಭಾಷಾ ಶೈಲಿಯನ್ನು ವಿವರಿಸಲಾಗಿದೆ. ಅಧ್ಯಾಯ ಆರರಲ್ಲಿ–ಸಮಾರೋಪವಿದೆ.

ಚಂದ್ರಕಾಂತ ಕುಸನೂರವರ ಕಾದಂಬರಿಗಳು ಅಪ್ಪಟ ಸಮಾಜಮುಖಿ. ಇವರು ಒಂದು ಹಳ್ಳಿಯನ್ನು ಕೇಂದ್ರವಾಗಿಟ್ಟುಕೊಂಡು ಇಡೀ ಮನುಕುಲದಲ್ಲಿ ನಡೆಯುವ ವಾಸ್ತವಿಕ ಸತ್ಯಾಸತ್ಯತೆಯನ್ನು ನಿರೂಪಿಸುತ್ತಾರೆ. ಕೆಲವೊಮ್ಮೆ ಮಾನವೀಯ ಸಂಬಂಧಗಳು ಅಮಾನುಷ ರೀತಿಯಲ್ಲಿ ಹೇಗೆ ವರ್ತಿಸುತ್ತವೆ, ಕೆಲವು ದೊಡ್ಡ ಪಾತ್ರಗಳು ಹೇಗೆ ಅಮಾನವೀಯ ರೀತಿಯಲ್ಲಿ ವರ್ತಿಸುತ್ತವೆ. ಚಿಕ್ಕ ಪಾತ್ರಗಳು ಮಾನವೀಯ ರೀತಿಯಲ್ಲಿ ಹೇಗೆ ಉತ್ತುಂಗಕ್ಕೇರುತ್ತವೆ ಎಂಬುದನ್ನು ತಿಳಿಯಪಡಿಸುತ್ತದೆ. ಇಂದಿಗೂ ಸ್ತ್ರೀಯ ಶೋಷಣೆ ನಡದೇ ಇದೆ. ಅವಳು ಮೇಲ್ವರ್ಗದ ಅಥವಾ ಕೆಳವರ್ಗದ ಹೆಣ್ಣಾಗಲಿ, ಕಲಿತ ಅಥವಾ ಕಲಿಯದ ಹೆಣ್ಣಾಗಲಿ, ಶೋಷಣೆ ಎಂಬುದು ನಿತ್ಯ ಸತ್ಯವಾಗಿರುವ ನೆಲೆಗಳನ್ನು ಕಾದಂಬರಿಗಳು ವಿವರಿಸುತ್ತವೆ.

ಅಧ್ಯಾಯ–2

ಚಂದ್ರಕಾಂತ ಕುಸನೂರರವರ ಬದುಕು ಬರಹ

ಹೈದರಾಬಾದ ಕರ್ನಾಟಕದ ಕನ್ನಡ ಸೊಗಡನ್ನು ಕರುನಾಡು ತುಂಬೆಲ್ಲಾ ಹರಡಿ, ತಮ್ಮದೇ ಆದ ವಿಶಿಷ್ಟ ಪ್ರಯೋಗಗಳಿಂದ ಗುರುತಿಸಿಕೊಂಡವರು ಶ್ರೀ.ಚಂದ್ರಕಾಂತ ಕುಸನೂರು. ಆಧುನಿಕ ಕನ್ನಡ ಕಾವ್ಯ, ಕತೆ, ನಾಟಕ, ಕಾದಂಬರಿ ಕ್ಷೇತ್ರದಲ್ಲಿ ವಿಶೇಷ ಛಾಪು ಮೂಡಿಸಿ, ಜನಮನ ಸೂರೆಗೊಂಡವರು. ಸರಳ ಸಜ್ಜನಿಕೆಯ ವ್ಯಕ್ತಿತ್ವದ ಶ್ರೀ.ಕುಸನೂರವರು ಚಿತ್ರ ಕಲಾವಿದರೂ ಹೌದು.

ಚಂದ್ರಕಾಂತ ಕುಸನೂರರವರು 31–10–1931ರಲ್ಲಿ ಕಲಬುರ್ಗಿಯಲ್ಲಿ ಜನಿಸಿದರು. ತಂದೆ ಗುಂಡೇರಾವ ಕುಸನೂರ. ಇವರು ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದರು. ಇವರ ತಂದೆಗೆ ಚಂದ್ರಕಾಂತ, ಲಕ್ಷ್ಮೀಕಾಂತ, ಪ್ರಭಾಕರ, ಶ್ರೀನಿವಾಸ ಎಂಬ ನಾಲ್ವರು ಪುತ್ರರು. ಅವರಲ್ಲಿ ಚಂದ್ರಕಾಂತ ಕುಸನೂರವರೇ ಹಿರಿಯರು. ಇವರು ತಮ್ಮ ಬಾಲ್ಯ ಜೀವನವನ್ನು ಕಲಬುರ್ಗಿಯಲ್ಲಿ ಕಳೆದರು. ಆಗಿನ ಕಲಬುರ್ಗಿ ಪಟ್ಟಣದ ವರ್ಣನೆಯನ್ನು ತಮ್ಮ ಕಾದಂಬರಿಗಳಲ್ಲಿ ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾರೆ.

ಪ್ರಾಥಮಿಕ ಶಿಕ್ಷಣ :

ಇವರ ಪ್ರಾಥಮಿಕ ಶಿಕ್ಷಣವು 'ನೂತನ ವಿದ್ಯಾಲಯ ಕಲಬುರ್ಗಿ'ಯಲ್ಲಿ ನಡೆಯಿತು. ಇವರು ತಮ್ಮ ವಿದ್ಯಾಭ್ಯಾಸದ ಆರಂಭವನ್ನು ನೆನಪಿಸಿಕೊಳ್ಳುತ್ತಾ– "ಆಗ ನನ್ನ ವಯಸ್ಸು 5–6 ವರ್ಷದಪ್ಪಿರಬೇಕು. ನಮ್ಮ ಚಿಕ್ಕಪ್ಪನ ಕಚೇರಿಗೆ ಹೋಗುವ ದಾರಿಯಲ್ಲಿ 'ಮದರಸಾ ತಹ ತಾನಿಮಾ ಬಹಮನಿಪುರಾ' ಎಂಬ ಸರಕಾರಿ ಪ್ರಾಥಮಿಕ ಶಾಲೆಯಿತ್ತು. ಆ ಶಾಲೆಯಲ್ಲಿ ಸೇರಿಸುವ ಉದ್ದೇಶದಿಂದ ಚಿಕ್ಕಪ್ಪ ನನ್ನನ್ನು ಅಕ್ಷರಶಃ ನಾಯಿಕುನ್ನಿಗೆ ಎಳೆದುಕೊಂಡು ಹೋಗುವಂತೆ, ಎಳೆದುಕೊಂಡು ಹೋದರು. ದಾರಿ ಯುದ್ದಕ್ಕೂ 'ಹೋ' ಎಂದು ಅಳುವದು, ಚೀರುವದು, ಕೊಸರಿಕೊಂಡು ಮನೆಯ ಕಡೆಗೆ ಓಡುವುದು, ಚಿಕ್ಕಪ್ಪ ಬಂದು ಹಿಡಿಯುವುದು. ರಪ್ ರಪ್ ಅಂತ ಬಡಿಯುದು, ಆಗ ಅನಿವಾರ್ಯವಾಗಿ ಶಾಲೆಗೆ ಹೋಗುವುದು. ಹೀಗೆ ಮೊದಲನೇ ದಿನದ ಶಾಲಾ ಪ್ರವೇಶದ ಸಮಾರಂಭ ನಡೆಯಿತು"[1] ಎಂದು ಹೇಳಿಕೊಳ್ಳುತ್ತಾರೆ.

ಮಾಧ್ಯಮಿಕ ಮತ್ತು ಪದವಿ ಶಿಕ್ಷಣ :

ಚಂದ್ರಕಾಂತ ಕುಸನೂರರವರ ಮಾಧ್ಯಮಿಕ ಶಿಕ್ಷಣವು ಕಲಬರ್ಗಿಯಲ್ಲಿ ಆಯಿತು. ಇವರ ಶಿಕ್ಷಣವೆಲ್ಲ ಉರ್ದು ಮಾಧ್ಯಮದಲ್ಲಿ ಸಾಗಿತು ಕಾರಣ ಅಂದು ಶಿಕ್ಷಣದಲ್ಲಿ ಎರಡು ಕ್ರಮಗಳಿದ್ದವು. ಒಂದು ಉಸ್ಮಾನಿಯಾ ಶೈಲಿ ಮತ್ತೊಂದು ಮದರಾಸ ಶೈಲಿ, ಉಸ್ಮಾನಿಯಾ ಕ್ರಮದಲ್ಲಿ ವಿದ್ಯಾಭ್ಯಾಸ ಉರ್ದುವಿನಲ್ಲಿ ನಡೆದರೆ, ಮದರಾಸ ಕ್ರಮದಲ್ಲಿ ಇಂಗ್ಲೀಷನಲ್ಲಿ

ನಡೆಯುತ್ತಿತ್ತು. ಇವರ ಶಿಕ್ಷಣ ಉರ್ದುವಿನಲ್ಲಿ ಆಯಿತು. ಪದವಿಗಾಗಿ ಹೈದರಾಬಾದಿಗೆ ಹೋದರು ಆಗ ಭಾರತದಲ್ಲಿ ಸ್ವಾತಂತ್ರದ ಕಾವು ಏರತೊಡಗಿತ್ತು. ಹೀಗಾಗಿ ಯುವಕರಾದ ಇವರು ಕೂಡ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು.

ಸಾಹಿತ್ಯ ಯಾತ್ರೆ :

ಪ್ರತಿಯೊಬ್ಬ ಸಾಹಿತಿಯ ಬಾಲ್ಯದಲ್ಲಿ ತಾನು ಕಂಡುಂಡ ಅನುಭವ, ವ್ಯಕ್ತಿ ಮತ್ತು ಪ್ರದೇಶ, ಅವನ ಸಾಹಿತ್ಯದಲ್ಲಿ ಬೇರು ಬಿಟ್ಟು ಅಭಿವ್ಯಕ್ತಿಗೊಂಡಿರುತ್ತವೆ. ಕುಸನೂರರವರನ್ನು ಸಾಹಿತ್ಯ ಕಡೆಗೆ ಆಕರ್ಷಿಸಿಸುವಂತೆ ಮಾಡಿದ್ದು ಅಂದಿನ ಶಾಲಾ ಪಠ್ಯಕ್ರಮ. ಅಂದಿನ ಪಠ್ಯಕ್ರಮವು ಸಾಹಿತ್ಯದ ಬಗ್ಗೆ ಆಳವಾದ ಪರಿಚಯ ಮಾಡಿಕೊಡುತ್ತಿತ್ತು. ಉರ್ದು ಭಾಷೆಯ ಸೊಬಗು, ಸೌಂದರ್ಯ,ಲಾಲಿತ್ಯ ಇವರನ್ನು ಆಕರ್ಷಿಸಿಸಿದವು. ಗಾಲಿಬ್, ಹಾಲಿ, ಮೀರಸೌದಾ, ಚಕ್ ಬಸ್ತ, ಇಕ್ಬಾಲ್ ಮುಂತಾದ ಕವಿಗಳ ಸಾಹಿತ್ಯ ಮತ್ತು ಕಾವ್ಯದ ಬಗ್ಗೆ ಅಭಿರುಚಿ ಹುಟ್ಟುವಂತೆ ಮಾಡಿತು. ಹೀಗಾಗಿ ಇವರ ಸಾಹಿತ್ಯ ಯಾತ್ರೆ 'ಹಿಂದಿಕವಿತೆ'ಯೊಂದಿಗೆ ಆರಂಭವಾಯಿತು. ಇವರ ಅನೇಕ ಹಿಂದಿ ಕವಿತೆಗಳು ಪ್ರತಿಷ್ಠಿತ ಹಿಂದಿ ಪತ್ರಿಕೆಗಳಲ್ಲಿ ಪ್ರಕಟವಾದವು. ಜಗದೀಶ ಗುಪ್ತಾರವರ 'ನಯೀ ಕವಿತಾ' ಎಂಬ ಮೂರನೆಯ ವಾರ್ಷಿಕ ಗ್ರಂಥದಲ್ಲಿಯೂ ಇವರ ಕವಿತೆಗಳು ಪ್ರಕಟವಾದವು. 1963ರ ಸುಮಾರು 'ರೇಶಿಮ್ ಕಿ ಗುಡಿಯಾ' ಎಂಬ ಕಥಾ ಸಂಕಲನ ಪ್ರಕಟವಾಯಿತು.ಇದಕ್ಕೆ ಕೇಂದ್ರ ಸರಕಾರದ 'ಅಹಿಂದಿ ಭಾಷೀ ಹಿಂದಿ ಲೇಖಕ' ಬಹುಮಾನ ಬಂತು.

ಬೇಂದ್ರಯವರ ಆಶೀರ್ವಾದ:

ಚಂದ್ರಕಾಂತ ಕುಸನೂರರವರು 1963ರಲ್ಲಿ ಮೈಸೂರಿನ ಹಿಂದಿ ಶಿಕ್ಷಕ ಟ್ರೇನಿಂಗ್ ಕಾಲೇಜಿಗೆ ವರ್ಗರಾದರು. ಅಲ್ಲಿ ಸಾಹಿತಿಗಳಾದ ಎಂ.ಎಚ್.ಚೆನ್ನಯ್ಯ ಹಾಗೂ ಶ್ರೀಕೃಷ್ಣ ಆಲನಹಳ್ಳಿಯ ಪರಿಚಯವಾಯಿತು. ಇದೇ ವೇಳೆಗೆ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ಆಶ್ರಯದಲ್ಲಿ ಬೇಂದ್ರೆಯವರ ಅಧ್ಯಕ್ಷತೆಯಲ್ಲಿ 'ಬಹುಭಾಷಾ ಕವಿಗೋಷ್ಠಿ' ಜರುಗಿತು. ಅಲ್ಲಿ ಹಿಂದಿ ಕವಿತೆಯನ್ನು ಓದಿದರು. ಇವರ ಕವಿತೆ ಆಲಿಸಿದ ಬೇಂದ್ರೆಯವರು ಇವರಿಗೆ ಮನೆಗೆ ಬರಲು ಹೇಳಿದರು. ನಂತರ ಜಿ.ಬಿ.ಜೋಶಿ, ಕೀರ್ತಿನಾಥ ಕುರ್ತಕೋಟಿ, ರಮಾಕಾಂತ ಜೋಶಿ ಮತ್ತು ಸಿದ್ಧಲಿಂಗ ಪಟ್ಟಣಶೆಟ್ಟಿ ಅವರೊಂದಿಗೆ ಬೇಂದ್ರೆಯವರ ಮನೆಗೆ ಹೋದರು. ಮಾತುಕತೆ ಮುಗಿದ ಮೇಲೆ ಮನೆಗೆ ಬರುವಾಗ ವಾಡಿಕೆಯಂತೆ ಎಲ್ಲರ ಕೈಯಲ್ಲಿ ಒಂದಿಷ್ಟು ಸಕ್ಕರೆ ಕೊಡುತ್ತಿದ್ದರು. ಆದರೆ 'ನನಗೆ ಕನ್ನಡದಲ್ಲಿ ಬರೆಯಬೇಕೆಂಬ ಶರತ್ತಿನ ಮೇಲೆ ನನ್ನ ಕೈಗೆ ಸಕ್ಕರೆ ಹಾಕಿದರು ಎನ್ನುತ್ತಾರೆ ಶ್ರೀ.ಕುಸನೂರವರು. ಅಲ್ಲಿಂದ ಇವರ ಕನ್ನಡ ಬರವಣಿಗೆ ಆರಂಭವಾಯಿತು. ಇದುವರೆಗೆ 70ಕ್ಕೂ ಹೆಚ್ಚು ಕನ್ನಡ ಕೃತಿಗಳು ಪ್ರಕಟವಾಗಿವೆ.

ಅಸಂಗತ ನಾಟಕಗಳ ಜನಕ :

ಮೊದಲಿನಿಂದಲು ಓದಿನಲ್ಲಿ ಆಸಕ್ತಿವಹಿಸಿದ್ದ ಇವರು ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುವಾಗ ಶಾಲೆ ಕಾಲೇಜುಗಳ ಗ್ರಂಥಾಲಯಗಳಲ್ಲಿದ್ದ ಪುಸ್ತಕಗಳನ್ನು ಓದುತ್ತಿದ್ದರು. ಅಲ್ಲದೆ ಕಲಬುರ್ಗಿಯಲ್ಲಿ ವಿವಿಧ ಭಾಷೆಯ ವಾರ್ತಾ ಪತ್ರಿಕೆಗಳನ್ನು ಓದುತ್ತಿದ್ದರು. ಈ ರೀತಿಯ ಓದಿನಲ್ಲಿ ಹೈಕು, ಕೋಐನ್, ಆಬ್ಸರ್ಡ ಡ್ರಾಮಾ ಪರಿಚಯವಾದವು. ಐರಿಷ ನಾಟಕಕಾರ ಫ್ರೆಂಚ್ ಭಾಷೆಯಲ್ಲಿ ಬರೆದ 'ವೇಟಿಂಗ್ ಫಾರ್ ಗೋಡೋ' ಇವರ ಮೇಲೆ ಗಾಢವಾದ ಪ್ರಭಾವ ಬೀರಿತು. 'ಅಬ್ಸರ್ಡ'ಗಳೇ ಇವರ ಕೈಯಲ್ಲಿ 'ಅಸಂಗತ ನಾಟಕ'ಗಳಾದವು.

'ಕನಸು' ಎಂಬ ನಾಟಕಕ್ಕೆ ಪ್ರಜಾವಣಿ ದೀಪಾವಳಿ ವಿಶೇಷಾಂಕ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಬಂದಿತು. ನಂತರ 1973ರಲ್ಲಿ 'ಮೂರು ಅಸಂಗತ ನಾಟಕಗಳು' 'ಅಕ್ಷರ ಪ್ರಕಾಶನ'ದಿಂದ ಪ್ರಕಟವಾಯಿತು. ಅದೇ ವರ್ಷ 'ಸುರಚಿ ಪ್ರಕಾಶನ'ದಿಂದ 'ನಾಲ್ಕು ಅಸಂಗತ ನಾಟಕಗಳು' ಎಂಬ ಕೃತಿ ಪ್ರಕಟವಾಯಿತು. ಈ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಬಹುಮಾನ ಬಂದಿತು.

ಕನ್ನಡದಲ್ಲಿ ಹೈಕುಗಳ ನಿರ್ಮಾಪಕ :

ಇವರ ಶಿಕ್ಷಣ ಉರ್ದು ಮತ್ತು ಹಿಂದಿ ಮಾಧ್ಯಮದಲ್ಲಿ ಆದ್ದರಿಂದ ಕನ್ನಡ ಕಲಿಯಲು ಅವಕಾಶ ಸಿಗಲಿಲ್ಲ. ಕನ್ನಡದಲ್ಲಿ ಬರೆಯಲು ಆತ್ಮ ವಿಶ್ವಾಸದ ಕೊರತೆ ಕಾಡುತ್ತಿತ್ತು. ಶಗ 'ಜಪಾನಿ' ಹೈಕು' ವಿನಂಥ ಚಿಕ್ಕ ಪದ್ಯರೂಪಗಳಲ್ಲಿ ಬರೆದರು. ಇವರು ಬರೆದ ಹೈಕುಗಳು ಸಂಕ್ರಮಣ, ಲಂಕೇಶ, ಪ್ರಜಾವಾಣಿ ಪತ್ರಿಕೆಗಳಲ್ಲಿ ಪ್ರಕಟವಾದವು.

ಚಿತ್ರ ಕಲಾವಿದರಾಗಿ :

ಅಮೂರ್ತ ಚಿತ್ರಕಲೆಯಲ್ಲಿ ವಿಶೇಷ ಆಸಕ್ತಿ ಹೊಂದಿರುವ ಇವರು ಇಂದಿಗೂ ಕ್ರಿಯಾಶೀಲ ಇವರ ಚಿತ್ರಕಲಾ ಪ್ರದರ್ಶನಗಳು ಬೆಂಗಳೂರು, ಮುಂಬಯಿ, ಕೋಲ್ಕತ್ತಾ ಮತ್ತು ದಿಲ್ಲಿ ಮುಂತಾದ ಪ್ರಮುಖ ನಗರಗಳಲ್ಲಿ ಪ್ರದರ್ಶಿತಗೊಂಡಿವೆ. ದೇಶ-ವಿದೇಶದ ಸಂಗ್ರಹಕಾರರಲ್ಲಿ ಇವರ ಕಲಾಕೃತಿಗಳಿವೆ.

ವಿಶಿಷ್ಟ ವ್ಯಕ್ತಿತ್ವದ ವಿಶೇಷ ಬರಹಗಾರರಾಗಿ :

ಇವರ ಶಿಕ್ಷಣವು ಉರ್ದು ಮತ್ತು ಹಿಂದಿ ಮಾಧ್ಯಮವಾದರೂ ಕನ್ನಡ ಸಾಹಿತ್ಯವನ್ನು ಸಮೃದ್ಧ ಮಾಡಿದ್ದಾರೆ. ಇವರು ಚಿತ್ರಕಲಾವಿದರಾಗಿ, ಕವಿಗಳಾಗಿ, ನಾಟಕಕಾರರಾಗಿ, ವಿಮರ್ಶಕರಾಗಿ, ಕಾದಂಬರಿಕಾರರಾಗಿ ಬಹುಮುಖ ಪ್ರತಿಭೆಯುಳ್ಳ ವ್ಯಕ್ತಿತ್ವ ಇವರದು. ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡಮಿ

ಗೌರವ ಪ್ರಶಸ್ತಿ, ಕರ್ನಾಟಕ ಲಲಿತ ಕಲಾ ಅಕಾಡೆಮಿ ಗೌರವ ಪ್ರಶಸ್ತಿ, ಈ ಮೂರು ಅಕಾಡಮಿಗಳಿಂದ ಗೌರವ ಪ್ರಶಸ್ತಿ ಪಡೆದ ಮೊದಲ ಕನ್ನಡಿಗರಾಗಿದ್ದಾರೆ.

ಇವರ ಕೃತಿಗಳು :

ಕಾವ್ಯ (ಮರಾಠಿಯಿಂದ)

ನಂದೀಕೋಲು

ನಾಟಕ

ಹಳ್ಳಾ ಕೊಳ್ಳಾ ನೀರು

ಸುತ್ರಧಾರ

ರತ್ತೋ ರತ್ತೋ ರಾಯನ ಮಗಳೆ

ಇದಕೆ ಸಂಶಯವಿಲ್ಲ

ಅಂಟಿ ಮಿಂಟಿ

ಆನಿ ಬಂತಾನಿ

ಮನೆ

ರೆಕ್ಕೆ

ಒಂದು ಸಂಜೆಯ ಪ್ರಸಂಗ

ಶಿಲಾಯುಗ

ವಿದೂಷಕ

ಕೋಶಿಶ ಮಾಡ್ರಿ ರಾಯರೆ

ತೋಳ ಬಂತು ತೋಳ

ಸುಂದರಕಾಂಡ

ಪ್ರತಿರೂಪ

ಸೆಳೆತ

ರಿಹರ್ಸಲ್

ಕನಸು

ಉತ್ತರಾಯಣ

ಅನುವಾದ ನಾಟಕಗಳು

ಸದ್ದು, ವಿಚಾರಣೆ ನಡೀತಾ ಇದೆ

ಮಹಾನಿರ್ವಾಣ

ಇನ್ನೆರಡು ನಾಟಕಗಳು.

ರೂಪಾಂತರ

ಗ್ರಾಮಾಯಣ

ಕಥೆ

ರೇಶಮ ಕೀ ಗುಡಿಯಾ(ಹಿಂದಿ)

(ಭಾರತ ಸರಕಾರ ಪುರಸ್ಕಾರ)

ಅಂಗೈ ಅಗಲ ಆಕಾಶ

ತುಕ್ಕಪ್ಪ ಮಾಸ್ತರ

ಬೆಕ್ಕು ಮತ್ತು ಇತರ ಕಥೆಗಳು

ಕಾದಂಬರಿ

ಗೋಹರಜಾನ್ ಮಾಲತಿ ಮತ್ತು ನಾನು

ಕೆರೂರುನಾಮಾ

ಯಾತನಾಶಿಬಿರ

ಒಂದು ಕೈಫಿಯತ್

ಚರ್ಚಗೇಟ್

ವಿಮರ್ಶೆ

ಕ್ಷಿತಿಜ

ದಿಂಡಿ

ಗ್ರಹಣ

ಒಂದು ಮನೆಯ ಸುತ್ತ

ಸುರೇಖಾ ಮೇಡಂ, ಇತ್ಯಾದಿ

ಕಲೆ

ಕಲೆ ಮತ್ತು ಕಲಾನುಭುವ

ಸಾಹಿತ್ಯ ಮತ್ತು ಚಿತ್ರಕಲೆ

ಕಲಾರಂಗ(ಮರಾಠಿ ಅನುವಾದ)

ಅನುವಾದ

ಅನಂತಮೂರ್ತಿಯವರ 'ಸಂಸ್ಕಾರ' (ಹಿಂದಿಗೆ)

ಆಲನಹಳ್ಳಿಯವರ 'ಕಾಡು'(ಹಿಂದಿಗೆ)

ಪ್ರಶಸ್ತಿ ಪುರಸ್ಕಾರಗಳು

'ರೇಶಮ ಕಿ ಗುಡಿಯಾ' ಕಥಾ ಸಂಕಲನಕ್ಕೆ ಕೇಂದ್ರ ಸರಕಾರದ ಗೌರವ ಪುರಸ್ಕಾರ

(ಹಿಂದಿ ಮಾತೃಬಾಷೆಯಲ್ಲದವರು ಬರೆದ ಹಿಂದಿ ಕೃತಿಗೆ ಕೊಡುವ ಪುರಸ್ಕಾರ)

'ಸಂಸ್ಕಾರ' ಕಾದಂಬರಿಯ ಹಿಂದಿ ಅನುವಾದಕ್ಕಾಗಿ ಕೇಂದ್ರ ಸರಕಾರದ ಪುರಸ್ಕಾರ

'ಸಂಸ್ಕಾರ' ಕಾದಂಬರಿಯ ಹಿಂದಿ ಅನುವಾದಕ್ಕಾಗಿ ಉತ್ತರ ಪ್ರದೇಶದ ಭಾಷಾಸಂಸ್ಥಾನದಿಂದ ಪ್ರಶಸ್ತಿ.

ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ 3 ಸಲ ಪುಸ್ತಕ ಬಹುಮಾನ

ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಪುಸ್ತಕ ಬಹುಮಾನ

ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ

ಕರ್ನಾಟಕ ನಾಟಕ ಅಕಾಡೆಮಿ ಗೌರವ ಪ್ರಶಸ್ತಿ

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ–2013

ಚಿತ್ರಕಲಾ ಪ್ರದರ್ಶನ

ಮುಂಬಯಿ, ದಿಲ್ಲಿ, ಕೋಲ್ಕತ್ತಾ, ಬೆಂಗಳೂರು, ಮೈಸೂರು.

ದೇಶ ಮತ್ತು ವಿದೇಶದ ಕಲಾ ಸಂಗ್ರಹಕಾರರಲ್ಲಿ–ಕಲಾಕೃತಿಗಳ ಸಂಗ್ರಹ

ಬಲ್ಲ ಭಾಷೆಗಳು

ಕನ್ನಡ, ಮರಾಠಿ, ಹಿಂದಿ, ಉರ್ದು, ಇಂಗ್ಲೀಷ

ಆಸಕ್ತಿ

ಶಾಸ್ತ್ರೀಯ ಸಂಗೀತ ಕೇಳುವುದು,

ಕಲಾಕೃತಿಗಳನ್ನು ರಚಿಸುವುದು

ಹೀಗೆ ಬಹುಶಿಸ್ತಿನ ವ್ಯಕ್ತಿತ್ವ ಹೊಂದಿರುವ ಇವರು ಕಾವ್ಯ, ಕಥೆ, ಕಾದಂಬರಿ, ಅಸಂಗತ ನಾಟಕ, ವಿಮರ್ಶೆ, ಅಲ್ಲದೆ ಚಿತ್ರಕಲಾವಿದರಾಗಿ ಅಗಾಧ ಸೇವೆ ಮಾಡಿದ್ದಾರೆ. ಲಕ್ಷಾಂತರ ಸಹೃದಯ ಓದುಗರನ್ನು ಹೊಂದಿರುವ ಚಂದ್ರಕಾಂತ ಕುಸನೂರರವರು ಸದ್ಯ ಬೆಳಗಾವಿಯಲ್ಲಿ ವಾಸವಾಗಿದ್ದಾರೆ. ಇಂದಿಗೂ ಓದುವ ಮತ್ತು ಚಿತ್ರ ಬಿಡಿಸುವ ಹವ್ಯಾಸವನ್ನು ಉಳಿಸಿಕೊಂಡಿದ್ದಾರೆ. ಪ್ರಾಥಮಿಕ ಶಾಲಾ ಶಿಕ್ಷಕರಾಗಿ, ತಮ್ಮ ವೃತ್ತಿ ಜೀವನವನ್ನು ಆರಂಭಿಸಿ, ಕಾಲೇಜು ಉಪನ್ಯಾಸಕರಾಗಿ ನಂತರ, ಕನ್ನಡ ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾಗಿ ನಿವೃತ್ತಿ ಹೊಂದಿದರು. ಈಗ ಅವರಿಗೆ ಎಂಬತ್ತಾನಾಲ್ಕರ ಪ್ರಾಯ. ಪತ್ನಿ ಸರೋಜನಿ, ಹಾಗೂ ವಿಜಯ, ಗುರುರಾಜ, ಸಂತೋಷ, ರಾಘವೇಂದ್ರ ಎಂಬ ನಾಲ್ವರು ಪುತ್ರರು, ಶೋಭಾ ಎಂಬ ಓರ್ವ ಪುತ್ರಿಯನ್ನು ಒಳಗೊಂಡ ತುಂಬು ಕುಟುಂಬ ಇವರದು.

ಅಡಿ ಟಿಪ್ಪಣಿಗಳು :

೧) 'ಅವಿಭಕ್ತ' ಪು.ಸಂ–270

ಅಧ್ಯಾಯ–3

ಕುಸನೂರರವರ ಕಾದಂಬರಿಗಳ ವಸ್ತು ಸ್ವರೂಪ

ಕಾದಂಬರಿಗಳನ್ನು ಕುರಿತು ಅಧ್ಯಯನ ಮಾಡುವಾಗ ಅದರ ವಸ್ತು ಸ್ವರೂಪದ ಬಗ್ಗೆ ಅರಿಯುವುದು ತುಂಬಾ ಅಗತ್ಯವಾದದು. "ಘಟನೆಗಳೊಡನೆ ಮತ್ತು ಕ್ರಿಯೆಗಳೊಡನೆ ಅನುಭವಿಸಿದ ಮತ್ತು ಸಂಗತಿಗಳೊಡನೆ ಕಾದಂಬರಿ ವ್ಯವಹರಿಸುತ್ತದೆ. ಅವುಗಳನ್ನು ಸಾಮಾನ್ಯವಾಗಿ ಸಂವಿಧಾನವೆಂದು ಕರೆಯಲಾಗುತ್ತದೆ".[1]

ಚಂದ್ರಕಾಂತ ಕುಸನೂರರವರ ಕಾದಂಬರಿಗಳು ಕನ್ನಡ ಕಾದಂಬರಿ ಲೋಕಕ್ಕೆ ಒಂದು ವಿಶಿಷ್ಟ ಕೊಡುಗೆಗಳಾಗಿವೆ. ಹೈದರಾಬಾದ ಕರ್ನಾಟಕದ ಭಾಷಾ ಶೈಲಿ ಸೌರಭವನ್ನು ಇಡೀ ಕರುನಾಡ ತುಂಬೆಲ್ಲಾ ಪಸರಿಸುವಂತೆ ಮಾಡಿವೆ. ಅವರ ಉರ್ದು ಮಿಶ್ರಿತ ಭಾಷೆಯು ಓದುಗರ ಮನ ಮುಟ್ಟುತ್ತದೆ. ಅವರ ಕಾದಂಬರಿಗಳಲ್ಲಿ ವಿಶಿಷ್ಟ ಭಾಷಾ ಶೈಲಿಯೊಂದಿಗೆ ಶೃಂಗಾರ, ಹಾಸ್ಯರಸವೂ ಕಾಣಿಸಿಕೊಳ್ಳುತ್ತದೆ. ಅವರ ಕಾದಂಬರಿಗಳಲ್ಲಿ ಬರುವ ಗಜಲ್‌ಗಳು, ಶಾಯರಿಗಳು ಓದುಗರನ್ನು ಬೇರೊಂದು ಲೋಕಕ್ಕೆ ಕರೆದೊಯ್ಯುತ್ತವೆ. ಅವರ ಕಾದಂಬರಿಗಳಲ್ಲಿ ಸ್ತ್ರೀ–ಪುರುಷರ ಜೊತೆ ಅಲ್ಲಿನ ಭೌಗೋಲಿಕ ಕ್ಷೇತ್ರವು ಕೂಡ ಒಂದು ಜೀವಂತಿಕೆಯ ಪಾತ್ರದಂತೆ ಸೃಷ್ಟಿಯಾಗಿದೆ.

ಕುಸನೂರರವರು ತಮ್ಮ ಕಾದಂಬರಿಗಳಲ್ಲಿ ಜಾತಿ–ಜಾತಿಗಳ ನಡುವಿನ ತಿಕ್ಕಾಟವನ್ನು, ಧರ್ಮಗಳ ನಡುವಿನ ಘರ್ಷನೆಯನ್ನು, ವಿಧವೆಯ ಹೋರಾಟವನ್ನು, ಪ್ರೇಮ–ಕಾಮದ ನಡುವಿನ ತೊಳಲಾಟವನ್ನು, ದಾಂಪತ್ಯದ ಸುಖವನ್ನು, ಆದರ್ಶ ಮತ್ತು ವಾಸ್ತವದ ನಡುವಿನ ಸತ್ಯತೆಯನ್ನು ಓದುಗರ ಮನ ಮುಟ್ಟುವಂತೆ ಚಿತ್ರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಒಂದೊಂದು ಕಾದಂಬರಿಗಳ ವಸ್ತು ಸ್ವರೂಪವನ್ನು ಇಲ್ಲಿ ಪರಿಚಯಿಸಲಾಗಿದೆ.

1)'ಕೆರೂರು ನಾಮಾ'

ಇದೊಂದು ಪಾತ್ರಗಳ ಆಧಾರಿತ ಕಾದಂಬರಿಯಾಗಿದೆ. ಬಾಬರನಾಮಾಗಳಂತೆ ಆಯಾ ಚಕ್ರವರ್ತಿಗಳ ಜೀವನ ಚರಿತ್ರೆ, ನಾಗರಿಕ ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲುತ್ತದೆ. ಈ ಕಾದಂಬರಿಗಳಲ್ಲಿ ಬರುವ ಪ್ರಮುಖವಾದ ಪಾತ್ರಗಳೆಂದರೆ–ತುಳಸಕ್ಕ, ಅಂಬಕ್ಕ, ಕಿಶನರಾಯ, ಊರಿನಗೌಡ, ಕೆರೂರು ಮಠದ ಸ್ವಾಮಿ, ಶಾಂತಾರಾಮ, ನಿಂಗಿ, ರಾಮಾಚಾರಿ, ಗುಂಡಣ್ಣ, ಫಂಡರಿ, ಮೌಲಾಲಿ, ಕಿಟ್ಟಾಬಾಯಿ, ಮತ್ತು ಶೇಷಾಚಲ ಈ ಪಾತ್ರಗಳ ಮೂಲಕ ಕೆರೂರು ಗ್ರಾಮದ ಜನಜೀವನ, ಅಲ್ಲಿನ ಸಂಸ್ಕೃತಿ ಮತ್ತು ನಾಗರಿಕತೆ ಚಿತ್ರಿತವಾಗಿದೆ.

ಇಲ್ಲಿ ತುಳಸಕ್ಕ ಎಂಬ ಬಾಲ ಬ್ರಾಹ್ಮಣ ವಿಧವೆಯು ಪಡುವ ಸಂಕಟವನ್ನು ಮನಕಲಕುವಂತೆ ಚಿತ್ರಿತವಾಗಿದೆ. ತುಳಸಕ್ಕ ತನ್ನ ಎಳೆ ವಯಸ್ಸಿನಲ್ಲಿ ವಿಧವೆಯಾದರು, ಸಕೇಶಿಯಾಗಿ ಉಳಿದು, ಅಂದಿನ ವೈದಿಕ ಸಮಾಜದ ಆಚರಣೆಗೆ ವಿರುದ್ಧವಾಗಿ ಈಜುತ್ತಾಳೆ. ತನಗೆ ಬರಬೇಕಾದ ಪಾಲನ್ನು ಪಡೆದು, ತನ್ನ ಪಾಲಿಗೆ ಬಂದ ಹೊಲದಲ್ಲಿ ದುಡಿದು, ತಕ್ಕ ಮಟ್ಟಿಗೆ ಆಸ್ತಿವಂತಳಾಗಿ ತನ್ನ ವ್ಯಕ್ತಿತ್ವವನ್ನು ತಾನೆ ನಿರೂಪಿಸಿಕೊಳ್ಳುತ್ತಾಳೆ. ನಾನೊಬ್ಬ ಸ್ವತಂತ್ರ ಹೆಣ್ಣು, ನಾನು ಯಾರ ತಾಳಕ್ಕು ಕುಣಿಯುವವಳು ನಾನಲ್ಲ ಎಂದು ಜಡ್ಡುಗಟ್ಟಿದ ಸಮಾಜಕ್ಕೆ ಸವಾಲು ಹಾಕುತ್ತಾಳೆ. ಆದರೆ ಕೊನೆಗೆ ಬಲಾತ್ಕಾರವಾಗಿ ಆತ್ಮಹತ್ಯೆಗೆ ಶರಣಾಗುತ್ತಾಳೆ.

ಅಂಬಕ್ಕ ಅರ್ಥಾತ ಅಂಬಾಭವಾನಿ ಎಂದು ಗಂಡಸು ಅಲ್ಲದ ಫಂಡರಿಯ ಹೆಂಡತಿ. ಕಿಶನರಾಯನ ಹೆಂಡತಿ ಅಲ್ಲದಿದ್ದರೂ ಒಂದರ್ಥದಲ್ಲಿ ಕಿಶನರಾಯನ ಹೆಂಡತಿ. ಈ ಹಾದರವನ್ನು ಮುಚ್ಚಿಡಲು ಸಮಾಜದಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ತನ್ನ ಮೈಯೊಳಗೆ ದೇವಿ ಬರುತ್ತಾಳೆ ಎಂಬ ಆಟದಿಂದ, ಇಡೀ ಕೆರೂರು ಜನರನ್ನು ಆಟ ಆಡಿಸುತ್ತಾಳೆ. ಅವಳ ಶಾಪದಿಂದ ಮೌಲಾಲಿಯ ಟಾಂಗಾದ ಕುದರೆ ಸತ್ತಿತೆಂದು ಹೇಳಿ, ಮೌಲಾಲಿ ಅವಳ ಪರಮಶಿಷ್ಯನಾಗುತ್ತಾನೆ. ಅಂಬಕ್ಕ ಅದೇ ಊರಿನ ಗೌಡನಿಗೂ ಮತ್ತು ಮಠದ ಸ್ವಾಮಿಗೂ ಶಾಪವನ್ನು ನೀಡುತ್ತಾಳೆ. ಒಂದು ದಿನ ಅಶಕ್ತತೆಯಿಂದ ಬಳಲುತ್ತಿದ್ದ ಗೌಡನಿಗೆ ಯಾವುದೇ ಔಷಧಿ ಪ್ರಯೋಜನವಾಗದೇ ಇದ್ದಾಗ, ಹಕೀಮ ರೊಬ್ಬರ ಯುನಾನಿ ಔಷಧಿಯಿಂದ ಆರೋಗ್ಯ ಸುಧಾರಿಸತೊಡಗಿದಾಗ ಯುನಾನಿ ವೈದ್ಯರು ಹೇಳಿದ ಊಟ–ತಿಂಡಿಯ ಪಥ್ಯವನ್ನು ಪಾಲಿಸಿದ ಆದರೆ ಹಾಸಿಗೆ ಪಥ್ಯವನ್ನು ಪಾಲಿಸದೇ ಹೋದದ್ದು ಅವನಿಗೆ ಮುಳ್ಳಾಗಿ ಅದಕ್ಕೆ ಬಲಿಯಾಗಿ ಹೋದನು.

ಗೌಡನು ಅಂಬಾಬಾಯಿಯ ಹೇಳಿಕೆಯಿಂದ ಸತ್ತನು ಎಂದು ತೀರ್ಮಾನಿಸಿದ ಕೆರೂರಿನ ಜನ ಅವಳ ಮನೆಯನ್ನು ಸುಡುತ್ತಾರೆ. ಇದನ್ನು ಮೊದಲೇ ಅರಿತಿದ್ದ ಅಂಬಕ್ಕ ಅಪಾಯದಿಂದ ಪಾರಾಗಿ ಕೆರೂರನ್ನು ಬಿಟ್ಟು ಹೋಗುತ್ತಾಳೆ. ಆದರೆ ವಿಧಿಯ ಆಟವೇ ಬೇರೆಯಾಗಿರುತ್ತದೆ. ಅದೆಷ್ಟು ದಿನ ತನ್ನ ಮಂತ್ರ–ತಂತ್ರಗಳಿಂದ ಜನರನ್ನು ಮೋಸಗೊಳಿಸಲು ಸಾಧ್ಯ ಕೊನೆಗೆ ಒಂದು ದಿನ ಅತ್ಯಂತ ಹೀನಾಯ ಸ್ಥಿತಿಯಲ್ಲಿ ಆಸ್ಪತ್ರೆಯಲ್ಲಿ ಕೊನೆಯ ಉಸಿರು ಎಳೆಯುತ್ತಾಳೆ.

ಕೆರೂರಿನ ಮಠದ ಸ್ವಾಮಿಗಳು ಆ ಊರಿನ ಮತ್ತೊಬ್ಬ ಗಣ್ಯವ್ಯಕ್ತಿಗಳು ಸ್ವಾಮಿಗಳ ಆಸಕ್ತಿಗಳು ಮಠದ ನಿಯಮಗಳಿಗೆ ಹೊಂದಾಣಿಕೆ ಆಗುತ್ತಿರಲಿಲ್ಲ. ಸ್ವಾಮಿಜಿಗೆ ಸಂಗೀತ ಮತ್ತು ಸಾಹಿತ್ಯಗಳೊಂದಿಗೆ ಇನ್ನೂ ಅನೇಕ ಸಂಗತಿಗಳು ಆಕರ್ಷಿತವಾಗಿದ್ದವು. ಇದರಿಂದ ಕೆಲವು ಭಕ್ತರಿಗೆ ಅಸಮಾಧಾನವಿತ್ತು. ಸ್ವಾಮಿಜಿಯು ಕೂಡ ಸನ್ಯಾಸತ್ವದ ಕಡೆಗೆ ತಮ್ಮ ಆಸಕ್ತಿಯನ್ನು ಕಡಿಮೆ ಮಾಡಿಕೊಂಡಿದ್ದರು.ಅದೇ ಊರಿನ ಅಮರಾಂಬಿಕೆಯ ನಡುವೆ ಸಖ್ಯ

ಬೆಳೆಯಿಸಿಕೊಂಡರು. ಸ್ವಾಮೀಜಿಯವರ ಮಾತು, ಪ್ರವಚನ ಮಾಡುವ ಶೈಲಿ, ಅವರ ಪಾಂಡಿತ್ಯ, ನಯ-ವಿನಯಗಳು ಅಮರಾಂಬಿಕೆಯನ್ನು ಮುತ್ತಿಕೊಂಡರೆ, ಅಮರಾಂಬಿಕೆ ಸೌಂದರ್ಯ ಸ್ವಾಮಿಜಿಯನ್ನು ಬೆಂಬಿಡದೇ ಕಾಡುತ್ತಿತ್ತು. ಒಂದು ದಿನ ಅವರಿಬ್ಬರೂ ಕಾಣೆಯಾದ ಸುದ್ಧಿ ಕೆರೂರು ತುಂಬೆಲ್ಲಾ ಹಬ್ಬಿತು.

ಶಾಂತಾರಾಮ ಮತ್ತು ನಿಂಗಿಯ ನಡುವಿನ ಸಂಬಂಧ ಈ ಸಂಬಂಧ ಶಾಶ್ವತವಲ್ಲ ಎಂಬುದು ಅರಿವಿದ್ದರೂ ನಿಂಗಿ ಶಾಂತಾರಾಮನ ಪ್ರೀತಿಗೆ ಮನಸೋಲುತ್ತಾಳೆ. ಒಂದು ದಿನ ಶಾಂತಾರಾಮನಿಗೆ ಹಾವು ಕಡಿದಾಗ ತನ್ನ ಜೀವವನ್ನು ಲೆಕ್ಕಿಸದೇ ತನ್ನ ಬಾಯಿಯಿಂದಲೇ ವಿಷ ತೆಗೆಯುತ್ತಾಳೆ. ಕೆಳವರ್ಗದ ಈ ಹೆಣ್ಣು ಮಗಳ ತ್ಯಾಗ ಎಂತಹವರನ್ನು ನಿಬ್ಬೆರೆಗಾಗುವಂತೆ ಮಾಡುತ್ತದೆ.

ಈ ಕಾದಂಬರಿಯು ವೈದಿಕ ಸಮಾಜದ ವಿಧವೆಯು ಅನುಭವಿಸುವ ನೋವುಗಳನ್ನು ಅವಳ ಹೋರಾಟದ ಬದುಕನ್ನು ಕೊನೆಗೆ ಅವಳು ಆತ್ಮಹತ್ಯೆಗೆ ಶರಣಾಗಿದ್ದದು ಎಂತಹ ದುರಂತ ಎಂಬುದುನ್ನು ತೋರಿಸುತ್ತದೆ ಅಂಬಕ್ಕನ ಆಡಂಭರದ ಭಕ್ತಿ, ಸ್ವಾಮಿಯ ಚಂಚಲ ಮನಸ್ಸು, ಗೌಡನ ಚಪಲತೆ, ರಾಮಾಚಾರಿಯಂತಹ ಮೋಸಗಾರನ ಕುತಂತ್ರ, ನಿಂಗಿ ಚೆಲವು ಮುಂತಾದ ಅಂಶಗಳೆಲ್ಲವು ಇಂದಿನ ಸಮಾಜಕ್ಕೆ ಹಿಡಿದ ಕೈಗನ್ನಡಿಯಾಗಿದೆ.

2] ಗೋಹರಜಾನ, ಮಾಲತಿ ಮತ್ತು ನಾನು :

ಈ ಕಾದಂಬರಿಯು ಕೌಟುಂಬಿಕ ಕಲಹಗಳು, ಜಾತಿ-ಜಾತಿಗಳ ನಡುವಿನ ವೈಷಮ್ಯಗಳು, ಮೇಲ್ಜಾತಿ ಮತ್ತು ಕೆಳಜಾತಿಯ ನಡುವಿನ ಮೇಲು-ಕೀಳು ಭಾವನೆಗಳು, ಹೆಣ್ಣಿನ ಆಕ್ರಂದನಗಳು, ಶ್ರೀಮಂತರ ದೌರ್ಜನ್ಯಗಳು ಮುಂತಾದ ಅಂಶಗಳ ಮೇಲೆ ಬೆಳಕು ಚೆಲ್ಲುತ್ತದೆ. ಇಲ್ಲಿ ಲೇಖಕರ ಜೀವನದಲ್ಲಿ ಬರುವ ನಾಲ್ಕು ಜನ ಸ್ತ್ರೀಯರ ಪಾತ್ರಗಳ ಬಹಳಷ್ಟು ಕುತೂಹಲಕಾರಿಯಾಗಿವೆ. ಬಾಲ್ಯದ ಗೆಳತಿ ಚಂದಿ, ಅವಳ ಜೊತೆಗಿನ ಒಡನಾಟ ಒಂದೆಡೆಯಾದರೆ, ಅರ್ಧಾಂಗಿನಿ ಸಾವಿತ್ರಿಯ ಪ್ರೀತಿ, ಸುಖಸಂಸಾರ ಮತ್ತೊಂದು ಕಡೆ ; ಮಾಲತಿಯ ಜೊತೆಗಿನ ಪ್ರೇಮ ಒಂದೆಡೆಯಾದರೆ, ಗೋಹರಜಾನ ಮೇಲಿನ ಆಸಕ್ತಿ ಮತ್ತೊಂದು ಕಡೆ ಹೀಗೆ ಕುತೂಹಲ ಹುಟ್ಟಿಸುತ್ತಾ ಸಾಗುವ ಕಥೆ ಒಂದೆಡೆಯಾದರೆ, ಚಂದಿಯ ಗೋಳಾಟ, ಗೋಹರಜಾನ ಅನುಭವಿಸುವ ದೌರ್ಜನ್ಯ, ಮಾಲತಿ ಅನುಭವಿಸುವ ಶೋಷಣೆ ಮತ್ತೊಂದು ಕಡೆ ನಿರೂಪಿತಗೊಂಡಿದೆ. ಈ ಕಾದಂಬರಿಯ ಮತ್ತೊಂದು ವಿಶೇಷವೇನೆಂದರೆ ಕಲಬುರ್ಗಿ ಮತ್ತು ಹೊಸೂರಿನ ವರ್ಣನೆಗಳು. ಕಲಬುರ್ಗಿಯ ಭೌಗೋಳಿಕ ಕ್ಷೇತ್ರವೂ ಒಂದು ಜೀವಂತ ಪಾತ್ರದಂತೆ ರೂಪಿತವಾಗಿದೆ.

ಈ ಕಾದಂಬರಿಯಲ್ಲಿ ಜಾತ್ಯಾತೀತತೆಯ ಸಂದೇಶವು ಕಾಣಸಿಗುತ್ತದೆ. ಲಿಂಗಾಯತರ ದೇವರು ಸಿದ್ದೇವಪ್ಪ ಬ್ರಾಹ್ಮಣ ತಮ್ಮಣ್ಣರಾಯನ ಮನೆಯಿಂದಲೇ ಪ್ರಥಮ ನೈವೇದ್ಯ ಬಯಸುತ್ತಾನೆ. ಆಗ 'ಕುಲಕರ್ಣಿ ತಮ್ಮಣ್ಣರಾಯ' ಬ್ರಾಂಬ್ರ ಕುಲದಾಗ ಹುಟ್ಟಿದಾವ, ನಮ್ಮ ಸಿದ್ದೇವಪ್ಪ ಲಿಂಗವಂತ ನಮ್ಮ ಸಮಾಜದಲ್ಲಿ ಬ್ರಾಂಬ್ರ ಮಾಡಿದ ಅಡಿಗೆ ನಾವು ಉಂಬಾಗಿಲ್ಲ. ಆದ್ರೇ ನಮ್ಮ ಸಿದ್ದೆವಪ್ಪ, ಸ್ವತಃ ಬ್ರಾಂಬ್ರ ವೆಂಕೂಬಾಯಿ ಮಾಡಿದ ಕರಿಗಡಬು ತಿಂದು ಜಾತಿ ಅಂಬೋ ಮಾತು ಸುಳ್ಳೆಂದು ತೋರಿಸಿಕೊಟ್ಟ. ದೇವರು ಸ್ವತಃ ಸಮತಾವಾದ ಬೋಧಿಸಿದ. ಇಂದ ಮಹಾತ್ಮಾಗಾಂಧಿ ಹೇಳಿದ ಮಾತು ನಮ್ಮ ಸಿದ್ದೇವಪ್ಪ ಎಂದೋ ಹೇಳಿ ಸಮಾಜವಾದ ಅಂದ್ರ ಹ್ಯಾಂಗೀರತಾಯ್ತಿ ಅಂತಾ ತೋರಿಸಿಕೊಟ್ಟ. ಭಕ್ತಿ ಮುಖ್ಯರೆಪ ಜಾತಿ ಮುಖ್ಯವಲ್ಲ"[5] ಹೀಗೆ ಜಾತ್ಯಾತೀತತೆ ಸಂದೇಶವನ್ನು ಕೂಡ ಈ ಕಾದಂಬರಿಯು ಸಾರುತ್ತದೆ.

ಕಥಾ ನಾಯಕನು ಬ್ರಾಹ್ಮಣ. ಬ್ರಾಹ್ಮಣ-ಬ್ರಾಹ್ಮಣರ ನಡುವಿನ ತಂತ್ರ, ಕುತಂತ್ರಗಳು, ಬ್ರಾಹ್ಮಣರ ಬಡತನ,ಅವರು ಅನಭವಿಸುವ ನೋವುಗಳು, ಜಾತಿಯ ಅಧಿಕಾರ ಮುಂತಾದ ಅಂಶಗಳ ಪರಿಚಯವನ್ನು ಈ ಕಾದಂಬರಿ ಮಾಡಿಕೊಡುತ್ತದೆ.

ಕಥಾ ನಾಯಕನ ಬಾಲ್ಯದ ಗೆಳತಿ ಚಂದ್ರಿಯ ಜೊತೆಗಿನ ಒಡನಾಟವು ನಿಷ್ಕಲ್ಮಶ ಸ್ನೇಹದ ಸಂಕೇತವಾಗಿದೆ. ಆದರೆ ಪತ್ನಿಯ ಜೊತೆಗಿನ ಪ್ರೀತಿಯು ಸುಖ ಸಂಸಾರದ ಸಂಕೇತ. ಮದುವೆಯಾದರೂ ಮಾಲತಿ ಎಂಬ ನೇರ ದಿಟ್ಟ ನುಡಿಗೆ ಹೆಸರುವಾಸಿಯಾದ ಪದವಿಧರೆಯ ಜೊತೆಗಿನ ಪ್ರೇಮ, ಅವಳು ತನ್ನ ದೇಹವನ್ನು ಮಾರಿಕೊಳ್ಳಲು ಬಾಂಬೆಗೆ ಹೋದಾಗ ಇವರು ಅನುಭವಿಸುವ ನೋವುಗಳು, ಮತ್ತೇ ಗೋಹರಜಾನ ಎಂಬ ಸಂಗೀತ ಆರಾಧಕಳ ಪರಿಚಯ, ಅವಳ ಮೇಲಿನ ಆಸಕ್ತಿ, ಅವಳೂ ಬಿಟ್ಟು ಹೋದಾಗ ಕಥಾನಾಯಕನ ತೊಳಲಾಟ, ಜಾತಿ-ಜಾತಿಗಳ ನಡುವಿನ ಲೆಕ್ಕಾಚಾರ, ಸ್ವಾರ್ಥಕ ಹಳಿಯ ಮೇಲೆ ಸಾಗುವ ರೈಲಿನಂತೆ ಈ ಜೀವನ ಎಂಬ ಅಂಶಕ್ಕೆ ಒತ್ತು ನೀಡಲಾಗಿದೆ.

3] ಯಾತನಾ ಶಿಬಿರ

'ಚಂದನಕೇರಿ' ಒಂದು ಚಿಕ್ಕ ಊರು. ಮಾರಿಕಾಂಬಾ ಆ ಊರಿನ ದೇವರು. ದಟ್ಟಗಿಡಗಳಿಂದ ಆವರಿಸಲ್ಪಟ್ಟ ಊರು ಚಂದನಕೇರಿ. ಅತ್ಯಂತ ರಮ್ಯವಾದ ಗ್ರಾಮ ದೃಷ್ಠಿ ಹೊರಳಿಸಿದ ಕಡೆಗೆಲ್ಲ ಹಸಿರು. ಊರ ಮುಂದೆ 'ಜಲಜಾಕ್ಷಿ' ಹೆಸರಿನ ಒಂದು ಚಿಕ್ಕ ಹಳ್ಳ ಹರಿಯುತ್ತಿತ್ತು. ಹರಿಯುವ ನೀರಿನಲ್ಲಿ ದಟ್ಟ ಹಸಿರು ಗಿಡಗಂಟಿಗಳ ಪ್ರತಿಬಿಂಬದಿಂದ ಒಂದು ರೀತಿಯ ರಮ್ಯ ಮೋಡಿಯ ಪ್ರಭಾವ ಕಾಣಿಸುತ್ತಿತ್ತು. ಗಿಡಗಳಲ್ಲಿ ಅಸಂಖ್ಯಾತ ಹಕ್ಕಿ-ಪಕ್ಷಿಗಳ ಹಾರಾಟ, ಅವುಗಳ ಇಂಚರ ಮುಕ್ತ ಆಕಾಶದಲ್ಲಿ ವಿಹಾರ ಇದರಿಂದಾಗಿ ಚಂದನಕೇರಿ ಒಂದು ಪಕ್ಷಿಧಾಮದಂತೆ ಕಾಣಿಸುತ್ತಿತ್ತು.

ಇಂತಹ ಸುಂದರವಾದ ಹಳ್ಳಿಯು ಬರಗಾಲ, ಕಾಲರಾ, ಒಳಜಗಳಗಳಿಂದ 'ಯಾತನಾ ಶಿಬಿರ'ವಾಗಿ ಹೇಗೆ ಪರಿವರ್ತನೆಯಾಯಿತು ಎಂಬುವುದನ್ನು ಅತ್ಯಂತ ಸರಳವಾದ ನಿರೂಪಣೆ ಮತ್ತು ಕಥಾ ಪಾತ್ರಗಳ ಸಹಾಯದಿಂದ ಲೇಖಕರು ಓದುಗರನ್ನು 'ಯಾತನಾ ಶಿಬಿರಕ್ಕೆ' ಕರೆದುಕೊಂಡು ಹೋಗುತ್ತಾರೆ.

ಈ ಕಾದಂಬರಿಯಲ್ಲಿ ದೀಕ್ಷಿತರ ಕುಟುಂಬ, ಗೌಡರ ಕುಟುಂಬ, ಸಾಹುಕಾರ ಶಾಮಣ್ಣರ ಕುಟುಂಬ, ಶಾರಿಯ ಕುಟುಂಬ, ದಲಿತರ ಕುಟುಂಬಗಳು ಹೀಗೆ ಹತ್ತಾರು ಸಂಸಾರಗಳ ವೈವಿಧ್ಯಮಯಯಾದ ಚಿತ್ರಗಳನ್ನು ತುಂಬಿಕೊಂಡು ಊರು ಜೀವ ತುಂಬಿ ತುಳುಕಾಡುತ್ತಿತ್ತು ನಿಸರ್ಗದ ಮಡಿಲಲ್ಲಿ ಸದಾ ಹಕ್ಕಿ-ಪಕ್ಷಿಗಳ ಇಂಚರದಲ್ಲಿ 'ಜಲಜಾಕ್ಷಿ'ಯ ನೆರಳಿನಲ್ಲಿ ಚಂದದ ಕೇರಿಯಾಗಿದ್ದ 'ಚಂದನಕೇರಿ' ಕ್ರಮೇಣ 'ಯಾತನಾಶಿಬಿರ' ವಾಗಿ ಪರಿಣಮಿಸುವ ದರ್ಶನವೇ ಧ್ವನಿ ಪೂರ್ಣವಾಗಿದೆ.

ಕಥಾ ನಾಯಕನು ಕಾಲೇಜು ಶಿಕ್ಷಕನಾಗಿ ಚಂದನಕೇರಿಗೆ ಬರುತ್ತಾನೆ ಚಂದನಕೇರಿ ರಮ್ಯತೆಯಿಂದ ಅವನು ಆಕರ್ಷಿತನಾಗುತ್ತಾನೆ ಆದರೆ ಬರಬರುತ್ತಾ ಅದೊಂದು ಯಾತನೆಯ ಶಿಬಿರವಾದಾಗ, ಊರಿನ ಜನರೆಲ್ಲರೂ ಆ ಊರನ್ನೂ ಬಿಟ್ಟು ತೆರಳಿದಾಗ ಕೊನೆಗೆ ತಾನೂ ಆ ಚಂದನಕೇರಿ ಬಿಟ್ಟು ಹೋಗುತ್ತಾನೆ. ತಾನೊಬ್ಬ ಬ್ರಾಹ್ಮಣನಾಗಿದ್ದರೂ ದಲಿತರಕೇರಿಗೆ ಹೋಗಿ, ಆಹಾರ ಸೇವಿಸುತ್ತಾನೆ ಅವನ ಮನ ಪರಿವರ್ತನೆಯಾಗಿ, ಸಮಾಜದ ಕಟ್ಟಳೆಗಳೆಲ್ಲವೂ ಅರ್ಥಹೀನವಾಗಿ ಗೋಚಾರವಾಗುತ್ತವೆ.ಅವನೊಬ್ಬ ಹೊಸ ಮನುಷ್ಯನಾಗಿ ಪರಿವರ್ತಿತಗೊಂಡು, ಮಾನವ ಧರ್ಮವೊಂದೇ ನಿಜವಾದ ಧರ್ಮವೆಂದು ಭಾವಿಸುತ್ತಾನೆ. ಚಂದನಕೇರಿ ಒಳಜಗಳಗಳಿಂದ ನೋವನ್ನು ಅನುಭವಿಸುತ್ತಾನೆ ಮತ್ತೇ ಊರಿಗೆ ಬರಗಾಲ ಬಂದಾಗ ಊರಿನ ಜನರಿಗೆ ಧೈರ್ಯ ತುಂಬುವ ಸಾಹಸ ಮಾಡುತ್ತಾನೆ. ಗಾಯದ ಮೇಲೆ ಬರೆ ಎಳೆದಂತೆ ಕಾಲರಾ ಬಂದು ಅಪ್ಪಳಿಸಿದಾಗ ಊರಿನ ಜನ ಭಯಗೊಂಡು ಊರು ಬಿಡುತ್ತಾರೆ ತಾನೊಬ್ಬ ಇಲ್ಲೇ ಉಳಿದು, ಉಳಿದ ಜನರು ಸೇವೆ ಮಾಡಬೇಕೆಂಬ ಪಣ ತೊಟ್ಟು, ದಲಿತಕೇರಿಯಲ್ಲಿ ಕಾಲರಾ ಬಂದಾಗ ಅವರ ಸಹಾಯಕ್ಕೆ ಹೋಗುತ್ತಾನೆ. ತನ್ನೆಲ್ಲ ಬಂಧುಗಳನ್ನು ಕಳೆದುಕೊಂಡು, ತನ್ನ ಹೆಂಡತಿ ಸಾವಿತ್ರಿಯನ್ನು ಕಳೆದುಕೊಂಡು ಕೊನೆಗೆ ನಿರ್ಗತಿಕನಾಗಿ ಊರು ಬಿಡುತ್ತಾನೆ. ಪಟ್ಟಣಕ್ಕೆ ಹೋಗುವಾಗ ಶ್ರೀನಿವಾಸರಾಯನೊಡನೆ ಅವನು ಆಡುವ ಮಾತುಗಳೆಲ್ಲವೂ ಅವನು ಅನುಭವಿಸಿದ ನೋವಿನ ಪ್ರತೀಕವಾಗಿ, ಅವನ ದುಃಖದ ಸಂಕೇತವಾಗಿ, ತಿಳವಳಿಕೆ ದ್ಯೋತಕಗಳಂತೆ ಗೋಚರಿಸುತ್ತವೆ.

4) ಒಂದು ಕೈಫಿಯತ್:

ಇದೊಂದು ಪಾತ್ರಗಳ ಆಧಾರಿತ ಕಾದಂಬರಿ. ಇದರಲ್ಲಿ ಬರುವ ಕಾದಂಬರಿ ನಾಯಕನಾದ ನಾರಾಯಣ ಭಟ್ಟರ ನಿರ್ಲಿಪ್ತ ಬದುಕಿನ ಕಥಾಹಂದರ. ಸಂಗೀತ,ಕಲೆ,ಧರ್ಮ,ಶಾಸ್ತ್ರಗಳಲ್ಲಿ ಪಾರಂಗತನಾದ ನಾರಾಯಣ ಭಟ್ಟರ ಬದುಕು, ಗಾಳಿಗೆ ಸಿಕ್ಕ ಹಡಗಿನಂತೆ, ಹೊಯ್ದಾಟಗಳ ಮೇಲೆಯೇ ಸಾಗುತ್ತದೆ. ಜೀವನ ಎಂಬುದು ಹುಟ್ಟು ಸಾವುಗಳ ಮದ್ಯೆ ನಡೆಯುವ ಸರ್ಕಸ್ ಇದ್ದಂತೆ. ಈ ಕಾದಂಬರಿಯಲ್ಲಿಯೂ ಕೂಡ ನಾರಾಯಣ ಭಟ್ಟರ ಜೀವನವು ಒಂದು ಸರ್ಕಸದಂತೆ ಭಾಸವಾಗುತ್ತದೆ.

ಮದುವೆಯಾದ ಒಂದು ವರ್ಷದಲ್ಲಿ ನಾರಾಯಣ ಭಟ್ಟರ ಮಡದಿ ರೇಖಾ ನಾರಾಯಣ ಭಟ್ಟರ ಕೈಯಲ್ಲಿ ಒಂದು ಗಂಡು ಮಗುವನ್ನು ನೀಡಿ ಅಸು ನೀಗುತ್ತಾಳೆ. ಇವಳ ಸಾವಿನ ಮೂಲಕವೇ ಈ ಕಾದಂಬರಿ ಪ್ರಾರಂಭವಾಗುತ್ತದೆ.ಮಡದಿಯ ಸಾವಿನಿಂದ ಮಾನಸಿಕ ನೋವನ್ನು ತಾಳಲಾರದೇ ಮಗುವನ್ನು ತನ್ನ ತಂಗಿಯ ಮಡಿಲಿಗೆ ಹಾಕಿ, ವಿರಾಗಿಯಾಗಿ ತೀರ್ಥಯಾತ್ರೆ ಕೈಗೊಳ್ಳುವನು. ನಾರಾಯಣ ಭಟ್ಟರ ತೀರ್ಥಯಾತ್ರೆಯು ಕಾಶಿ, ಗಾಣಗಾಪುರ, ಮಾಣಿಕನಗರ, ತುಳಜಾಪುರ ನಗರಗಳನ್ನೆಲ್ಲ ಸುತ್ತಾಡಿ ತನ್ನ ಊರಿಗೆ ಬಂದಾಗ, ಅಲ್ಲಿ ಮತ್ತೊಂದು ಆಘಾತ ಕಾದಿತ್ತು. ಕಾಶಿಯಾತ್ರೆಗೆ ಹೋಗುವಾಗ ಒಂದಿಷ್ಟು ದುಡ್ಡನ್ನು ತೆಗೆದುಕೊಂಡಿದ್ದ. ಆ ದುಡ್ಡಿಗಾಗಿ ನಾರಾಯಣ ಭಟ್ಟರ ಮನೆಯನ್ನೇ ನುಂಗುವ ಪ್ರಯತ್ನದಲ್ಲಿದ್ದ ಸಾಹುಕರ ಅಂಜನಪ್ಪ. ಇದನ್ನ ಅರಿತ ನಾರಾಯಣ ಭಟ್ಟ ಸಾಹುಕರ ಅಂಜನಪ್ಪ ಮನೆಗೆ ನ್ಯಾಯ ಕೇಳಲು ಹೋದಾಗ, ಭಟ್ಟರೇ ನೀವು ಆಗೀಗ ತೀರ್ಥಯಾತ್ರೆಗೆ ಹೋಗುವ ಜನ, ನೀವು ಹೋದ ಮೇಲೆ ಊರಿನ ಹಲ್ಕಾ ಜನರು ಅಲ್ಲಿ ಇಸ್ಪೀಟ್ ಆಡೋಡು, ಶೆರೆಸಿಂದಿ ಕುಡಿಯೋದು ಸುರು ಮಾಡುತ್ತಾರೆ. ಅದಕ್ಕೆ ಆ ಮನೆಗೆ ಬೀಗ ಹಾಕಿಸಿದೆ. ನೀವು ಬೇಕಾದರೆ ನಮ್ಮ ಮನೆಯ ಪಡೆಸಾಲೆಯಲ್ಲಿ ಇರಬಹುದು. ಬೇಕಾದರೆ ಹಿಟ್ಟು, ಅಕ್ಕಿ, ಬೇಳೆ ನಮ್ಮ ಮನೆಯಿಂದ ಕೊಡ್ತಿನಿ ಎಂದು ಹೇಳಿ, ನಾರಾಯಣ ಭಟ್ಟರ ಬಾಯಿ ಮುಚ್ಚಿದರು. ನಾರಾಯಣ ಭಟ್ಟರಿಗೆ ಅಂಜನಪ್ಪ ಮನಸ್ಸಿನ ದುರಾಸೆಯು ಅರಿವಾದರೂ ಏನನ್ನು ಮಾಡದೆ, ಮನೆಯ ಮೇಲೆ ತುಳಸಿ ಪತ್ರವನ್ನಿಟ್ಟು ತಂಗಿಯ ಊರ ಕಡೆ ಹೊರಟರು.

ಇತ್ತ ತಂಗಿ ಕಮಲಳ ಮನೆಗೆ ಬಂದಾಗ, ಅಲ್ಲಿ ತಂಗಿಗೆ ವಿಪರೀತ ಜ್ವರ ಬಂದು ನರಳಾಡುತ್ತಿದ್ದಳು. ಅಣ್ಣ ಬಂದನಂತರ ಅವನ ಕೈಯಲ್ಲಿ ಅವನ ಮಗುವನ್ನು ಹಸ್ತಾಂತರಿಸಿ ಕೊನೆಯುಸಿರೆಳೆದಳು. ತಂಗಿ ಗಂಡ ವೆಂಕಣ್ಣನಿಗೆ ಧೈರ್ಯ ಹೇಳಿ, ಮಗುವಿನೊಂದಿಗೆ ಮತ್ತೆ ತೀರ್ಥಯಾತ್ರೆ ಪ್ರಾರಂಭಿಸಿದರು. ಸಂಚಾರಿ ಜೀವನದಿಂದ ಮತ್ತೇ ಬದುಕಿಗೆ ವಾಪಸಾಗಿದ್ದ ನಾರಾಯಣಭಟ್ಟರನ್ನು ಮತ್ತೆ ವಿಧಿ ಸಂಚಾರಿ ಜೀವನಕ್ಕೆ ಎಳೆದೊಯ್ಯಿತು.

ಬಾಲ್ಯದ ಗೆಳೆಯನಾದ ವಕೀಲ ವಾಮನರಾಯರನ್ನು ಕಾಣಲು ಬೆಂಗಳೂರಿಗೆ ಹೋಗುತ್ತಾನೆ. ಬಾಲ್ಯದ ಗೆಳೆಯನಾದ ನಾರಾಯಣ ಭಟ್ಟರನ್ನು ಕಂಡು ವಾಮನರಾಯರಿಗೆ ತುಂಬಾ ಸಂತೋಷವಾಗುತ್ತದೆ.. ವಾಮನರಾಯರ ಮುಂದೆ ತನ್ನ ಜೀವನ ವೃತ್ತಾಂತ ಹೇಳುತ್ತಾನೆ. ಹಾಗೆಯೇ ನನ್ನ ಮಗನಿಗೊಂದು ಅನಾಥಾಶ್ರಮ ನೋಡಬೇಕೆಂದು ವಿನಂತಿಸಿಕೊಳ್ಳುತ್ತಾನೆ. ಆಗ ವಾಮನರಾಯರು ಊರೂರು ಅಲೆಯುತ್ತ ಜೀವನವನ್ನು ಕಳೆಯುವುದನ್ನು ಬಿಟ್ಟು, ಯಾವುದಾದರೂ ಕೆಲಸ ಮಾಡಿ, ಚೆನ್ನಾಗಿ ಮಗುವನ್ನು ನೋಡಿಕೋ ಎಂದು ಹೇಳುತ್ತಾರೆ. ಆದರೆ ನಾರಾಯಣ ಭಟ್ಟರಿಗೆ ಅವರ ಮಾತು ಹಿಡಿಸಲಿಲ್ಲ. ಮತ್ತೇ ಅಲ್ಲಿಂದ ಅವರ ಸಂಚಾರಿ ಜೀವನ ಪ್ರಾರಂಭವಾಗುತ್ತದೆ.

ಊರೂರು ಅಲೆಯುತ್ತ ದರ್ಗಾದ ಉರುಸು ನಡೆಯುವ ಸ್ಥಳಕ್ಕೆ ಬರುತ್ತಾರೆ. ಭಟ್ಟರ ತಲೆಯಲ್ಲಿ ಒಂದು ವಿಚಾರ ಬಂದಿತು. ಮಗುವನ್ನು ಎತ್ತಿಕೊಂಡು, ನೇರವಾಗಿ ವಲಿಯ ಸಮಾಧಿ ಹತ್ತಿರ ಬಂದರು, ಮಗುವನ್ನು ಗೋರಿಯ ಮುಂದೆ ಮಲಗಿಸಿ, ಗೋರಿಗೆ ಕೈಮುಗಿದರು. ಅಲ್ಲಿಂದ ಮತ್ತೇ ಅವರ ಸಂಚಾರಿ ಜೀವನ ಪ್ರಾರಂಭವಾಯಿತು. ಕಾಡಿನ ದಾರಿಯಲ್ಲಿ ಸಾಗುವಾಗ ನಿತ್ರಾಣವೆನಿಸಿ, ಗಂಟಲು ಒಣಗಿತು. ಕಾಲಿಗೆ ಲಕ್ವಾ ಬಡಿದಂತೆ ಕಂಪಿಸಿದರು. ಪ್ರಜ್ಞೆ ತಪ್ಪಿತು. ಎಚ್ಚರವಾದಾಗ ಮತ್ತೇ ಪಯಣ ಪ್ರಾರಂಭವಾಯಿತು. ಫರ್ಲಾಂಗದಷ್ಟು ದೂರ ಹೋದಾಗ ಯುವತಿಯ ಭೆಟ್ಟಿಯಾಯಿತು. ಅವಳ ಭೆಟ್ಟಿಯಿಂದ ನಾರಾಯಣಭಟ್ಟರ ಜೀವನಕ್ಕೆ ಒಂದು ತಿರುವು ಬಂದಿತು. ಆ ಯುವತಿಯ ಹೆಸರು ತುಂಗಾ. ಅವಳು ನಾರಾಯಣ ಭಟ್ಟರಿಗೆ ಆ ಹೊತ್ತಿನಲ್ಲಿ ಬಿಸಿ ನೀರುಕೊಟ್ಟು, ಕಾಫಿ ಕೊಟ್ಟು ಶುಶ್ರೂಷೆ ನಡೆಸಿದಳು. ಎಂಥ ಮುಗ್ಧ ಹುಡುಗಿ ಇವಳು ನನ್ನನ್ನೇಕೆ ಇಷ್ಟೊಂದು ಪ್ರೀತಿಯಿಂದ ಕಾಣುತ್ತಿರುವಳು ಎಂಬುದು ಅರಿಯದೆ ಗೊಂದಲದ ಗೂಡಾದರು.

ನಾರಾಯಣ ಭಟ್ಟರು ತುಂಗಾನ ಮನೆಯಲ್ಲಿ ಉಳಿಯುವರು. ಅವಳಲ್ಲಿ ಅನುರಕ್ತಗೊಳ್ಳುವರು. ಜೀವನದ ಜಂಜಾಟಗಳಿಂದ ಮುಕ್ತಿ ಪಡೆಯಲು ತನ್ನ ಮಗನನ್ನೇ ದರ್ಗಾದಲ್ಲಿ ಮಲಗಿಸಿ, ಅಧ್ಯಾತ್ಮ ತೀರ್ಥಯಾತ್ರೆ ಎಂದು ಪಯಣಿಸಬೇಕಿದ್ದ ನಾರಾಯಣ ಭಟ್ಟರು ಮತ್ತೇ ಜಂಜಾಟಗಳ ಸುಳಿಗೆ ಸಿಲುಕುವರು. ಅವರಿಬ್ಬರ ನಡುವಿನ ಪ್ರೀತಿ, ಅವರಿಬ್ಬರನ್ನು ಅಲ್ಲಿಂದ ಓಡಿ ಹೋಗುವಂತೆ ಮಾಡಿತು. ಅಲ್ಲಿಂದ ಅವರು ಮಾಯಾನಗರಿ ಮುಂಬೈಯನ್ನು ಸೇರಿಕೊಳ್ಳುತ್ತಾರೆ. ಟ್ರೇನಿನಲ್ಲಿ ಸಲೀಮ ಮತ್ತು ಜುಲೈಖಾರ ಪರಿಚಯವಾಗುತ್ತದೆ. ಮೊದಮೊದಲು ಕಡಲಿನ ದಂಡೆಯ ಮೇಲೆ ಇವರ ಬದುಕು ಜಟಕಾಬಂಡಿಯ ತರಹ ಸಾಗುತ್ತದೆ. ಸಲೀಮ ಪರಿಚಯ ಕಾರ್ಡು ಪಡೆದಿದ್ದ ನಾರಾಯಣ ಭಟ್ಟರು ಅವರನ್ನು ಹುಡುಕುತ್ತಾ ಹೋಗಿ ಅವರ ಮನೆಯಲ್ಲಿ ವಾಸ್ತವ್ಯ ಹೂಡುತ್ತಾರೆ. ಮತ್ತೇ ಕಾದಂಬರಿ ತನ್ನ ತಿರುವು ಪಡೆದುಕೊಳ್ಳುತ್ತದೆ. ಸಲೀಮ ಮತ್ತು ನಾರಾಯಣ

ಭಟ್ಟರ, ತುಂಗಾ ಮತ್ತು ಜುಲೈಖಾಳ ಬೇರೆ ಬೇರೆ ಧರ್ಮವರಾದ ಸಲೀಮ ಮತ್ತು ನಾರಾಯಣಭಟ್ಟರ, ತುಂಗಾ ಮತ್ತು ಜುಲೈಖಾಳ ನಡುವಿನ ಆತ್ಮೀಯತೆಯು ಧರ್ಮವನ್ನು ಮೀರಿ ನಿಲ್ಲುವಂಥದು. ಮನೆಯ ಹೊರಗಡೆ ಕೋಮ ದಳ್ಳುರಿಗಳು ನಡೆದಾಗಲೂ, ಇವರ ಮನೆ ಆತ್ಮೀಯತೆಯ ತಾಣವಾಗಿತ್ತು. ಇಲ್ಲಿ ಮಾನವೀಯ ಪ್ರೀತಿ ಇದ್ದರೆ ಜಗತ್ತೇ ಶಾಂತವಾಗಿರಬಹುದು ಎಂಬುದನ್ನು ಕಾದಂಬರಿಕಾರರು ಪರೋಕ್ಷವಾಗಿ ಸಂದೇಶ ನೀಡಿದ್ದಾರೆ. ಇಂದಿನ ಸಮಾಜದಲ್ಲಿ ಕೋಮು ದಳ್ಳುರಿಗಳು ಹೇಗೆ ಒಂದು ಕ್ಷುಲ್ಲಕ ಕಾರಣಕ್ಕಾಗಿ ಹುಟ್ಟಿಕೊಳ್ಳುತ್ತವೆ ಮತ್ತು ಅದರಿಂದ ತೊಂದರೆ ಅನುಭವಿಸುವ ಜನರು ಸಾಮಾನ್ಯ ಜನರು ಮಾತ್ರ ಎಂಬುದನ್ನು ಮನದಟ್ಟು ಮಾಡುತ್ತದೆ. ಅಷ್ಟೆ ಅಲ್ಲದೆ ಚಿಂತನೆಗೆ ಎಡೆ ಮಾಡಿಕೊಡುತ್ತವೆ. ನಮ್ಮ ಜನ ತಮ್ಮ ಸಮಾಜದ ಒಗ್ಗಟ್ಟು ಶಕ್ತಿ ಮತ್ತು ಸಾಮರ್ಥ್ಯ ತೋರಿಸುವುದು ಇಂತಹ ಸಂದರ್ಭದಲ್ಲಿ ಎಂಬುದನ್ನು ಅರಿತರೆ ಮಾನವೀಯ ಸಂಬಂಧಗಳಿಗೆ ಅರ್ಥವೇ ಇಲ್ಲ ಎಂಬ ಚಿಂತೆ ಕಾಡುತ್ತಲೇ ಇರುತ್ತದೆ. ಮುಂಬೈ ನಗರಿಯ ಜನರ ಬದುಕು ಎಷ್ಟೊಂದು ತರಾತುರಿ ಎಂಬುದನ್ನು ಕಾದಂಬರಿಕಾರರು ಇಲ್ಲಿ ವಿಶ್ಲೇಷಿಸಿದ್ದಾರೆ.

ಕಾದಂಬರಿಯ ಕೊನೆಯಲ್ಲಿ ತುಂಗಾಳಿಗೆ ತನ್ನ ಗಂಡ ಶಂಕರನ ಭೇಟ್ಟಿಯಾಗುತ್ತದೆ. ಇದರಿಂದ ತುಂಗಾ ಮತ್ತು ನಾರಾಯಣ ಭಟ್ಟರ ಮನಸ್ಸುಗಳು ಹೊಯ್ದಾಡಲು ಪ್ರಾರಂಭವಾದವು. ತುಂಗಾಳ ಮನಸ್ಸು ತನ್ನ ಗಂಡನ ಕಡೆಗೆ ವಾಲುವುದನ್ನು ನಾರಾಯಣ ಭಟ್ಟರ ಸೂಕ್ಷ್ಮ ಮನಸ್ಸು ಸಾರಿ ಸಾರಿ ಹೇಳುತ್ತದೆ. ಆದರೆ ನಾರಾಯಣಭಟ್ಟರು ಅವಳ ಪ್ರೀತಿಯಿಂದ ಹೊರತಾಗಿರಲಿಲ್ಲ. ಇದರಿಂದ ನೋವನ್ನು ಅನುಭವಿಸಿದರೂ ಕೂಡಾ ಒಬ್ಬಂಟಿಗನಾಗಿ ಉಳಿಯುವ ನಿರ್ಧಾರ ತೆಗೆದುಕೊಳ್ಳುತ್ತಾರೆ.

ಇಲ್ಲಿ ಇಡೀ ಕಾದಂಬರಿ ಉದ್ದಕ್ಕೂ ಹಕ್ಕಿಗಳ ಸಂವಾದಗಳು ಮಾನವನ ಕೀಳುಮಟ್ಟವನ್ನು ಪ್ರಶ್ನೆ ಮಾಡುವಂತೆ ನಡೆಯುತ್ತದೆ. ಪಕ್ಷಿಗಳು ಈ ಕಾದಂಬರಿ ಉದ್ದಕ್ಕೂ ಪಾತ್ರಗಳಂತೆ ಮಾತಾಡುತ್ತವೆ. ಮಾನವರಿಗೂ ಮತ್ತು ಪಶು ಪ್ರಾಣಿಗಳಿಗೂ ಇರುವ ನಡುವಿನ ಅಂತರವನ್ನೂ, ಪಶು ಪಕ್ಷಿಗಳ ನಿರ್ಮಲವಾದ ಮನಸ್ಸುಗಳಾಗಿ ತುಡಿಯುವುದನ್ನೂ ಕಾದಂಬರಿಕಾರರು ವಿಭಿನ್ನ ರೂಪಕ ಸಂಕೇತಗಳಲ್ಲಿ ಬಳಸಿದ್ದಾರೆ.

"ಒಂದು ಊರಿಂದ ಸಾಗುವ ನಾರಾಯಣಭಟ್ಟರ ಜೀವನಯಾತ್ರೆಯ ನಿರಂತರ ಹುಡುಕಾಟದಲ್ಲಿ, ಸ್ಥಿತ ಪ್ರಜ್ಞೆಯ ರೂಪದಲ್ಲಿ, ನಿರ್ಲಿಪ್ತ ಮನೋರಂಗದಲ್ಲಿ ಸಂಘರ್ಷಗಳನ್ನು ಎದುರಿಸುತ್ತಲೆ ಸಾಗಿ ಕೊನೆಗೆ ಮತ್ತೇ ಏಕಾಂಗಿಯಾಗುವ ತನ್ನ ಒಲುಮೆಯ ತುಂಗಾಳಿಂದಲೂ ದೂರ ಸರಿದು ನಿಲ್ಲುವ ತ್ಯಾಗಿ ಓದುಗರ ಅಂತರಂಗದಲ್ಲಿ ನೆಲೆನಿಂತು ಬಿಡುತ್ತಾನೆ. ವಿಧಿ ಲಿಖಿತಕ್ಕೆ ಶರಣಾಗುವ ಪರಿಸ್ಥಿತಿಯಲ್ಲಿದ್ದ ನಾರಾಯಣಭಟ್ಟರ ಜೀವನ ಕೈಫಿಯತ್ ಕೊನೆಗೆ ಗೂಢವಾಗಿಯೇ ಉಳಿಯುತ್ತದೆ. ಮನುಷ್ಯರ ಬದುಕಿನ

ಸಿದ್ಧಾಂತಗಳಲ್ಲೊಂದಾಗಿ ನಾರಾಯಣಭಟ್ಟರ ತಟಸ್ಥ ಬದುಕು ವಿಶಿಷ್ಟ ರೂಪದಲ್ಲಿ ನಮ್ಮೆದುರು ನಿಲ್ಲುತ್ತದೆ[೩].

ಅಡಿ ಟಿಪ್ಪಣಿ :–

೧) ಸಿ.ಪಿ.ಕೆ.ಸಾಹಿತ್ಯ ಪ್ರವೇಶ ಪುಟ ಸಂಖ್ಯೆ –121(ಅನುವಾದ ಕೃತಿ)

೨) ಗೋಹರಜಾನ, ಮಾಲತಿ ಮತ್ತು ನಾನು ಪುಟ ಸಂಖ್ಯೆ–6

೩) ಡಿ.ಎಸ್.ಚೌಗಲೆ. ಒಂದು ಕೈಫಿಯತ್ ಕಾದಂಬರಿಯ ಮುನ್ನುಡಿ.

ಅಧ್ಯಾಯ-4

ಕುಸನೂರರವರ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳು

ಯಾವುದೇ ಒಂದು ದೇಶದ ಶ್ರೀಮಂತಿಕೆಯನ್ನು ಅಳೆಯಬೇಕಾದರೆ, ಅಲ್ಲಿಯ ನಾಗರಿಕತೆಯ ಅಂತಸ್ತನ್ನು ಅಳೆಯಬೇಕಾದರೆ, ಅಲ್ಲಿಯ ಸಾಂಸ್ಕೃತಿಕ ಅಂತಸ್ತನ್ನು ಅಳೆಯಬೇಕಾದರೆ ಆ ದೇಶದಲ್ಲಿ ಮಹಿಳೆಗೆ ನೀಡುವ ಸ್ಥಾನಮಾನದ ಮೇಲೆಯೇ ಅಳೆಯಬಹುದಾಗಿದೆ. "ಮಹಿಳೆಯನ್ನು ಗೌರವಿಸದ, ಅವಳಿಗೆ ಅವಕಾಶಗಳನ್ನು ಕಲ್ಪಿಸಿಕೊಡದೇ ಇರುವ ಸಮಾಜ ಎಂದಿಗೂ ಮುಂದೆ ಬರಲಾರದೆಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ".

ಅನಾದಿಕಾಲದಿಂದಲೂ ನಾವು ಸ್ತ್ರೀಯನ್ನು ಪತಿವ್ರತೆ, ದೇವತೆ ಎಂದು ವರ್ಣಿಸುತ್ತಾ, ಜನನಿ, ಜನ್ಮಭೂಮಿ ಸ್ವರ್ಗಕ್ಕಿಂತಲೂ ಮಿಗಿಲು ಎಂದು ಹೇಳುತ್ತಾ, ನಾಡಿಗೆ ತಾಯಿ ಸ್ವರೂಪ ನೀಡಿ ಸ್ತ್ರೀಯನ್ನು ವರ್ಣಿಸುತ್ತಾ ಅವಳ ಸುತ್ತ ಬೇಲಿಯನ್ನು ಹೆಣೆಯಲಾಗಿದೆ. ವೇದ ಕಾಲದಲ್ಲಿಯೂ, ಮಹಿಳೆಯೂ ಪುರಷನಂತೆ ಬ್ರಹ್ಮವಾಹಿನಿಯಾಗಿದ್ದಳು. ಘೋಷಾ ಮೊದಲಾದವರು ಬ್ರಹ್ಮ ಸೂತ್ರಗಳನ್ನು ಬರೆದ ಉದಾಹರಣೆಗಳುಂಟು. ಮಧ್ಯಯುಗದಲ್ಲಿ ಸ್ತ್ರೀಗೆ ಕರಾಳಯುಗ ಪ್ರಾರಂಭವಾಯಿತು. ಪುರುಷ ಪ್ರಧಾನವಾದ ಸಮಾಜವು ಸ್ತ್ರೀಯನ್ನು ನಾಲ್ಕು ಗೋಡೆಗಳ ಮಧ್ಯೆ ಇಡಲಾರಂಭಿಸಿತು. 'ನಸ್ತ್ರೀ ಸ್ವಾತಂತ್ರ್ಯ ಆರ್ಹತಿ' ಎಂಬ ಮನು ಋಷಿಯ ಮಾತೊಂದು ಪೂರಕವಾಯಿತು. ಇದರಿಂದ ಬಾಲ್ಯ ವಿವಾಹ, ಬಹುಪತ್ನಿತ್ವ, ಸಹಗಮನ ಪದ್ಧತಿಗಳೆಂಬ ಅನಿಷ್ಟ ಸಂಪ್ರದಾಯಗಳು ಹುಟ್ಟಿಕೊಂಡವು, ಎಂದೂ ವಾಸಿಯಾಗದ ರೋಗಗಳಂತೆ ಸಮಾಜವನ್ನು ದುರ್ಬಲಗೊಳಿಸ ತೊಡಗಿದವು.

12ನೇಯ ಶತಮಾನದಲ್ಲಿ ಮಹಿಳೆಯು ಸ್ವಲ್ಪ ಉಸಿರಾಡುವಂತಾಯಿತು. ವಚನಕಾರರು ಮಹಿಳೆಗೆ ಇಂತಹ ಬಿಗುವಿನ ವಾತಾವರಣದಲ್ಲಿ ಉಸಿರಾಡಲು ಎಡೆ ಮಾಡಿದ್ದರೂ, ತನ್ನ ಇಡೀ ವ್ಯಕ್ತಿತ್ವವನ್ನು ವಿಕಾಸಗೊಳಿಸಲು ಸಾಧ್ಯವಾಗುವ ಪರಿಸರ ಮಾತ್ರ ನಿರ್ಮಾಣವಾಗಲೇ ಇಲ್ಲ. ಮಹಿಳೆಯು ತನ್ನ ಸುತ್ತ ಹೆಣೆದ ಬೇಲಿಯಲ್ಲಿಯೇ ನರಳುವಂತಾಯಿತು. ಅವಳ ಈ ಮೂಕ ವೇದನೆಗೆ ಸ್ಪಂದಿಸುವ ಪರಿಸರ ಬೆಳೆಯಲೇ ಇಲ್ಲ ಅನೇಕ ಮಹಿಳಾ ವಚನಕಾರ್ತಿಯರು ಹುಟ್ಟಿಕೊಂಡರೂ ಈ ಸಮಾಜಕ್ಕೆ ಅಂಟಿದ ರೋಗಗಳಿಂದ ಮಹಿಳೆಯನ್ನು ಬಿಡಿಸಲು ಸಾಧ್ಯವಾಗಲಿಲ್ಲ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ 'ಸ್ತ್ರೀಪರ' ಸಾಹಿತಿಗಳ ಬರೆದದ್ದೂ ಅತೀ ವಿರಳ. ಕಾದಂಬರಿ ಸಾಹಿತ್ಯದಲ್ಲಿ ಅನೇಕರು 'ಮಹಿಳೆಯು ಅನುಭವಿಸುವ ನೋವನ್ನು ತಮ್ಮ

ಕಾದಂಬರಿಗಳಲ್ಲಿ ವ್ಯಕ್ತಪಡಿಸಿದ್ದಾರೆ. ಕನ್ನಡದ ಮೊದಲ ಸ್ವತಂತ್ರ ಸಾಮಾಜಿಕ ಕಾದಂಬರಿಯಾದ 'ಗುಲ್ವಾಡಿ ವೆಂಟರಾಯ'ರ 'ಇಂದಿರಾಬಾಯಿ' ಕಾದಂಬರಿಯು ಸ್ತ್ರೀ ಜಗತ್ತಿನ ಹಲವು ಮುಖಗಳಾದ ಸ್ತ್ರೀ ಶಿಕ್ಷಣ, ವಿಧವಾ ವಿವಾಹ, ಆಧುನಿಕತೆಯ ಒಲವು ಇವುಗಳನ್ನೆಲ್ಲ ಗರ್ಭಿಕರಿಸಿಕೊಂಡ ಕಾದಂಬರಿ ಸೃಷ್ಠಿಯಾಯಿತು. ಶಿವರಾಮ ಕಾರಂತರ 'ಸರಸಮ್ಮನ ಸಮಾಧಿ' 'ಮೈಮನಗಳ ಸುಳಿಯಲ್ಲಿ' 'ಮರಳಿಮಣ್ಣಿಗೆ'ಯಂತಹ ಕಾದಂಬರಿಗಳಲ್ಲಿ ಮಹಿಳೆಯ ದಾಂಪತ್ಯ ಜೀವನ, ವೇಶ್ಯಾ ಬದುಕು, ಕೌಟುಂಬಿಕ ಸಂಕಷ್ಟಗಳನ್ನ ವಿವರಿಸುವ ಮುಖಾಂತರ ಸ್ತ್ರೀ ಸಮಸ್ಯಗಳ ಕಡೆಗೆ ಗಮನ ಸೆಳೆದಿದ್ದಾರೆ. 'ಕುವೆಂಪು' ಅವರ ಎರಡು ಕಾದಂಬರಿಗಳು ಸ್ತ್ರೀಪರ ಕಾಳಜಿಗೆ ಹಿಡಿದ ನಿದರ್ಶನಗಳಾಗಿವೆ. 'ಕಾನೂರು ಹೆಗ್ಗಡತಿ' ಕಾದಂಬರಿ ಸುಬ್ಬಮನ ದುರಂತವನ್ನು ಚಿತ್ರಿಸುವದರೊಂದಿಗೆ ಮಹಿಳಾ ಸಮಸ್ಯೆಯ ನೆಲೆಯ ಮೂಲದ ಶೋಧದಲ್ಲಿ ತೊಡಗುತ್ತದೆ.

ಮಹಿಳಾ ಸಾಹಿತಿಗಳು ತಮ್ಮ ಸಾಹಿತ್ಯದಲ್ಲಿ ಮಹಿಳೆಯ ನೋವನ್ನು ಕುರಿತು, ಅವಳ ಅನುಭವಿಸುವ ಶೋಷಣೆಯನ್ನು ಕುರಿತು ಉಲ್ಲೇಖಿಸಿದ್ದಾರೆ ಅಂತಹವುದರಲ್ಲಿ ಎಂ.ಕೆ.ಇಂದಿರಾ, ತ್ರಿವೇಣಿ, ವಾಣಿ, ಕಲ್ಯಾಣಮ್ಮ ಮುಂತಾದವರು ಪ್ರಮುಖರು.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಪುರುಷರ ಸಾಹಿತಿಗಳು ಸ್ತ್ರೀಪರ ಬರೆದ ಕಾದಂಬರಿಗಳು ವಿರಳ ಇತ್ತೀಚೆಗೆ ಸ್ತ್ರೀ ವಾದಿ ಸಾಹಿತ್ಯದ ಅಧ್ಯಯನವು ಪ್ರಖರವಾಗಿ ಪ್ರಾರಂಭವಾಗಿದೆ. ತಮ್ಮ ಕಾದಂಬರಿಗಳಲ್ಲಿ ಸ್ತ್ರೀಪರ ಕಾಳಜಿಯನ್ನು ವ್ಯಕ್ತ ಪಡಿಸಿದವರಲ್ಲಿ ಚಂದ್ರಕಾಂತ ಕುಸನೂರ ಕೂಡ ಒಬ್ಬರು.

ಚಂದ್ರಕಾಂತ ಕುಸನೂರರವರ ಕಾದಂಬರಿಗಳಲ್ಲಿ ಬರುವ ಸ್ತ್ರೀ ಪಾತ್ರಗಳೆಲ್ಲವೂ ಸಾಮಾನ್ಯ ಸ್ತ್ರೀ ಪಾತ್ರಗಳು ಇವರ ಕಾದಂಬರಿಗಳಲ್ಲಿ ಬರುವ ಸ್ತ್ರೀಯರ ಸಂಪ್ರದಾಯದ ನೆಲೆಯಲ್ಲಿ ಇದ್ದವರು ಇಲ್ಲಿ ಬರುವ ನಾಯಕಿಯರು ಪುರುಷನಿಗಿಂತ ಹೆಚ್ಚಿನ ನೋವು ಅಸಹಾಯಕತೆಯಿಂದ, ಮಾನಸಿಕ ತೊಳಲಾಟಗಳನ್ನು ಅನುಭವಿಸುತ್ತರೆ. ಪುರುಷನು ತನ್ನಗೆ ಗೊತ್ತಿದ್ದು, ಗೊತ್ತಿಲ್ಲದಂತೆ ಮಹಿಳೆಗೆ ಮಾಡುವ ಶೋಷಣೆಯನ್ನು ಜೊತೆಗೆ ನೀಡುವ ಪ್ರೀತಿಯನ್ನು ತಮ್ಮ ಕಾದಂಬರಿಗಳಲ್ಲಿ ನಿರೂಪಿಸಿದ್ದಾರೆ. ಅವರ ನಾಲ್ಕು ಕಾದಂಬರಿಗಳಾದ –ಕೆರೂರು ನಾಮಾ, ಗೋಹರಜಾನ್,ಮಾಲತಿ ಮತ್ತು ನಾನು, ಒಂದು ಕೈಪಿಯತ್, ಯಾತನಾಶಿಬಿರ ಕಾದಂಬರಿಗಳಲ್ಲಿ ಬರುವ ಸ್ತ್ರೀ ಪಾತ್ರಗಳ ಪರಿಚಯ ನೀಡಲಾಗಿದೆ.

ಕೆರೂರು ನಾಮಾ ಕಾದಂಬರಿಯಲ್ಲಿ ಬರುವ ಪಾತ್ರಗಳು

ತುಳಸಕ್ಕ : ಕೆರೂರು ನಾಮಾ ಕಾದಂಬರಿಯಲ್ಲಿ ಬರುವ ಪಾತ್ರ.ವಿಧವೆ ಪಡುವ ನೋವುಗಳ ಪ್ರತೀಕವಾಗಿ ಈ ಪಾತ್ರ ಸೃಷ್ಠಿಯಾಗಿದೆ. ಈ ಕಾದಂಬರಿ ಪ್ರಾರಂಭವಾದದ್ದು ಇವಳ ಪಾತ್ರದಿಂದ, ಕಾದಂಬರಿಯ ಮುಕ್ತಾಯವೂ ಇವಳ ಪಾತ್ರ ಕೊನೆಗೊಳ್ಳುವುದರಿಂದ.

ಹುಟ್ಟಿದ್ದು ಬ್ರಾಹ್ಮಣ ಕುಟುಂಬದಲ್ಲಿ. ಸಣ್ಣ ವಯಸ್ಸಿನಲ್ಲಿಯೇ ವಿಧವೆ ಪಟ್ಟ, ಆದರೆ ಮಡಿ ಹೆಂಗಸಾಗದೇ ಸಕೇಶಿಯಾಗಿ ಗೊಡ್ಡ ಸಂಪ್ರದಾಯಗಳನ್ನು ಬದಿಗೊತ್ತಿ ಸಮಾಜದ ವಿರುದ್ಧ ಈಜುವ ಪ್ರಯತ್ನ. ಸಣ್ಣ ವಯಸ್ಸಿನಲ್ಲಿ ವಿಧವೆ ಪಟ್ಟ ಬಂದರೂ ಮನದ ಬಯಕೆಗಳನ್ನು ತನ್ನ ಗಂಡನ ಚಿತೆಯೊಂದಿಗೆ ಸುಟ್ಟು, ಕಯಕವನ್ನೇ ನಂಬಿ ತನ್ನ ಜೀವನವನ್ನು ಸಾಗಿಸಬೇಕು ಎಂಬ ಹಂಬಲದೊಂದಿಗೆ ಅವಳಿದ್ದರೆ, ಅವಳ ಕಾಮವನ್ನು ಹಂಬಲಿಸುವ ಸಮಾಜ ಅವಳನ್ನು ನೋಡುವ ದೃಷ್ಟಿಕೋನವೇ ಬೇರೆಯದು. ಇವಳು ಗಂಡ ಸತ್ತ ನಂತರ ತಲೆ ಬೋಳಿಸಿಕೊಂಡು, ಕೆಂಪೋ, ಬಿಳಿಯೋ ಸೀರೆಯನ್ನುಟ್ಟುಕೊಂಡು, ಒಪ್ಪತ್ತು ಊಟಾ ಇನ್ನೊಂದೊಪ್ಪತ್ತು ಅರಳ್ಹಿಟ್ಟು ತಿಂದು ಬದುಕಿರುವದು ತುಳಸಕ್ಕನಿಂದ ಸಾಧ್ಯವಾಗದ ಮಾತು, ಅತ್ತೆ ಮನೆಯವರು ಮತ್ತು ತವರುಮನೆಯವರು, ಮೊದಲು ರಮಿಸಿ, ಆಮೇಲೆ ಅಂಜಿಸಿ, ಕೊನೆಗೆ ಚಾಲೆವರೆದು ಹೇಳಿದರೂ ಆಗ ತಾನೆ ಹದಿನೆಂಟು ವರ್ಷಕ್ಕೆ ಕಾಲಿಟ್ಟ ತುಳಸಕ್ಕ ಗಂಡ ಸತ್ತ ನಂತರ ಸಂಪ್ರದಾಯದಂತೆ ಮಡಿ ಹೆಂಗಸಾಗಲೂ ಒಪ್ಪಲೇ ಇಲ್ಲ. ಅತ್ತೆ ಮನೆಯವರೊಂದಿಗೆ ಜಗಳವಾಡಿ ತನ್ನ ಹೆಸರಿಗೆ ಒಂದು ಮನೆಯನ್ನು ಪಾಲಕ್ಕೆ ತೆಗೆದುಕೊಂಡು, ಆ ಮನೆಯಲ್ಲಿ ಒಬ್ಬಳೇ ಇರತೊಡಗಿದಳು[7]. ಹೀಗೆ ಇವಳ ಪಾತ್ರದಿಂದ ಪ್ರಾರಂಭವಾಗುತ್ತದೆ ಈ ಕಾದಂಬರಿ.

ಯಾವುದಕ್ಕೂ ಅಂಜದೇ ಅಳುಕದೇ ನೈತಿಕತೆಯಲ್ಲಿ ಬದುಕೆಂಬ ಹಂಬಲದ ಉಸಿರಿನೊಂದಿಗೆ ಬದುಕುತಾಳೆ. ಗಂಡ ಸತ್ತ ನಂತರ ದೇಹಕ್ಕೆ ಬಿಳಿಸೀರೆ ಉಡಿಸಿದರೆ ಸಾಲದು, ಮನಸ್ಸಿಗೆ ಬಿಳಿಸೀರೆ ಉಡಿಸಬೇಕು ಎನ್ನುವ ತತ್ವದೊಂದಿಗೆ, ಸ್ವಲ್ಪವೂ ತನ್ನ ವ್ಯಕ್ತಿತ್ವಕ್ಕೆ ಕಪ್ಪು ಕಲಿ ತಾಕದಂತೆ ಜೀವಿಸುತ್ತಾಳೆ.

"ನನಗೆ ಒಂದು ವ್ಯಕ್ತಿತ್ವ ಇದೆ. ಅದರ ನಿಯಂತ್ರಣ ನನ್ನದು ಎಂದು ಮುಂಡೆಯಾದ ನಂತರ ಸಕೇಶಿಯಾಗಿ ಉಳಿದು ಜಡ್ಡು ಗಟ್ಟಿದ ಸಮಾಜಕ್ಕೆ ಸವಾಲು ಹಾಕುತ್ತಾಳೆ. ನಿಮ್ಮ ತಾಳಕ್ಕೆ ಕುಣಿಯುವವಳು ನಾನಲ್ಲ ಎಂದು ಹೇಳಿ ಗಂಡನ ಮನೆಯಲ್ಲಿ ತನಗೆ ಬರಬೇಕಾದ ಪಾಲನ್ನು ಪಡೆದುಕೊಂಡು ಸ್ವತಂತ್ರಳಾಗುತ್ತಾಳೆ. 'ತುಳಸಕ್ಕನ ಮನಿ' ಎಂದು ಕರೆಯಿಸಿಕೊಳ್ಳುವ ಮಟ್ಟಕ್ಕೆ ಬೆಳೆಯುತ್ತಾಳೆ."[8]

ಈ ಕಾದಂಬರಿಯಲ್ಲಿ ಒಬ್ಬ ವಿಧವೆಯನ್ನು ಯಾವ ರೀತಿ ಈ ಸಮಾಜವು ನಡೆಯಿಸಿಕೊಳ್ಳುತ್ತದೆ ಎಂಬುದನ್ನು ಲೇಖಕರು ಮನಮುಟ್ಟುವಂತೆ, ಹೃದಯ ಸ್ಪರ್ಶಿ ಸ್ಪರ್ಶವನ್ನು ನೀಡಿದ್ದಾರೆ. ತುಳಸಕ್ಕ ಏನೋ ಅರಿಯದ ಮುಗ್ಧ ಹೆಣ್ಣು. ಅವಳನ್ನು ಗುಂಡಣ್ಣ ಎಂಬ ವಕೀಲನಿಗೆ ಎರಡನೆಯ ಸಂಬಂಧವಾಗಿ ಮದುವೆ ಮಾಡಿಕೊಡುತ್ತಾರೆ. ವಕೀಲ ಗುಂಡಣ್ಣ ತುಳಸಕ್ಕನ ಮ್ಯಾಲ ಬಿದ್ದು ಸಾಯಿತ್ತಿದ್ದ. ಅವನು ಕಾಣಲು ಹಳೆ ಕಾಲದ ಮನುಷ್ಯ ಕಂಡ ಹಾಗೆ ಕಾಣುತ್ತಿದ್ದ. ಅವನ ಮೈಬಣ್ಣ ಡಾಂಬರವಾಗಿತ್ತು. ಆದರೆ ಅಳ್ಳ ಹುರದ್ಹಾಂಗ

ಮಾತಾಡುತ್ತಿದ್ದ. ಈ ಇಬ್ಬರನ್ನೂ ಕಾಡುವ ಒಂದು ಸಾಮಾನ್ಯ ಸಮಸ್ಯೆ ಏನೆಂದರೆ, ಮಕ್ಕಳಾಗಲಿಲ್ಲ ಎಂಬ ಕೊರಗು. ಈ ಚಿಂತೆಯಲ್ಲಿರುವಾಗಲೇ ಗುಂಡಣ್ಣ ವೈಕುಂಠ ಸೇರಿದ. ತುಳಸಕ್ಕನಿಗೆ ವಿಧವೆ ಪಟ್ಟ ಕಟ್ಟಿದ.

ತುಳಸಕ್ಕನ ಅನಿಷ್ಟ ಕಾಲ್ಗುಣದಿಂದ ತಮ್ಮ ಅಣ್ಣ ಸತ್ತನೆಂದು ಗುಂಡಣ್ಣನ ತಮ್ಮ ಶಾಂತಾರಾಮ ಮತ್ತು ಅವನ ಹೆಂಡ್ತಿ ಕಿಟ್ಟಾಬಾಯಿ ಗೋಳ್ಯಾಡಿದರು. ಗಂಡ ಸತ್ತ ದು:ಖ, ಮೈದುನಾ ನಾದಿನಿಯ ಮೇಲಿನ ಸಿಟ್ಟಿನಿಂದ ಹೈರಾಣಾಗಿದ್ದಳು. ಹೀಗೆ ಪ್ರತಿದಿನ ಪ್ರತಿಕ್ಷಣ ತನ್ನವರಿಂದ, ಸಮಾಜದ ಜನರಿಂದ ತುಳಸಕ್ಕ ಅವಮಾನಿತಳಾಗುತ್ತಿದ್ದಳು.

ಜನಕ್ಕೆ ಅಂಜಿ ನಡೆದರೆ ಸಾಲದು ಮನಕ್ಕೆ ಅಂಜಿ ನಡೆಯಬೇಕು ಎನ್ನುವ ತತ್ವದೊಂದಿಗೆ ಜನ ಏನೆಂದಕೊಂಡಾರೂ ತಾನು ಮಾತ್ರ ತನ್ನ ಕಾಯಕದಲ್ಲಿ ನಿರತಳಾಗುತ್ತಿದ್ದಳು. ತುಳಸಕ್ಕನಿಗೆ ತನ್ನ ಮನೆ–ಹೊಲದಿಂದ ಹೊರಗೆ ಬರುವ ಕಾರಣವೇ ಇರಲಿಲ್ಲ. ಊರಿನ ಉಸಾಬರಿ ಮಾಡುವುದು ಅವಳಿಗೆ ಬೇಕಾಗಿರಲಿಲ್ಲಿ. ಮೈಲಾರಿ ಮತ್ತು ಹೆಂಡತಿ ಮಾದೇವಿಯನ್ನು ತನ್ನ ಹೊಲದ ದುಡಿಮೆಗೆಂದು ನೇಮಿಸಿದ್ದಳು. ಎರಡು ದೇವಣಿ ಎತ್ತುಗಳನ್ನು ಖರೀದಿಸಿ, ಹೊಲದಾಗ ಬಾವಿ ತೋಡಿಸಿ ತೆಂಗಿನ ಮರ, ಕಮಲಾಪೂರದ ಕೆಂಪು ಬಾಳೆ, ಗೋಧಿ, ಕಡಲೆ, ಅಲಸಂದಿ, ಟಮಾಟರ, ಪುಂಡಿ ಮುಂತಾದ ಬೆಳೆಗಳನ್ನು ಬೆಳೆದು ಶ್ರೀಮಂತಳಾಗಿದ್ದಳು. ಇವಳ ಶ್ರೀಮಂತಿಕೆಯನ್ನು ಮೈದುನ ಮತ್ತು ನಾದಿನಿಗೆ ನೋಡಲು ಆಗುತ್ತಿರಲಿಲ್ಲ.

ಸಂಗೀತದ ಮೇಲೆ ಆಸಕ್ತಿಯಿಂದ ರಾಮಾಚಾರಿ ಬೆಂಡೇಗುಂಬಳಕರ ಎಂಬ ಪೇಟಿ ಮಾಸ್ತರನಿಂದ ಕಲಿಯಲು ಪ್ರಾರಂಭಿಸಿದಳು. ಆದರೆ ಈ ಸುದ್ದಿ ಕಾಲರಾದಂತೆ ಊರೆಲ್ಲಾ ಹಬ್ಬಿ, ದ್ಯಾಂಪುರ ಸಂಗಮೇಶ ಅಂತವರ ಬಾಯಲ್ಲಿ ಸಿಕ್ಕು ಏನೇನೂ ಆಗಿ ಹೋಯಿತು. ಪೇಟಿ ಕಲಿಸಲು ಬಂದ ರಾಮಾಚಾರಿ ತನ್ನೊಳಗಿನ ದುರಾಸೆಯಿಂದ ತುಳಸಕ್ಕನ ಆಸ್ತಿಯನ್ನೆಲ್ಲಾ ತನ್ನ ಮಗನಿಗೆ ಮಾಡಿಯಾಳು ಎಂಬ ಆಶಾದಾಯಕ ಭಾವನೆಯಿಂದ ಪೇಟಿ ಕಲಿಸುತ್ತಿದ್ದ. ಇವನ ಒಳವರ್ಮ ಅರಿಯದ ಮುಗ್ಧ ಹೆಂಗಸು ತುಳಸಕ್ಕ ಒಂದು ದಿನ ರಾಮಾಚಾರಿಯಿಂದಲೇ ಬಲಾತ್ಕಾರಕ್ಕೆ ಒಳಗಾಗಿ, ಯಾರೂ ಮುಂದು ತನ್ನಗಾದ ನೋವನ್ನು ಹೇಳಿಕೊಳ್ಳಲಾಗದೇ ಆತ್ಮಹತ್ಯೆಗೆ ಶರಣಾದಳು. ಇದರಿಂದ ಈ ಕಾದಂಬರಿ ಮುಕ್ತಾಯವಾಗುತ್ತದೆ.

ಕಾದಂಬರಿ ಆರಂಭ ಇವಳ ಪಾತ್ರದೊಂದಿಗೆ, ಕಾದಂಬರಿ ಮುಕ್ತಾಯವೂ ಇವಳ ಪಾತ್ರ ಕೊನೆಗೊಂಡಿದ್ದರಿಂದ. ಹೀಗಾಗಿ ಈ ಕಾದಂಬರಿಯ ಕಥಾನಾಯಕಿಯಂತೆ ಈ ಕಾದಂಬರಿ ಉದ್ದಕ್ಕೂ ಇವಳ ವ್ಯಕ್ತಿತ್ವ ಹಾಸು ಹೊಕ್ಕಾಗಿದೆ. ಲೇಖಕರು ಈ ಪಾತ್ರವನ್ನು ಸೃಷ್ಟಿಸುವದರೊಂದಿಗೆ, ಬ್ರಾಹ್ಮಣರಲ್ಲಿಯ ಸಂಪ್ರದಾಯಗಳು ಒಂದು ಹೆಣ್ಣು ಏನನ್ನಾದರೂ

ಸಾಧಿಸುವ ಹಂಬಲ, ವಿಧವೆಯನ್ನು ಸಮಾಜ ನೋಡುವ ದೃಷ್ಟಿಕೊನ, ಜನರಿಂದ ಎದುರಿಸುವ ಅವಮಾನಗಳು, ಜನರು ನೀಡುವ ಸಂಬಂಧಗಳು ಮುಂತಾದ ಹಲವಾರು ಅಂಶಗಳನ್ನು ಹೃದಯಕ್ಕೆ ಹತ್ತಿರವಾಗುವಂತೆ ಕಟ್ಟಿ ಕೊಟ್ಟಿದ್ದಾರೆ.

2. ಅಂಬಕ್ಕಾ ಅರ್ಥಾತ ಅಂಬಾಬಾಯಿ :

ಅಂಬಕ್ಕಾ ಎಂಬುವಳು ಸಾದಾ ಹೆಣ್ಣು ಮಗಳು ಮುಂದೆ ಅವಳು ಅಂಬಾಬಾಯಿಯಾಗಿ ಕೊನೆಗೆ ಕ್ಯಾನ್ಸರ್ ಪೀಡಿತೆಯಾಗಿ ಸಾವನ್ನೊಪ್ಪುತ್ತಾಳೆ. ಅಂಬಕ್ಕಾ ಗಂಡಸುತನವಿಲ್ಲದ ಫಂಡರಿ ಹೆಂಡತಿ. ಅಂಬಕ್ಕ ಮತ್ತು ಕಿಶನರಾಯರ ನಡುವೆ ಸ್ನೇಹ ಅದೇಗೋ ಬೆಳೆಯಿತು. ಅದು ಎಷ್ಟರ ಮಟ್ಟಿಗೆ ಎಂದರೆ ಒಮ್ಮೆ ಫಂಡರಿ ತಂದ ಹಲಸಿನ ಹಣ್ಣಿನ ತೊಳೆ ಬಿಡಿಸಿ ಕಿಶನರಾಯನ ಬಾಯಿಯೊಳಗೆ ಹಾಕುವ ಮಟ್ಟಿಗೆ ಅವರ ಸಂಬಂಧ ಬೆಳೆಯಿತು. ಈ ಸಂಬಂಧವನ್ನು ಸಮಾಜದಿಂದ ಮುಚ್ಚಿ ಹಾಕುವುದಕ್ಕಾಗಿ ಮತ್ತು ಸಮಾಜದೊಳಗೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ತನ್ನ ಮೈಯೊಳಗೆ ದೇವಿ ಬರುತ್ತಾಳೆ ಎಂಬ ಆಟ ಪ್ರಾರಂಭಿಸಿ, ಜನರನ್ನು ನಂಬಿಸಿದಳು. ಇವಳ ಶಾಪದಿಂದ ಮೌಲಾಲಿಯ ಕುದುರೆ ಸತ್ತಿತು. ಹೀಗಾಗಿ ಮೌಲಾಲಿ ಇವಳ ಪ್ರಥಮ ಶಿಷ್ಯ ಮತ್ತು ಭಕ್ತನಾದ. ಅಷ್ಟೆ ಅಲ್ಲದೆ ಊರಲ್ಲಿ ಅಪರೋಕ್ಷವಾಗಿ ಪ್ರಚಾರಕನಾಗಿ ಬಿಟ್ಟ. ಮೌಲಾಲಿ ಮುಸ್ಲಿಂನಾದರೂ ಹಣೆಗೆ ವಿಭೂತಿ, ತಲೆಗೆ ರೇಷ್ಮೆ ರುಮಲು, ಹೆಗಲಮೇಲೆ ಹಸಿರು ಬಣ್ಣದ ಶಾಲು, ಬರಿಗಾಲಿನ ನಡೆ ಮುಂತದವುಗಳಿಂದ ಅವನೊಬ್ಬ ಸಂತನಂತೆ ಆದ, ಅವನೊಬ್ಬ ಸ್ವಾಮಿಯಾದ ಇವೆಲ್ಲವು ಅಂಬಕ್ಕನ ಪ್ರಭಾವ.

ಇದಕ್ಕೆಲ್ಲಾ ಕಾರಣ ಒಂದು ದಿನ ಅಂಬಕ್ಕ 'ಲೇ ಮೌಲಾಲಿ, ಬಾರೋಯಿಲ್ಲಿ' ಎಂದು ಕರೆದಳು. ಹಳದಿ ಸೀರೆ ಉಟ್ಟಿದ್ದಳು, ಕೆಂಪು ಕುಪ್ಪಸ ತೊಟ್ಟಿದ್ದಳು. ಏ ಮೌಲಾಲಿ, ನಿನ್ನ ಕುದರಗಿ ಸೆಟಿಬ್ಯಾನಿ ಬರ್ತದೋ, ಊರಗೌಡ ಗ್ವಾಡೀಗಿ ಕುಂದ್ರತಾನ, ಊರ ಹಳ್ಳದಾಗ ಸ್ವಾಮೀ ಹೆಣಾ ಹರಕೊಂಡು ಹೋಗ್ತದೋ, ದ್ಯಾವರ ಗುಡಿ ಮುಂದ ಗಂಗಮ್ಮ ಬಂದು ಗುಡಿ ಕಳಸಕ್ಕ ಮುಟ್ತಾಳೋ, ಎಂದೆಲ್ಲ ಮೈ ತುಂಬಿ ಬಂದು ಮೈ ಜುಲಾಯ್ಸಿಗೋತ ಹೇಳಿದಳು'.[೨]

ಒಂದು ದಿನ ಇದ್ದಕ್ಕಿದ್ದಂತೆ ಮೌಲಾಲಿ ಕುದುರಿ 'ಫೇಪರಿ ಬ್ಯಾನಿ' ಬಂದು ಸತ್ತಿತ್ತು. ಊರಿಗೆ ಊರೇ ಗಾಬರಿಯಾಯಿತು. ಗೌಡನ ಧೋತರ ಒದ್ದೆಯಾಯಿತು. ಸ್ವಾಮಿಗೆ ನಡುಕ ಹುಟ್ಟಿತು. ಮೌಲಾಲಿ ಕುದುರಿ ಸತ್ತಮ್ಯಾಲ, ಅವನು ಅಂಬಕ್ಕನ ಸೆರಗಿನ ಆಶ್ರಯ ಪಡೆದು ಶಿಷ್ಯನಾದ. ಹೀಗಾಗಿ ಅಂಬಕ್ಕಾ ಭಾರಿ ಜನಪ್ರೀಯತೆಯನ್ನು ಪಡೆದುಕೊಂಡಳು. ಇವಳ ದರ್ಶನಕ್ಕೆ ಮನಿಮುಂದ ಜನರ ಕ್ಯೂ ಹತ್ತಿತ್ತು. ಸಾದಾ ಮನುಷ್ಯ ಫಂಡರಿ ಭಾಳ ವಿಶಿಷ್ಟ ಮನುಷ್ಯನಾದ. ದೇವಿಯ ದರ್ಶನಕ್ಕೆ ಕರ್ಫೆಶನ್ ಪ್ರಾರಂಭವಾಯಿತು. "ಅಂಬಕ್ಕ ದಿನಾ

ಬೆಳಿಗ್ಗೆ ಇಳಕಲ್ ಸೀರೆ ಉಟ್ಟು ಬೆಳಿಗ್ಗೆ ಏಳು ಗಂಟೆಗೆ ಮಣೀಮ್ಯಾಲ ಬಂದು ಕುಂತಳಂದ್ರ ಸಾಕ್ಷಾತ್ ತುಳಜಾಪುರದ ಅಂಬಾಬಾಯಿನೋ ಅಥವಾ ಕೊಲ್ಲಾಪುರದ ಮಹಾಲಕ್ಷ್ಮಿನೋ ಪ್ರತ್ಯಕ್ಷ ಕುಂತಾಳಂತ ಅನ್ನಿಸಬಹುದು"[9]. ಅಷ್ಟೊಂದು ಅಂಬಕ್ಕನ ದರ್ಬಾರ ಪ್ರಾರಂಭವಾಯಿತು.

ಅಂಬಕ್ಕನ ಅಪರಂಪರಾ ಮಹಿಮೆಯಿಂದ, ಪರ ಊರುಗಳಿಂದಲೂ ಜನರ ತಂಡೋಪ ತಂಡವಾಗಿ ಬರಲಾರಂಭಿಸಿದವು. ಜನ ಮರಳೋ ಜಾತ್ರೆ ಮರಳೋ ಎಂಬಂತಾಯಿತು. ಊರ ವ್ಯಾಪಾರ ಬೆಳೆಯಿತು. ಕೆರೂರು ಒಂದು ಪುಣ್ಯಕ್ಷೇತ್ರವಾಯಿತು. "ಶ್ರೀ ಗುರು ಅಂಬಾಭವಾನಿ ಟಿಫಿನ ಕ್ಲಬ್ " ಎಂಬ ದೊಡ್ಡದಾದ ಹೊಟೇಲ ಕೂಡ ಆಯಿತು. ಇವೆಲ್ಲವೂ ತಾಯಿ ಅಂಬಾಬಾಯಿಯ ಮಹಾತ್ಮೆ.

ಮೌಲಾಲಿ ಅಂಬಾಬಾಯಿಗೆ ಕೈ ಕೊಟ್ಟ, ಅಂಬಕ್ಕನಿಗೆ ಪ್ರಚಾರಕ ಇಲ್ಲದೇ ಹೇಗೆ ಎಂಬ ಚಿಂತೆ ಕಾಡಹತ್ತಿತು. ಆಗ ಶೇಷಾಚಲನಿಗೆ ಸಾಲ ಬೇಕಾಗಿತ್ತು. ಸಾಲ ಕೇಳಲು ಅಂಬಕ್ಕನ ಹತ್ತಿರ ಹೋದ, ಅಂಬಕ್ಕನಿಗೆ ಅದೇ ಬೇಕಾಗಿತ್ತು. ನಿನಗೆ ಬೇಕಾದಾಗ ಸಾಲ ಕೊಡ್ತಿನಿ ನೀ ಅದನ್ನ ಮರಳಿಕೊಡಬೇಡ ಅದರ ಬದಲಿಗೆ ನೀ ಅಂಬಾಬಾಯಿ ಪ್ರಚಾರ ಮಾಡು ಎಂದಳು. 'ನಾಯಿ ಹಸಿದಿತ್ತು ನುಚ್ಚ ಹಳಸಿತ್ತು' ಎಂಬಂತಾಯಿತು.

ಅಂಬಕ್ಕ ಹೇಳಿದ್ದ ಭವಿಷ್ಯವಾಣಿಯ ಪ್ರಕಾರ ಮುಂದೆ ಯಾವ ಪವಾಡಗಳು ನಡೆಯಲಿಲ್ಲ. ಅಂಬಕ್ಕನ ಜನಪ್ರೀಯತೆ ಕುಗ್ಗತೊಡಗಿತು. ಒಮ್ಮೆ ಗೌಡನಿಗೆ ಅಶಕ್ತತೆ ಕಾಡುತ್ತಿತ್ತು. ಯಾವುದೇ ಔಷಧಿ ಫಲಕಾರಿ ಆಗಲಿಲ್ಲ. ಯುನಾನಿ ಡಾಕ್ಟರ್ ಹೇಳಿದ ಪಥ್ಯ ಮಾಡಿ ಸ್ವಲ್ಪ ಆರೋಗ್ಯ ಸುಧಾರಿಸತೊಡಗಿತ್ತು. ಆದರೆ ಚಪಲತೆಯ ಗೌಡ ಹಾಸಿಗೆ ಪಥ್ಯ ಮಾಡಲಿಲ್ಲ. ತನ್ನ ತಪ್ಪಿಗೆ ತಾನೇ ಬಲಿಯಾದ. ಆದರೆ ಜನರ ಕಣ್ಣಲ್ಲಿ ಅಂಬಾಬಾಯಿಯ ಶಾಪದಿಂದ ಗೌಡ ಸತ್ತನೆಂದು ತಿಳಿದು, ಊರಿನ ಜನ ಸೇರಿ ಅಂಬಕ್ಕನ ಮನೆಗೆ ಬೆಂಕಿ ಹಚ್ಚಿದರು. ಆದರೆ ಮೊದಲೇ ಈ ಅನಾಹುತ ಅರಿತಿದ್ದ ಅಂಬಕ್ಕ ಅಲ್ಲಿಂದ ಪರಾರಿಯಾಗಿದ್ದಳು. ಕೊನೆಗೆ ಸರ್ಕಾರಿ ಆಸ್ಪತ್ರೆಯಲ್ಲಿ ಕ್ಯಾನ್ಸರ್ ರೋಗದಿಂದ ಬಳಲಿ ಸಾವನ್ನಪ್ಪಿದಳು.

3. ನಿಂಗಿ: ನಿಂಗಿ ಭರಮಶಾ ಮತ್ತು ಪಾರೋತಿ ಮಗಳು ತಾಮ್ರ ಬಣ್ಣದ ನಿಂಗಿ ನಡೆದರ ರಬ್ಬರ್ ಚೆಂಡು ಪುಟದ್ಹಾಂಗ ಪುಟೀತಿದ್ದಳು. ನಕ್ಕರೆ ಎಡಗಲ್ಲದ ಮ್ಯಾಲ ಗುಳಿ ಬೀಳುತ್ತಿತ್ತು. ಅಂತಾ ಅಪರೂಪದ ಬ್ಯೂಟಿ ನಿಂಗಿ. ನಿಂಗಿಯ ಗಂಡ ಸಾಧು ಆಗಿ ಮಠ ಸೇರಿದ ಆದರೆ ಪಾರೋತಿಗೆ ಎಲ್ಲಿಲ್ಲದ ಕಾಳಜಿ ಹತ್ತಿತ್ತು. ಮಗಳ ನಿಂಗಿಯ ಈ ಉಘಾಡ ಬೆಳವಣಿಗೆ ನೋಡಿ ತಲೆದಿಂಬಿನ ಹತ್ತಿರ ಬೆಂಕಿಕೆಂಡಾ ಇಟ್ಗೊಂಡವರಂತೆ ಚಡಪಡಿಸುತ್ತಿದ್ದಳು. ನಿಂಗಿ ತನ್ನ ವಯಸ್ಸಿನ ಬರದೊಳಗ ಹರಿಬಂದ ಹಳ್ಳದ್ಹಾಂಗ

ಹರೀಲಿಕತ್ತಿದ್ದಳು. ಹರಕೋತ ಶಾಂತಾರಾಮ ಹೊಲದಾಗ ಮಡುವು ಗಟ್ಟಿ ನಿಂತಳು. ಶಾಂತಾರಾಮ ಮೆಲ್ಲಗೆ ಆ ನೀರಿನ್ಯಾಗ ಕೈಕಾಲು ತೊಳೆದುಕೊಂಡು, ಮಕ ತೊಳಕೊಂಡು, ಮೈನು ತೊಳಕೊಂಡ.

ನಿಂಗಿ ಮತ್ತು ಶಾಂತಾರಾಮ ಬಹಳಷ್ಟು ಹತ್ತಿರ ಆದರು. ಶಾಂತಾರಾಮನಿಗೆ ಮದುವೆ ಆದ ವಿಷಯ, ಈ ಸಂಬಂಧ ಔಡಲ ಕಟ್ಟಿಗಿಯ ಆಧಾರವಿದ್ದಂತೆ ಎಂಬುದನ್ನು ಅರಿತಿದ್ದರೂ ನಿಂಗಿ ಶಾಂತಾರಾಮನನ್ನು ಆಶ್ರಯಯಿಸಿಕೊಂಡಿದ್ದಳು.

'ಬ್ಯಾಡಂದ್ರೂ ಬಿಡದೀ ಕರ್ಮ' ಎಂಬಂತೆ ನಿಂಗಿ ಮದುವಿಯಾದಳು ನಿಂಗಿಯ ಸ್ವಭಾವ ಮತ್ತು ನಿಂಗಿಯ ಮೈಕಾವಿಗೂ ಸುಟ್ಟು ಬೂದಿಯಾಗಬಹುದು ಎಂದು ಅಂಜಿ ಆಕೀ ಗಂಡ ಗಾಂಜಾ ಸೇದುತ್ತ ಮಾಲಿಗರಾಯನ ಗುಡ್ಡದಾಗ ಬಿದ್ದಿರುತ್ತಿದ್ದ ಹೀಗಾಗಿ ನಿಂಗಿಗೆ ಅವಳ ಗಂಡನ ಮೇಲೆ ತುಂಬಾ ಬೇಸರವಿತ್ತು.

"ದೇವರೆಂಬೋ ಕಸರಾ ಎದ್ಯಾಗಿಂದ ತಗದ ಹಾಕಿದರ ಎದಿಗುಂಡ್ಗಿ ತಾನೇ ಗಟ್ಯಾಗ್ತೈತಿ ಕುಸಮಿ. ಆ ದೇವರು, ಮನಸ್ಸಿನ್ಯಾಗ ಕುಂತ ಚುಚ್ಚಿತ್ತಿದ್ರ ಏನೂ ಮಾಡಾಕೇ ಬರಾಂಗಿಲ್ಲ ನೋಡಲ್ಲ, ನಾ ಹ್ಯಾಂಗ ಅವನ್ನ ತೆಗೆದು ಒಗದೀನಿ"ಶಿ ಹೀಗೆ ಒಂದೊಂದು ಸಲ ತತ್ವಜ್ಞಾನಿಯಂತೆ ಮಾತಾಡುತ್ತಿದ್ದಳು.

"ಈ ಮೈನೂ ಆ ದೇವರದೆಯಲ್ಲವ್ವ ? ಎಂದು ಕುಸುಮಿ ಕೇಳಿದ್ದಕ್ಕೆ "ಇದ್ರ ಏನಂತ ಆಂವಾ ನಮ್ಗ ಈ ಮೈಕೊಟ್ಟಾ ಖರೇ ಅದರ ಜೊತೀಗಿ ಮನಸ್ಸೂ ಕೊಟ್ಟಾ, ಇಚಾರ ಮಾಡಲಿಕ್ಕೆ ತಲೀಕೊಟ್ಟ , ಮಾತಾಡಲಿಕ್ಕೆ ನಾಲಿಗೆ ಕೊಟ್ಟಾ-ಇಷ್ಟೆಲ್ಲ ಕೊಟ್ಟ. ತನ್ನ ಜವಾಬ್ದಾರಿ ಮುಗೀತು ಅಂತ ತಿಳಿದು ಕೈಕಟ್ಗೊಂಡು ಕುಳಿತ ಮುಂದ ನಮ್ಮ ಪಾಡಿಗೆ ನಾವು ಉಳ್ದ ಬಿಟ್ವಿ, ದಟ್ಟ ಕಾಡನ್ಯಾಗ ನಾವು ಸಿಕ್ಕಾಕಿಕೊಂಡ್ವಿ, ಈಗ ನಮ್ಮ ದಾರಿ ನಾವು ಹುಡುಕಿಕೊಂಡು ನಡೀಬೇಕಷ್ಟೆ. ಹುಲಿಕರಡಿ ಬಂದು ಹರಕೊಂಡು ತಿಂದ್ರ ಸಾಯಿಬೇಕು ಇಲ್ಲಾಂದ್ರ ಒಂದೀಟೆ ದಿನಾ, ಹಗಲುರಾತ್ರಿ-ರಾತ್ರಿ ಹಗಲು ನೋಡಕೊಂತ ಬದುಕಿ, ಒಂದಿನಾ ಸತ್ತು ಹೋಗಬೇಕು ದಾರ್‍ಯಾಗ ನಮ್ಮ ಹಾಂಗೇ ತಿರಗೋರ ಸಿಗ್ತಾರ, ಅವರ ಗೂಡ ಸೇರಬೇಕು, ಒಂದಿಷ್ಟು ನಗಬೇಕು, ಒಂದಿಷ್ಟು ಅಳಬೇಕು, ನಾವು ಪಾಪದ ಹೊಳ್ಯಾಗ ಹರಕೊಂಡು ಹೋದರೇನು, ಪುಣ್ಯದ ಮಡುವಿನ್ಯಾಗ ಮುಳಗೀದರೇನು, ಆ ದೇವರಿಗೆ ನಮ್ಮ ಚಿಂತಿನೇ ಇರಾಂಗಿಲ್ಲ. ಎಲ್ಲನೂ ನಾವೇ ಮಾಡಬೇಕು ಎಲ್ಲನೂ ನಾವೇ ಭೋಗಿಸಬೇಕಂದ ಮ್ಯಾಲ ಆ ದೇವರ್‍ಯಾಕ ಬೇಕು ಬಸರ ಮಾಡಿ ಕೂಸ ಹುಟ್ಟೋದಕ್ಕಿಂತ ಮುಂಚೇನೆ ಸತ್ತು ಹೋದ ಅಪ್ಪನ ಹಾಂಗದಾನ ಈ ದೇವರು. ಅವ್ನ ತೊಗೊಂಡೇನ ಮಾಡಬೇಕು ಕುಸುಮಿ ನನ್ನ ಬದುಕು ಪಾಪದ್ದೋ, ಪುಣ್ಯದ್ದೋ ಗೊತ್ತಿಲ್ಲ, ಯಾಕಂದ್ರ ಪಾಪಂದ್ರೇನು ? ಪುಣ್ಯ ಅಂದ್ರೇನು ನನ್ಗ ತಿಳಿದಿಲ್ಲ. ಅದ್ಕಂತ ನಾ ಗಾಳಿಗಿ-ಬಿಸಿಲೀಗಿ,

ಚಳಿಗಿ, ಮಳಿಗಿ ಅಷ್ಟೇ ಯಾಕ ಬದುಕೀಗಿ ಸಾವೀಗಿ ಬೆನ್ನಕೊಟ್ಟ ನಿಂತೀನಿ"[1] ಎಂದು ನಿಂಗಿ ತತ್ವಜ್ಞಾನಿಯಂತೆ ನುಡಿದಳು.

ದೇವರ ಬಗ್ಗೆ ಅವಳಿಗಿದ್ದ ನಿಲುವು ಈ ಜೀವನವನ್ನು ವಾಸ್ತವಿಕತೆಯಿಂದ ನೋಡುವ ಅವಳ ದೃಷ್ಟಿಕೋನ ತತ್ವಜ್ಞಾನಿಯನ್ನು ಮೀರಿಸುವಂತಿತ್ತು.

ಒಂದು ದಿನ ಶಾಂತಾರಾಮನಿಗೆ ಹಾವು ಕಡಿಯಿತು. ಶಾಂತಾರಾಮ ಬಂದಿದ್ದೆ ಕಟ್ಟೆಯ ಕೆಳಗಡೆ ದುಪ್ಪೆಂದು ಕುಸಿದುಬಿದ್ದ ನಿಂಗಿ ಕಟ್ಟೆಯಿಂದ ಜಿಗಿದಿದ್ದೇ ತಡ ಶಾಂತಾರಾಮನ ಬಲಗಾಲದ ಗಾಯಕ್ಕೆ ಬಾಯಿಯಿಟ್ಟು ಬಾಯಿಂದ ರಕ್ತದ ವಿಷವನ್ನು ಹೀರಿ ಉಗುಳಿದಳು. ಶಾಂತಾರಾಮನ ಜೀವ ಉಳಿಸಿದಳು ತನಗೆ ಆಗಬಹುದಾದ ಯಾವ ಅನಾಹುತಗಳನ್ನು ಲೆಕ್ಕಿಸದೇ ನಿಂಗಿ ತನ್ನ ಪ್ರೀತಿಗಾಗಿ ತಾನು ಪ್ರೀತಿಸಿದವರನ್ನು ಉಳಿಸಿದಳು ಇದು ಅವಳ ಎಲ್ಲರೂ ಮೆಚ್ಚುವಂತ ದೊಡ್ಡಗುಣ.

ನಿಂಗಿಯ ಮಾತುಗಳಿಗೆ ಶಾಂತಾರಾಮ ಬಹಳ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದ ಒಂದು ದಿನ "ನಿಂಗಿ ಭಾಳಛಂದ ಮಾತಾಡ್ತಿ ಮಠಾಖಾಲಿ ಬಿದ್ದಿದ. ನಿನ್ನನ್ನೆ ಆ ಮಠದ ಪೀಠದ ಮ್ಯಾಲ ಕೂಡಿಸಬೇಕು ಎಂದ ಅದಕ್ಕೆ ಅವಳು ನೀಡಿದ ಉತ್ತರವು ಅಷ್ಟೆ ಮಾರ್ಮಿಕವಾಗಿತ್ತು. "ಬ್ಯಾಡಪಾ–ಮಾಠಾ ಮಸೀದಿಗೋಳನೇ ಕೊಳ್ಯಾಗ ಕಟ್ಗೊಂಡಿದ್ದರಿಂದಲೇ ಮನುಷ್ಯಾನ ಬದುಕೂ ಮೂರಾಬಟ್ಟೆ ಆಗಿ ಹೋಗೈತಿ. ಇದನ್ನು ತೊಗೊಂಡು ನಾನೇನ್ಮಾಡಲಿ ? ಖರೇ ಹೇಳ್ತಿನಿ–ನಮ್ಮ ಸ್ವಾಮೇರು, ತಮ್ಮ ನಕಲಿ ವೇಶಾನ ಇಳಿಸಿ, ಅಮರವ್ವನ ಕೈ ಹಿಡಕೊಂಡು ಖರೇ ಖರೇ ಇದ್ದ ಜಗತ್ತಿಗೆ ಹೊಂಟು ಹೋದರಲ್ಲ. ಆಗ ಅನಿಸಿತ್ತು. ಈ ಸ್ವಾಮಿಗಿ ನನ್ನ ಅರ್ದ ಆಯುಷ್ಯ ಕೊಡಬೇಕೂ ಅಂತ ಆ ಅಮರವ್ವಗ ಭೇಷ ಅಂತ, ಅಂದೆ ಮನಸ್ಸಿನ್ಯಾಗ ಯಾಕಪಾಂತ ನೀವು ಕೇಳಬಹುದು, ಹೇಳ್ತಿನಿ ಕೇಳಿ– 'ಯಾಕಂದ್ರ ಅವರು ಮನುಷ್ಯರ್ಹಾಂಗ ಇರಬೇಕೆಂತ ಮಾಡಿದರು"[2]. ನಿಂಗವ್ವನ ಮಾತಿನ ಈ ಸತ್ಯಾಂಶ ಎಲ್ಲರನ್ನು ಬೆರಗುಗೊಳಿಸಿತು. ಅವಳು ಬದುಕನ್ನು ನೋಡುವ ರೀತಿ ಒಮ್ಮೆ ತತ್ವಜ್ಞಾನಿಯಂತೆ ಅಪರೂಪದ್ದಾಗಿತ್ತು.

4) **ಕಿಟ್ಟಾಬಾಯಿ:** ಕಿಟ್ಟಾಬಾಯಿ ಶಾಂತಾರಾಮನ ಹೆಂಡತಿ ತುಳಸಕ್ಕನ ನಾದಿನಿ ಕಿಟ್ಟಾಬಾಯಿ ಸಣ್ಣಾಕ್ಕಿದ್ದರೂ ಮೂಗು ದೊಡ್ಡದಾಗಿತ್ತು. ಮಾತಿಗೊಮ್ಮೆ ಮೂಗು ಮುರಿತಿದ್ದಳು. ಅದ್ಕಂತ ಊರಾಗಿನ ಬೇರೆ ಹೆಂಗಸರು ಮುಗೂ ಮರಿ ಕಿಟ್ಟಾಬಾಯಿ ಅಂತ ಹೆಸರಿಟ್ಟಿದ್ದರು.

ಇವಳಿಗೆ ಓರಗಿತ್ತಿ ತುಳಸಕ್ಕನ ಶ್ರೀಮಂತಿಕೆಯನ್ನು ಕಂಡು ಬಹಳಷ್ಟು ಕೋಪ ತಾವು ಅವಳ ಹಾಗೆ ಶ್ರೀಮಂತರಾಗಬೇಕೆಂಬ ಆಸೆ ಮತ್ತು ದುರಾಸೆ ಎರಡೂ ಇತ್ತು. ಅದಕ್ಕಾಗಿ ಏನೇನೋ ತಂತ್ರ ಬಳಸುತ್ತಿದ್ದಳು ಒಂದು ಸಣ್ಣ ಕಿರಾಣಿ ಇಟ್ಟುಕೊಂಡಿದ್ದಳು. ಇವಳು

ಗಲ್ಲೇದ ಮ್ಯಾಲ ಕುಂತಾಗ, ಗಿರಾಕಿಗಳ ಮುಕುರಿ ಬಿಡತ್ತಿದ್ದವು. ವಯಸ್ಸು 32 ಇದ್ದರೂ ಪಂಚವೀಸ ವಯಸ್ಸು ಅಂಬೋ ತರಹ ಇದ್ದಳು.

ತನ್ನ ಗಂಡನ ಮೈಯಿಂದ ಯಾವಾಗಲಾರದೊಮ್ಮೆ ನಿಂಗಿಯ ಬೆವರಿನ ವಾಸನೆ ಬರೊದನ್ನು ಗಮನಿಸಿದ್ದಳು. ನಿಂಗಿಯ ಮತ್ತು ಶಾಂತಾರಾಮರ ನಡುವಿನ ಸಂಬಂಧ ಸುಳಿವು ಇದ್ದರೂ ಬಹಳ ಚಾಣಾಕ್ಷತನದಿಂದ ಬಚ್ಚಿಟ್ಟುಕೊಂಡಿದ್ದಳು. ಹೊಗೆ ಯಾಡುವ ಬೆಂಕಿಗೆ ಗಾಳಿ ಹಾಕಿ ಉರಿ ಎಬ್ಬಿಸುವುದು ಅವಳಿಗೆ ಬೇಕಾಗಿರಲಿಲ್ಲ. ಆದರೂ ಒಳಗೊಳಗೆಬೇಸರ ಪಡುತಿದ್ದಳು. ಅವರಿಬ್ಬರ ನಡುವಿನ ಸಂಬಂಧ ದೊಡ್ಡದನ್ನಾಗಿ ಮಾಡಿ, ತನ್ನ ಸುಖಮಯ ಸಂಸಾರದಲ್ಲಿ ಬಿರುಗಾಳಿ ಎಬ್ಬಿಸುವುದು ಅವಳಿಗೆ ಬೇಕಾಗಿರಲಿಲ್ಲ.

5. **ದ್ವಾರಕಾಬಾಯಿ** : ಮಹಾಕಂತ್ರಿ ಕಿಶನರಾಯರ ಹೆಂಡತಿ. ಜನರ ಬಗ್ಗೆ ಆಡಿಕೊಳ್ಳುವುದೇ ಇವಳ ಕೆಲಸ. ತುಳಸಕ್ಕನ ಗಂಡನ ಬಗ್ಗೆ–'ಮುಂಜಾವಿನಿಂದ ಸಂಜೀತನಕ ಆದಲತನ್ಯಾಗ ಖಡೀ ನಿಂತು, ಜಡ್ಜನ ಮುಂದ ಬಹಸ್ ಮಾಡಿದರ, ಟೊಂಕದಾಗಿನ ಉಸಿರಾ ಪಾದಕ್ಕಿಳಿದು ಮುಂದ ನೆಲದಾಗ ಹೋಗಿ ಬಿಟ್ಟು ಮಕ್ಕಳ್ಯಾಂಗಾದವು?'[೮] ಎಂದು ದ್ವಾರಕಾಬಾಯಿ ಮಾತು ಎಲ್ಲರಿಗೂ ಖರೇ ಅನ್ನಿಸ್ತಿತ್ತು.

ಹೀಗೆ ಮಕ್ಕಳಾಗದ ತುಳಸಕ್ಕನ ಗಂಡ ಗುಂಡಣ್ಣ ಕುರಿತು ಹೇಳುತ್ತಿದ್ದಳು.

6. **ಅಮರಾಂಬಿಕೆ** : ದೊಡ್ಡಿ ಸಂಗಯ್ಯ ಮತ್ತು ಶಾಂತಮ್ಮನ ಮಗಳು ತುಂಬಾ ಸುಂದರವಾದ ಹುಡುಗಿ. ಕಲಬುರ್ಗಿಯ ಅನಾಥಾಶ್ರಮದಲ್ಲಿದ್ದು ಬಿ.ಎ ಪ್ರಥಮ ಶ್ರೇಣಿಯಲ್ಲಿ ಪಾಸಾಗಿ ಶಾಲೆಗೆ ಕೀರ್ತಿ ತಂದ ಹುಡುಗಿ. ಧರ್ಮ ಮತ್ತು ಸಾಹಿತ್ಯದಲ್ಲಿ ಬಹಳ ರುಚಿಯಿತ್ತು.

ಸ್ವಾಮಿಗಳ ಮಾತು,ಅವರ ಪ್ರವಚನ ಮಾಡುವ ಶೈಲಿ, ಅವರಲ್ಲಿರುವ ಪಾಂಡಿತ್ಯ, ಅವರ ನಯ-ವಿನಯಗಳಿಂದ ಅಮರಾಂಬಿಕೆ ಆಕರ್ಷಿತಳಾದಳು. ಸ್ವಾಮಿಗಳ ಹೃದಯಕ್ಕೆ ತೀರಾ ಸಮೀಪವಾದಳು. ಆದರೂ ಯಾವುದೇ ಹಂತದಲ್ಲಿಯೂ ಸೀಮಾರೇಖೆಯನ್ನು ದಾಟದೇ ಸಂಯಮಿ ಆಗಿದ್ದಳು.

ಒಂದು ದಿನ ಮನೆಯಲ್ಲಿ ಇವಳ ಮದುವೆ ವಿಚಾರ ಪ್ರಸ್ತಾಪವಾದಾಗ ಸ್ವಾಮಿಗಳ ಹತ್ತಿರ ಹೇಳಿ ತನ್ನ ದು:ಖ ತಡೆಯದೇ, ಸ್ವಾಮಿಗಳನ್ನು ಅಪ್ಪಿಕೊಂಡು ಬಿಕ್ಕಿ ಬಿಕ್ಕಿ ಅತ್ತಳು. ಸ್ವಾಮಿಗಳು ಕಾವಿ ಬಟ್ಟೆ ಬಿಟ್ಟು ಸ್ವಚ್ಛ ಶುಭ್ರ ಬಟ್ಟೆಗಳನ್ನು ತೊಟ್ಟು ಅಮರಾಂಬಿಕೆಯಲ್ಲಿ ಲೀನವಾದರು. ಅವರಿಬ್ಬರೂ ಆ ಊರಿನಿಂದ ಮಾಯವಾದರು.

7. **ಇಂದಮ್ಮ** : ದೇಸಾಯಿ ಕೇಶವರಾಯರ ಮಗಳು. ಶೇಷಾಚಲ ಎಂಬ ಗುಡಿಯ ಪೂಜಾರಿ ಇವಳ ಮ್ಯಾಲ ಮನಸ್ಸಾಗಿತ್ತು. ದಿನಂಪ್ರತಿ ಪೂಜೆ ಮುಗಿದ ಮ್ಯಾಲ

ಹಸಿಕೊಬ್ಬರಿ, ಸಿಹಿಕಲ್ಲು ಸಕ್ಕರಿ ತಂದು ಇಂದಮ್ಮಗೆ ಕೊಡುತ್ತಿದ್ದ. ಅದರೊಳಗೆ ತನ್ನ ಲವ್ ಅಡಗಿದ್ದು ಅವನಿಗೆ ಗೊತ್ತೇಯಿರಲಿಲ್ಲ. ಆದರೆ ಶೇಷಾಚಲನ ಪ್ರೀತಿ ತಿಳಿಲಿಕ್ಕೆ ಇಂದಮ್ಮಗ ಭಾಳ ದಿವಸ ಬೇಕಾಗಲಿಲ್ಲ. ನಂತರದಲ್ಲಿ ಇಂದಮ್ಮ ಬೇರೆ ಮದುವೆಯದಳು.

8)ಕೇತಕಿ ಕಮಶೇಕರ : ಘೋರ್ಪಡೆ ರಿಸೆಪ್ಸನಿಸ್ಟ, ಸುಂದರವಾದ ಹುಡುಗಿ ಅತೀ ಮಧುರವಾಗಿ ಮಾತನಾಡುವ ಹುಡುಗಿ. ಕೇತಕಿ ಕಮಶೇಕರ ತನ್ನ ಸ್ಲೀವಲೆಸ್‌ದಿಂದ ಕಸ್ಟಮರ್ಗಳ ಜೊತೆ ಮಾತನಾಡುತ್ತಾ, 'ತಾವು ಟೀ ಲೈಕ್ ಮಾಡ್ತಿರೋ ಅಥವಾ ಕಾಫಿ, ಎಂದು ಕೇಳುತ್ತಾ ಗ್ರಾಹಕರ ಆರೈಕೆ ಮಾಡುತ್ತಿದ್ದಳು. ಈಗೀಗ ಅರಳಿದ ತಾಜಾ ಮಲ್ಲಿಗೆಯ ಹೂವಿನಂತಿದ ಇಂಥಾ ಲಾವಣ್ಯವತಿಯ ಆರೈಕೆಯಿಂದ ಗ್ರಾಹಕರು ಖುಷ್ ಆಗುತ್ತಿದ್ದರು. ಅಷ್ಟೆ ಕುಲುಕುಲು ನಗುತ್ತ ಮಾಲೀಕರಾದ ಘೋರ್ಪಡೆಯವರ ಜೊತೆಯು ಮಾತನಾಡುತ್ತಿದ್ದಳು. ಈ ಪಾತ್ರವು ಅತೀ ಸರಳ ಪಾತ್ರವಾಗಿದೆ

9)ರತ್ನಾಬಾಯಿ: ಸಣ್ಣಗೌಡತಿ ಇವಳ ವಯಸ್ಸು ಎಕ್ಕೋಣಿಸದಾಟಿ ವೀಸ . ಬಂಗಾರದಿಂದ ಮಾಡಿದ 'ಬಾಹುಲಿ' ಹಾಂಗ ಥಳಥಳ ಮಿಂಚುತ್ತಿದ್ದಳು. ನೋಡಿದವರ ಕಣ್ಣು ಕುಂಕವಂಥ ಸೌಂದರ್ಯ ಒಮ್ಮೆ ಹುಣ್ಣಿಮೆ ದಿನ ಗೌಡರ ಮೈಯಲ್ಲಿ ಹುಷಾರಿಲ್ಲ ಎಂದು ಗೊತ್ತಿದ್ದರೂ ರತ್ನಾ ಅಬ್ಬರದಿಂದ ಗೌಡರ ಮೇಲೆ ಬಿದ್ದಳು. ಗೌಡರು ಹಸಿವನ್ನು ತಾಳಲಾರದೇ, ರತ್ನಾಳ ಅಂಗಾಂಗಗಳನ್ನು ತಿನ್ನುವಂತೆ ತಿಂದರು.ರತ್ನಾ ತೊಯ್ದು ತೆಪ್ಪಾಗಾದಳು. ಗೌಡರು ನಿದ್ದೆಗೆ ಹೋದರು ಮತ್ತೇ ಏಳಲೇ ಇಲ್ಲ.

ಈ ಪಾತ್ರದಲ್ಲಿ ಹೆಣ್ಣಿನ ಆಸೆಯ ಬಗ್ಗೆ ಲೇಖಕರು ಚಿತ್ರಿಸಿದ್ದಾರೆ. ತನ್ನ ಗಂಡ ಅನಾರೋಗ್ಯದಿಂದ ಬಳಲುತ್ತಿದ್ದರೂ ತನ್ನ ಆಸೆ ಈಡೇರಿಸಲು ಗೌಡರಿಗೆ ಪ್ರೋತ್ಸಾಹ ಇಟ್ಟಳು ಗೌಡರು ಹಸಿವನ್ನು ತಾಳದೇ ಗೌಡರು ಕೊನೆ ಉಸಿರೆಳೆದರು.

10)ಶಾಂತಮ್ಮ : ಅಮರಾಂಬಿಕೆಯ ತಾಯಿಅಮರಾಂಬಿಕೆ ಮತ್ತು ಸ್ವಾಮಿಜೀ ನಡುವಿನ ಸಖ್ಯದಿಂದ ಅಂಜಿ ತನ್ನ ಗಂಡನಿಗೆ ಹೇಳಿದಳು– 'ನನ್ನ ಅಣ್ಣನ ಮಗ ಶಿವಪುತ್ರ' ಇದ್ದಾನ, ಲೈಟ ಹಾಪೀಸನ್ಯಾಗ ಲೈನಮೆನಂತ ಕೆಲಸಾ ಮಾಡ್ತಾನು' ಅವನಿಗೆ ಕೊಟ್ಟ ಮದುವೆ ಮಾಡಬೇಕೆಂಬ ಆಸೆ ಇತ್ತು ಆದರೆ ಅಮರಾಂಬಿಕೆ ಸ್ವಾಮಿಜಿಯ ಜೊತೆ ಮಾಯವಾದಾಗ ತುಂಬನೊಂದುಕೊಂಡಳು. ಈ ಪಾತ್ರದ ಮೂಲಕ ಹೆಣ್ಣು ಹೆತ್ತ ತಾಯಿಯ ತೀವ್ರವಾಗಿ ತನ್ನ ಮಗಳ ಮದುವೆಯ ಚಿಂತೆ ಸದಾ ಕಾಡುತ್ತಿರುತ್ತದೆ ಎಂಬುದನ್ನು ಚಿತ್ರಿಸಿದ್ದಾರೆ.

ಗೋಹರಜಾನ, ಮಾಲತಿ ಮತ್ತು ನಾನು ಕಾದಂಬರಿಯಲ್ಲಿ ಬರುವ ಪಾತ್ರಗಳು

1)ಚಂದಿ : ದೇವದಾಸಿ ಗಂಗವ್ವ ಮತ್ತು ದೇವದಾಸಿ ಮನೆತನದ ಬಾಳಪ್ಪನ ಮಗಳು. ಚಂದಿ ಪ್ರಭು ಜಾತಿಯವಳು ಅಂದರೆ ದೇವದಾಸಿ. ಚಂದಿಯದು ದುಂಡುಮುಖ, ಕೆಂಪು ಮೈಬಣ್ಣ, ರೇಶಮಿಯಂತೆ ಉದ್ದ ಕೂದಲು. ನಕ್ಕರೆ ಗಲ್ಲದ ಮೇಲೆ ಗುಳಿ ಬೀಳುವ ಚಂದಿ.

ಚಂದಿ ರವಿಯವರ ಬಾಲ್ಯದ ಗೆಳತಿ. ಸದಾಕಾಲ ರವಿ ಮನೆಯಲ್ಲಿ ಇರುತ್ತಿದ್ದ. ಚಂದಿಯನ್ನು ನೋಡಿ ಅವಳಪ್ಪ "ಅವನ ಜೋಡಿ ಮದಿ ಮಾಡಿಕೊಂಡು ಬಿಡಲೇ ಬೋಸಡಿ" ಎಂದು ಹೇಳುತ್ತಿದ್ದ. ಶಾಲೆ ಎಂದರೆ ಏನು ಎಂಬುದರ ಅರ್ಥ ತಿಳಿಯದ ಚಂದಿಗೆ ಅಕ್ಷರಾಭ್ಯಾಸ ಆಕಾಶ ಕುಸುಮ ಆಗಿತ್ತು.

ಚಂದಿ ದೊಡ್ಡವಳಾಗಿದ್ದಳು. ಅವಳ ಮೈಕಟ್ಟಿನಲ್ಲಿ ಅಮೂಲಾಗ್ರ ಪರಿವರ್ತನೆಯಾಗಿತ್ತು. ಫ್ರಾಕ ಹೋಗಿ ಪರಕರ, ಲಂಗಾ ಅವಳ ಮೈಮೇಲೆ ಬಂದಿದ್ದವು. ಮೈ ತುಂಬಿಕೊಂಡಿತ್ತು. ಚಂಚಲ ಸ್ವಭಾವ ಮೃದುವಾಗಿತ್ತು. ರೂಪ ಬಣ್ಣ ಇನ್ನಷ್ಟು ಅರಳಿತ್ತು. ಇಷ್ಟೆಲ್ಲ ಬದಲಾವಣೆಯಾಗಿದ್ದರೂ ರವಿ ಮತ್ತು ಅವಳ ನಡುವಿನ ಸ್ನೇಹ ಹಾಗೇ ಇತ್ತು. ಹೇಳಿಕೊಳ್ಳುವಂಥ ಪವಾಡಗಳೇನೂ ಆಗಲಿಲ್ಲ.

ಚಂದಿಯ ಮದುವೆ ಸಂತಪೂರ ದೇಸಾಯಿ ರಂಡಿಮಗನಾದ ವಿಶ್ವಂಭರನ ಜೊತೆ ಆಯಿತು. ಆದರೆ ಅವನು ಅವಳಿಗೆ ಗಂಡನಾಗಿ ಸಿಗಲಿಲ್ಲ. ರಾಕ್ಷಸನಾಗಿ ಸಿಕ್ಕ. ಅವಳ ಮೈ ತುಂಬೆಲ್ಲಾ ಬೀಡಿಯಿಂದ ಸುಟ್ಟಗಾಯಗಳು ತುಂಬಿದ್ದವು. ಯಾವ ನರಕ ಬೇಡ ಎಂದು ಮದುವೆಯಾಗಿದ್ದಳೋ ಅದೇ ನರಕದಲ್ಲಿ ಗಂಡ ದೂಕಲು ಯತ್ನಿಸಿದರೆ ತವರುಮನೆಗೆ ಬರಬೇಕೆಂದರೆ–

"ಕೊಟ್ಟು ಬಿಟ್ಟೇವಿ, ನೀ ಅಲ್ಲೇ ಹೋಗು ಬೇಕಾದರೆ ಇರೂ, ಬ್ಯಾಡಾದ್ರ ಭಾಂವಿ ಕೆರೀ ಹಾರಕೋ" ಅಂತ ಹೇಳ್ತಾರ್ ಏನೂ ಅರಿಯದ ಮುಗ್ಧ ಚಂದಿ ಕೊನೆಗೆ ವೇಶ್ಯೆಯರ ಓಣಿಗೆ ಹೋಗಿತ್ತಾಳೆ. ಗಂಡ ಯಾವುದನ್ನು ಮಾಡು ಅಂದಿದ್ದೋ, ಅದನ್ನೇ ಇಲ್ಲಿ ಚಂದಿ ಮಾಡಹತ್ತಿದಳು. ಆ ನರಕಕ್ಕಿಂತ ಈ ನರಕ ಎಷ್ಟೋ ವಾಸಿ ಎಂದು ರವಿಯ ಹತ್ತಿರ ಹೇಳಿಕೊಂಡು ಅತ್ತಳು.

ಒಂದು ದಿನ ರವಿ ಊರಿಗೆ ಹೋದಾಗ, ಯಾರೋ ಸಾಹೇಬ್ರ ಎಂದು ಕರೆದರು. ನೋಡಿದರ ಚಂದಿ. ಚಂದಿಯ ರೂಪ ಎಲ್ಲಾ ಹೋಗಿ ಬಿಳಿಕೂದಲು, ಮೈಮ್ಯಾಲಿನ ಚರ್ಮವೆಲ್ಲ ಸುಟ್ಟು ಹೋಗಿ ಸಾವಿಗೆ ಸಮೀಪವಾಗಿದ್ದಳು. ಭೀಕ್ಷೆ ಬೇಡಿ ತನ್ನ ಜೀವನ ಸಾಗಿಸತೊಡಗಿದಳು. ಕೊನೆಗೆ ರವಿಗೆ ಅವಳಿಗೆ ಭೆಟ್ಟಿಯಾಗಲೇ ಇಲ್ಲ. ಚಂದಿ ಕಂಡಿದ್ದ ಕನಸು ಯಾವುದು? ಆದರೆ ವಾಸ್ತವದ ಜಗತ್ತು ಅದನ್ನು ನನಸು ಮಾಡಲು ಬಿಟ್ಟಿತೆ?

ಏನೂ ಅರಿಯದ ಮುಗ್ಧ ಹೆಣ್ಣು ಸಮಜದಲ್ಲಿ ದೊಡ್ಡವರು ಎಣಿಸಿಕೊಂಡವರ ತೃಷೆಗೆ ಹೇಗೆ ಬಲಿಯಾದಳು? ಎಂಬುದರ ಮೂಕವೇದನೆಯೇ ಈ ಪಾತ್ರ.

2) ಮಾಲತಿ: ಎಣ್ಣೆ ಗಂಪಿನ ಮೈಕಾಂತಿ, ಆಕರ್ಷಕವಾದಂತಹ ಕಣ್ಣುಗಳು, ದುಂಡು ಮುಖ, ಆಹ್ವಾನಿಸುವಂತಿದ್ದ ಮೈಕಟ್ಟು, ಹೊಂದಿದ ಮಾಲತಿ ರವಿಸರ್‌ನ ಶಿಷ್ಯೆ ತುಂಬಾ ಬಿಚ್ಚು ಮನಸ್ಸಿನ ಹುಡುಗಿ ಆದರೂ ಇಂಟಲೀಜೆಂಟ ಹುಡುಗಿ. ಮೆಟ್ರಿಕ ಪಾಸಾದ ನಂತರ ತಂದೆ ಕೆಲಸಕ್ಕೆ ಸೇರು ಎಂದ. ಆದರೆ ಕಲಿತು ಬಿ.ಎ. ಪಾಸು ಮಾಡಬೇಕೆಂಬ ಹಂಬಲ. ಇವಳ ಮಾವನ ಮಗ ವಿನೋದ ಬಹಳ ಕೆಟ್ಟ ಹುಡುಗ. ಬಹಳಷ್ಟು ಸಲ ಮಾಲತೀನ ಪೀಡಿಸ್ತಾ ಇದ್ದ. ಈ ವಿಷಯ ತಾಯಿಗೆ ಗೊತ್ತಿದ್ದರೂ ಸುಮ್ಮನೇ ಇದ್ದಳು. ಅಪ್ಪನಂತೂ ಕುಡುಕ. ಕುಡಿದ ಅಮಲಿನಲ್ಲಿ ತಾಯಿನೂ ಇವಳನ್ನು ಬೈಯುತ್ತಿದ್ದ ಹೀಗಾಗಿ ಒಂದು ನಮೂನಿ ನರಕದ ಯಾತನೆ ಆಗಿತ್ತು ಅವಳ ಮನೆ.

ಅಂತಹ ಸಮಯದಲ್ಲಿ ಮರುಳುಗಾಡಿನಲ್ಲಿ ಓಯಸಿಸ್ ಸಿಕ್ಕಂತೆ ರವಿಸಿಕ್ಕ. ರವಿಸರ್‌ಗೆ ಇವಳ ನಮ್ರತೆಯಿಂದ ಚುರುಕುತನ, ವಿಧೇಯತೆ, ಉತ್ಸಾಹ ಕಂಡು ತುಂಬಾ ಸಂತೋಷವಾಗುತ್ತಿತ್ತು. ಬರಬರುತ್ತ ಇವರಿಬ್ಬರ ನಡುವೆ ಸ್ನೇಹ ಬೀಜಾಂಕುರವಾಯಿತು. ದಿನಗಳು ಉರುಳಿದಂತೆ ಅವರಿಬ್ಬರಲ್ಲಿ ಆತ್ಮೀಯತೆ ಹೆಚ್ಚುತ್ತಾ ಹೋಯಿತು. ಮನೆಯಲ್ಲಿನ ಅಸಹ್ಯಕರವಾದ ವಾತಾವರಣ ದಿಂದ ಹೊರಬಂದು ನೆಮ್ಮದಿಯ ವಾತಾವರಣಕ್ಕೆ ಬಂದು ಚಿಂತೆಗಳಿಂದ ಮುಕ್ತರಾಗುತ್ತಿದ್ದರು ಒಮ್ಮೆಯಂತೂ ಅವರಿಬ್ಬರೂ ಭಾವನೆಯ ಉದ್ವೇಗದ, ಕಾಮದ ವನ ಪ್ರಾಂತದಲ್ಲಿ ಮನದಣಿಯುವಷ್ಟು ವಿಹರಿಸಿದರು. ಆಗ ಅವರಿಗೆ ಭೂಮ್ಯಾಕಾಶಗಳೇ ವಸ್ತ್ರಗಳಾಗಿದ್ದವು.

ಮಾಲತಿಗೆ ಮದುವೆ ಮಾಡಿಕೊಳ್ಳಬೇಕೆಂಬ ಮನಸ್ಸಾಯಿತ್ತು. ಅದು ತನಗಿಂತ ಏಳೆಂಟು ವರ್ಷ ಚಿಕ್ಕ ಹುಡುಗನ ಜೊತೆ ಇದಕ್ಕೆ ಅವಳು ಕೊಡುವ ಕಾರಣ–"ಈ ಅಪ್ಪನ ಕಾಟ, ಆ ದರಿದ್ರ ಮಾವನ ಮಗನ ಕಾಟ, ಈ ಹುಚ್ಚು ಮೈಕಾಟ ತಪ್ಪಿಸಿಕೊಳ್ಳಲಿಕ್ಕೆ ನಾನು ಒಬ್ಬನ್ನ ಗಂಟು ಹಾಕಿಕೊಳ್ಳಲೇ ಬೇಕು" ಎಂದು ಹೇಳಿದಳು ಕೊನೆಗೆ ಆ ಅವಕಾಶವು ತಪ್ಪಿ ಹೋಯಿತು.

ಮಾಲತಿಯ ಮಾತುಗಳು ಒಮ್ಮೊಮ್ಮೆ ರವಿ ಮಾಡುವ ತಪ್ಪುಗಳನ್ನು ಒತ್ತಿ ಒತ್ತಿ ಹೇಳುವಂತಿದ್ದವು. ಮಾಲತಿಯ ದೃಷ್ಟಿಯಲ್ಲಿ ಸತ್ಯದ ನಿಜವಾದ ಅರ್ಥ ಏನೆಂದರೆ ಸ್ವಾರ್ಥ, ಮಾಲತಿಯ ವಿಚಾರ ಸರಣಿಗಗಳು ಎಂತಹವರನ್ನು ಬೆರಗುಗೊಳಿಸುತ್ತಿದ್ದವು.

'ಸತ್ಯದ ಖರೇ ಅರ್ಥ 'ಸ್ವಾರ್ಥ'ಅಂತ ತೀಳಿತಾ ? ನೀವು ನನಗೆ ಬೇಕಾಗುವ ತನಕ ನಾ ನಿಮ್ಮನ್ನ ಪ್ರೀತಿಸ್ತೇನೆ. ಬ್ಯಾಡಾದಾಗ, ನಿಮ್ಮನ್ನು ಬಿಟ್ಟು ಬಿಡ್ತೇನೆ ಹಂಗೇ ನೀವು

ಸಹ ಇದರಲ್ಲೇನು ಅಸಹಜತೆ ಏನಿಲ್ಲ ನೀವು ಅತ್ಯಂತ ಸಹಜವಾದಂಥಾ, ಸರಳವಾದಂಥ, ನೈಸರ್ಗಿಕವಾದಂಥ ಕ್ರಿಯೆಗಳನ್ನು ವ್ಯರ್ಥ ವೈಭವೀಕರಿಸುತ್ತೀರಿ.”

ಈ ವೈಭವೀಕರಣದಿಂದ ದುಃಖ ಬರ್ತದೆ, ಸುಖಾ ಇಲ್ಲಾ" ಇಂತಹ ವಿಚಿತ್ರವಾದ ವಿಚಾರ ಸರಣಿಗಳು ಅವಳ ತಲೆ ತುಂಬೆಲ್ಲಾ ಇದ್ದವು. ಇದಕ್ಕೆಲ್ಲಾ ಕಾರಣ ಅವಳ ವಾಸ್ತವಿಕ ಬದುಕು.

ಒಂದು ದಿನ ಮುಂಬಯಿಗೆ ನಾಲ್ಕು ದಿನ ಹೋಗಿ ಬರುತ್ತೇನೆ ಎಂದು ಹೇಳಿ ನೀಲಿ ಕಾರಗಾಡಿ ಕುಳಿತು ಹೋದ ಮಾಲತಿ, ಎಲ್ಲಿಗೆ ಹೋದಳು ಎಂಬುದು ಗುರುತಾಗಲೇ ಇಲ್ಲ.

ಮಾಲತಿ ದಡ್ಡಳಲ್ಲ ಅಶಿಕ್ಷಿತಳಲ್ಲ, ಅಚಿಜಬುರುಕಿಯೂ ಅಲ್ಲ ಎಂಥ ಸಂಕಟ ಬಂದರೂ ಪಾರಾಗಬಲ್ಲ ಬುದ್ಧಿವಂತ ಹೆಂಗಸು, ಚಾಣಾಕ್ಷ ಹೆಂಗಸು ಅಂತಹವಳಿಗೆ ಎಂತಹ ದುರ್ಗತಿ ಬಂತು ಇದಕ್ಕೆ ಯಾರು ಕಾರಣ ? ಈ ಸಮಾಜವೇ ? ಈ ವ್ಯವಸ್ಥೆಯೇ ? ಉತ್ತರ ಸಿಗದ ಪ್ರಶ್ನೆಗಳಿವು.

3)ಗೋಹರಜಾನ:ಗೋಹರಜಾನ ಮುಜರಾ ಕಾರ್ಯಕ್ರಮ ಮಾಡುವ ಹೆಂಗಸು ಮೈಮಾರಿಕೊಳ್ಳುವ ಹೆಂಗಸು ಆದ್ರೆ ಭಾಳ ನಿಯತ್ತಿನ ಹುಡುಗಿ ಕಂಡಕಂಡವರ ಮುಂದೆ ಸೆರಗು ಹಾಸೋದಿಲ್ಲ, ಬರೀ ದುಡ್ಡಿಗಾಗಿ ಮೈಮಾಂಸ ಮಾರಿಕೊಳ್ಳೋದಿಲ್ಲ, ಬಾಳ ರಸಿಕ ಹುಡುಗಿ, ಸಂಗೀತದಲ್ಲಿ ಅಪಾರ ಶ್ರದ್ಧೆ ಅದ. ಗಜಲ್, ಕವ್ವಾಲಿ, ನಜಂಗಳೆಂದರೆ ಆಕೆಗೆ ಪ್ರೀತಿ, ಗಾಲಿಬ್, ಮೀರ, ಸೌದಾ ಇಕಬಾಲ್ ಹಾಲಿ, ಫಿರಾಕ್ ಮುಂತಾದ ಉರ್ದು ಕವಿಗಳ ಸಹಸ್ರಾರು ರಚನೆಗಳು ಬಾಯಿಪಾಠ ಅವ. ತಂಬೂರಿ ಹಿಡಿದು ಸ್ವರ ಹಚ್ಚಿದ್ರೆ ಸಾಕು ಮೈಮರೆತು ಬಿಡ್ತಾಳೆ ಎಂಥ ಅದ್ಭುತ ಕಂಠ. ಜಯದೇವರ ಗೀತ ಗೋವಿಂದ ಕಲೀಬೇಕೂ, ಹಾಡಬೇಕೂ ಎನ್ನುವ ಹುಚ್ಚು” ಜಯದೇವರ ಗೀತಗೋವಿಂದ ಕಲಿಸುವ ಗುರು ನರಸಿಂಹ.

ಗೋಹರಜಾನ್ ಹಾಡಲು ಪ್ರಾರಂಭಿಸಿದರೆ ಅದ್ಭುತ, ಅಲೌಕಿಕ ಮತ್ತು ರಮ್ಯವಾದಂತಹ ವಾತಾವರಣ ನಿರ್ಮಾಣವಾಗುತ್ತಿತ್ತು. ನಾದಮಯ, ರಸಮಯ ಪರಿಸರದಲ್ಲಿ ಮೈಮರೆಯುವಂತಹ ವಾತಾವರಣ ನಿರ್ಮಾಣವಾಗುತ್ತಿತ್ತು. ಹಗಲಿಡೀ ಮೈಮನಗಳಲ್ಲಿ ತುಂಬಿಕೊಂಡಿದ್ದ ನೋವು, ಕಳವಳ, ಚಿಂತೆ, ಭಯ, ಉದ್ವಿಗ್ನತೆ, ನೈರಾಶ್ಯ ಎಲ್ಲವೂ ಕ್ಷಣಾರ್ಧದಲ್ಲಿ ಮಾಯವಾಗಿ ಕೇವಲ ಆನಂದ ಮಯವಾದಂತಹ ವಾತಾವರಣ ನಿರ್ಮಾಣವಾಗುತ್ತಿತ್ತು. ಇಂತಹ ಅದ್ಭುತ ಸಂಗೀತ ಪ್ರಪಂಚದ ಅಭೂತಪೂರ್ವ ತಾರೆ ಗೋಹರಜಾನ್.

ಗೋಹರಜಾನ್‌ಗೆ ರಾಗ ಪರಿಚಯ, ವಿಸ್ತಾರ, ಆರೋಹ ಅವರೋಹಗಳನ್ನು ಹೇಳಿಕೊಟ್ಟ ಗುರುಚರಣ ಉಪಾಧ್ಯಾಯ ಅವರ ಸಂಗೀತಕ್ಕೆ ಮಾರು ಹೋದ ಗೋಹರಜಾನ್ ಅವರಲ್ಲಿ ಅನುರಕ್ತಳಾದಳು. ಆದರೆ ಅವರ ಪ್ರೀತಿಗೆ ಅಡ್ಡಿಯಾಗಿದ್ದು ಧರ್ಮ. ಗೋಹರಜಾನ್ನು ಮುಸ್ಲಿಂ ಧರ್ಮವಾದರೆ; ಗುರುಚರಣ ಉಪಾಧ್ಯಾಯರು ಹಿಂದೂ ಧರ್ಮ ಆದರೆ ಅವರಿಬ್ಬರದು ಸಂಗೀತ ಧರ್ಮ ಆದರೆ ಒಂದು ದಿನ ಗೋಹರಜಾನಳ ಮನೆಯಲ್ಲಿದ್ದಾಗ, ಕಟ್ಟರವಾದಿ, ಧರ್ಮಾಂದರು ಗುರುಚರಣ ಮೇಲೆ ಹಲ್ಲೆ ನಡೆಸಿ ಪರಾರಿಯಾದರು. ಗುರುಚರಣ ಗೋಹರಜಾನಳ ಮಡಿಲಲ್ಲಿ, ರಕ್ತದ ಮಡುವಿನಲ್ಲಿ ತಮ್ಮ ಕೊನೆಯ ಉಸಿರೆಳೆದರು. ಇದರಿಂದ ಗೋಹರಜಾನಳ ಹೃದಯದಲ್ಲಿ ಆಗ ತಾನೇ ಅರಳಬೇಕಿದ್ದ ಪ್ರೀತಿ, ಅವಳ ಮಡಿಲಲ್ಲಿಯೇ ಕರಗಿ ಹೋಯಿತು.

ಅಲ್ಲಿಂದ ತಪ್ಪಿಸಿಕೊಂಡು ಹೈದರಾಬಾದಗೆ ಗೋಹರಜಾನ ತನ್ನ ಅಮ್ಮಿಜಾನ್ ಜೊತೆಗೆ ಹೋದಳು. ಆದರೆ ಅಲ್ಲಿ ಹೊಟ್ಟೆಗಾಗಿ, ಕಾಲಲ್ಲಿ ಗೆಜ್ಜೆ ಕಟ್ಟಿಕೊಂಡು, ಅವರಿವರ ಮುಂದೆ ಕುಣಿದಳು, ಬಟ್ಟೆ ಕಳಚಿದಳು, ಸಂಗೀತದ ಕಲಾ ರಸಿಕರ ಹೃದಯದಲ್ಲಿ ನೆಲೆಸಿಬೇಕಾಗಿದ್ದ ಗೋಹರಜಾನ್, ಸಿರಿವಂತರ, ಕಾಮುಕರ ತೋಳ ತೆಕ್ಕೆಯಲ್ಲಿ ನೆಲೆಸಿದಳು.

ನಂತರ ಅನಿರೀಕ್ಷಿತವಾಗಿ ನರಸಿಂಹ ಗುರೂಜಿಯವರ ಪರಿಚಯವಾಯಿತು. ಅವರ ಪಾಂಡಿತ್ಯಕ್ಕೆ ಮರುಳಾದಳು. ಆದರೆ ದೇವರು ಕೂಡ ಅವಳಿಂದ ನರಸಿಂಹ ಗುರೂಜಿಯನ್ನು ಕಸಿದುಕೊಂಡ, ಗೋಹರಜಾನಳ ಬದುಕು ಮತ್ತೇ ಬಿರುಗಾಳಿಗೆ ಸಿಲುಕಿದ ಹಡಗಿನಂತಾಯಿತು . ಇವೆಲ್ಲದರ ನಡುವೆ ಗೋಹರಜಾನಗೆ ಮತ್ತೊಂದು ಅಗ್ನಿ ಪರೀಕ್ಷೆ ಎದುರಾಯಿತು. ಗೋಹರಜಾನ್ ಊರ ಹೊರವಲಯದಲ್ಲಿ ವಾಸಿಸುತ್ತಿದ್ದಳು. ಅವಳ ಮನೆಯ ಸುತ್ತಮುತ್ತ ಬಯಲು ಜಾಗವಿತ್ತು. ಅಲ್ಲೊಂದು ಸಹಕಾರ ಸಂಘ ಹುಟ್ಟಿಕೊಂಡಿತು. ಅದು ಅಲ್ಲಿನ ಜಾಗವನ್ನೆಲ್ಲಾ ಕಬಳಿಸಿತು. ಗೋಹರಜಾನಳ ಮನೆಯ ಮೇಲೆ ಆ ಸಹಕಾರ ಸಂಘದ ಕಣ್ಣುಬಿತ್ತು. ಅದನ್ನು ಕಬಳಿಸುವ ಹುನ್ನಾರ ನಡೆಯಿತು. ಇದರಿಂದ ಗೋಹರಜಾನ ಭಯಗೊಂಡಳು. ಪುಡಾರಿಗಳು, ಪೋಲಿಸರು ಒಂದಾದರು. ಅವರ ಒಗ್ಗಟ್ಟಿಗೆ ಗೋಹರಜಾನ್ ಬಲಿಪಶುವಾದಳು.

ಗೋಹರಜಾನ್ ಇದ್ದ ಬಡಾವಣೆಯಲ್ಲಿ ಹೊಸ ಹೊಸ ಮನೆಗಳು ನಿರ್ಮಾಣವಾದವು. ಮನೆಗಳು ನಿರ್ಮಾಣವಾದಂತೆ ಗೋಹರಜಾನ್ ಬದುಕಿನಲ್ಲಿ ಹೊಸ-ಹೊಸ ಸಮಸ್ಯೆಗಳು ನಿರ್ಮಾಣವಾದವು. ಅಲ್ಲದ್ದ ಮನೆಯ ಮಾಲೀಕರೆಲ್ಲಾ ಸೇರಿ ಪೋಲಿಸ್ ಠಾಣೆಗೆ ಹೋಗಿ ಕಂಪ್ಲೀಟ್ ನೀಡಿದರು. ತಾವು ಇದ್ದ ಬಡಾವಣೆಯಲ್ಲಿ ವೇಶ್ಯಾವಾಟಿಕೆ ಮಾಡುವ ಮನೆಯಿದೆ ಎಂದು. ಇದರಿಂದ ಗೋಹರಜಾನ್ ನಿಂತ ನೆಲವೇ ಕುಸಿದು ಬಿದ್ದಂತಾಯಿತು. ಕೊನೆಗೆ ಅಲ್ಲಿಂದ ಆ ರಾಜಕೀಯ ಪುಡಾರಿಗಳಿಗೆ

ಅಂಜಿ, ಗೋಹರಜಾನ್ ಮನೆಬಿಟ್ಟು ಮುಂಬಯಿಗೆ ಹೋದಳು. ಮರಿಪುಡಾರಿಗಳು ಕೊಟ್ಟ ಬಳುವಳಿ ಇದು.

ಸಂಗೀತ ಬಗ್ಗೆ ಅಪಾರ ಶ್ರದ್ಧೆ, ಭಕ್ತಿಯನ್ನು ಇಟ್ಟುಕೊಂಡ, ಕಲಾದೇವಿಯ ಆರಾಧಕಳಾಗ ಬಯಸಿದ್ದ ಗೋಹರಜಾನ್, ಧರ್ಮ ಮತ್ತು ರಾಜಕೀಯದ ಚದುರಂಗದದಾಟಕ್ಕೆ ಸಿಲುಕಿ, ತನ್ನ ಪ್ರೀತಿಯನ್ನು, ತನ್ನ ಮನೆಯನ್ನು ಕಳೆದುಕೊಂಡು ಮುಂಬಯಿಗೆ ತೆರಳುವಂತಾಯಿತು.

4) **ವೃಂದಾಬಾಯಿ** : ಕಥಾನಾಯಕನಾದ ರವೀಂದ್ರ ಅವರ ತಂದೆಯ ಚಿಕ್ಕಪ್ಪ ದೇವರಾಯನ ಹೆಂಡತಿ. ವೃಂದಾಬಾಯಿ ಅಥವಾ ರಿಂದಾಬಾಯಿ ಗಿಡ್ಡದೇಹ, ಕಪ್ಪು ಮೈ ಬಣ್ಣ, ದಪ್ಪಮೂಗ, ನೋಡಿದರೆ ಭಯಪಡುವಂಥ ಆಕಾರ, ಗಂಡನ ಸಾವಿನ ನಂತರ ತನ್ನ ತಮ್ಮ ತುಕಾರಾಮನ ಮಾತು ಕೇಳಿ ರವೀಂದ್ರ ಅವರ ತಾಬೇ ಇದ್ದ ಬಿಡಿಸಿಕೊಳ್ಳಲು ಕೋರ್ಟನಲ್ಲಿ ಧಾವೆ ಹೂಡಿ ಹೊಲ ಪಡೆದುಕೊಂಡಳು. ಕೊನೆಗೆ ತಮ್ಮನಿಂದ ಸಾಕಷ್ಟು ನೋವು ಅನುಭವಿಸಿದಳು. ಹೊಲವನ್ನು ಪಡೆಯಲು ಸಹಾಯ ಮಾಡಿದ್ದ ಶ್ರೀಪತಿಯು ತನಗೂ ಪಾಲು ಬೇಕೆಂದು ಕೋರ್ಟನಲ್ಲಿ ಕೇಸು ಹಾಕಿದ ಇದರಿಂದ ಅನಾಥಳಾದಳು.ಸಂಬಂಧಿಕರೆಲ್ಲರೂ ದೂರಾದರು.

ಈ ಪಾತ್ರದ ಮೂಲಕ ಲೇಖಕರು ಒಂಟಿ ಹೆಣ್ಣನ್ನು ಸಮಾಜವು ಹೇಗೆ ನಡೆಸಿಕೊಳ್ಳತ್ತದೆ. ಒಂಟಿ ಹೆಣ್ಣಿನ ಆಸ್ತಿಯನ್ನು ಕಬಳಿಸಲು ಎಲ್ಲರೂ ಮಾಡುವ ತಂತ್ರ–ಕುತಂತ್ರಗಳ ಬಗ್ಗೆ ಹೇಳಿದ್ದಾರೆ. ಇದೊಂದು ಪೋಷಕ ಪಾತ್ರವಾಗಿದೆ. ಜನರ ಸಹಾಯದ ಹಿಂದೆ ಇರುವ ದುರದ್ದೇಶವನ್ನು ಅರಿಯದೇ, ತನ್ನ ಸಂಬಂಧಿಕರನ್ನು ಎಲ್ಲರನ್ನು ದೂರಮಾಡಿಕೊಂಡು ನೋವು ಅನುಭವಿಸುವ ಹೆಣ್ಣಿನ ಪಾತ್ರವಿದು.

5)**ಉಮಾಬಾಯಿ** : ಕಥಾನಾಯಕನಾದ ರವೀಂದ್ರ ಅವರ ಚಿಕ್ಕಪ್ಪನ ಹೆಂಡತಿ ಉಮಾಬಾಯಿ ಚಂದಿ ಮತ್ತು ರವೀಂದ್ರ ಮಾತಾಡೋದನ್ನು ಸಹಿಸದೇ ಚಂದಿಯನ್ನು ಸದಾಕಾಲ ಬೈಯುತ್ತಿದ್ದಳು. ಚಂದಿ ದೊಡ್ಡವಳಾದ ಮೇಲೆ ಅಂತೂ ರವೀ ಜೊತೆ ಮಾತಾಡಲೂ ಸಹ ಬಿಡುತ್ತಿರಲಿಲ್ಲ. ಮುಂದೆ ಆಗಬಹುದಾದ ಅನಾಹುತದ ಬಗ್ಗೆ ಎಚ್ಚರದಿಂದ ಇರುತ್ತಿದ್ದಳು.

ಇದು ಕಥೆಗೆ ಬಂದ ಪೋಷಕ ಪಾತ್ರವಿದು. ಪ್ರತಿಯೊಂದು ಅವಿಭಕ್ತ ಕುಟುಂಬದಲ್ಲಿರುವ ಪಾತ್ರದಂತೆ ಈ ಪಾತ್ರವು ಗೋಚರವಾದಂತೆ ಆಗುತ್ತದೆ.

6) ಗಿರಿಜಾಬಾಯಿ : ಕಥಾನಾಯಕನಾದ ರವೀಂದ್ರನ ದೊಡ್ಡ ಚಿಕ್ಕಮ್ಮ, ಮುರಳಿದರರಾಯರ ದೊಡ್ಡ ತಮ್ಮನ ಹೆಂಡತಿ. ಮುರಳೀಧರರಾಯರ ಚಿಕ್ಕಪ್ಪ ಸತ್ತಾಗ, ನಾಟಕೀಯವಾಗಿ ಅತ್ತು, ಅತ್ತೆ ರಿಂದಾಬಾಯಿ ಸಾಕಷ್ಟು ಶೂಶ್ರುಷೆ ಮಾಡಿದಳು.

ಲೇಖಕರು ಈ ಪಾತ್ರದ ಮುಖಾಂತರ ಅವಿಭಕ್ತ ಕುಟುಂಬದಲ್ಲಿನ ಒಳಜಗಳಗಳನ್ನು ಅವರು ಪಡುವ ನೋವನ್ನು ಪ್ರಸ್ತುತ ಪಡಿಸಿದ್ದಾರೆ. ಇದೊಂದು ಪೂರಕವಾಗಿ ಸೃಷ್ಠಿಯಾದಂತೆ ಪಾತ್ರ.

7) ಚಿನ್ನಮ್ಮ : ನರಸಿಂಗರಾಯರ ಉಪಪತ್ನಿ ಚಿನ್ನಮ್ಮ. ಇವಳಿಗೆ ಮಕ್ಕಳಿರುವುದಿಲ್ಲ. ಇವಳ ಗಂಡನ ಸಹೋದರರು ಆಸ್ತಿಯಲಿ ಪಾಲು ಕೊಡಲು ಒಪ್ಪದೇ ಇದ್ದಾಗ, ಚಿಕ್ಕಮ್ಮ ತನ್ನ ಗಂಡನಿಗೆ ತಿಳಿ ಹೇಳುತ್ತಾಳೆ. ನೀವು ಇರೋತನಕ ನಿಮ್ಮ ಜೊತೆ ಇರ್ತಿನಿ, ನೀವು ಸತ್ತಮ್ಯಾಲ ನನ್ನ ಜನ್ಮ ನಾಯಿ ಪಾಡಾಗತದ, ಇತ್ತ ತವರು ಮನೀನೂ ಇಲ್ಲ, ಇತ್ತ ಗಂಡನ ಮನೆಯೂ ಇಲ್ಲದಂತೆ ಆಗುತ್ತದೆ. ಆದ್ದರಿಂದ ಆಸ್ತಿಯಲ್ಲಿ ಪಾಲುಕೊಡಲು ಒಪ್ಪುವುದಿಲ್ಲ.

ಇಲ್ಲಿ ಲೇಖಕರು ಚಿನ್ನಮ್ಮನ ದೂರದೃಷ್ಠಿಯ ಬಗ್ಗೆ ಹೇಳಿದ್ದಾರೆ. ಇಂದು ಸಮಾಜದಲ್ಲಿ ಹೆತ್ತ ತಂದೆ –ತಾಯಿಗಳನ್ನು ನೋಡದೆ ಜನರಿರುವಾಗ , ಆಸ್ತಿಯನ್ನು ಕಬಳಿಸಿಕೊಂಡ ಮೇಲೆ ಚಿಕ್ಕಮ್ಮನನ್ನು ಹೇಗೆ ಆರೈಕೆ ಮಾಡುತ್ತಾರೆ ಎಂಬ ಸಂಶಯ ಚಿಕ್ಕಮ್ಮನನ್ನು ಕಾಡುತ್ತಲೇ ಇರುತ್ತದೆ. ಇಂದಿನ ಸಮಾಜದಲ್ಲಿ ಇಂತಹ ಸನ್ನಿವೇಶಗಳ ಪ್ರತಿಬಿಂಬದಂತೆ ಈ ಪಾತ್ರವು ಕಾಣುತ್ತದೆ.

8) ಶಾವಕ್ಕಾ : ದೇವರಾಯನ ಒಂದು ರೀತಿಯ ಹೆಂಡತಿ. ರಿಂದಾಬಾಯಿಗೆ ಒಂದು ರೀತಿಯ ಸವತಿ. ದೇವರಾಯನ ಮೆಚ್ಚಿನ ಹೆಣ್ಣು. ದೇವರಾಯನ ಕೊನೆಯ ಉಸಿರು ಇವಳ ಮನೆಯಲ್ಲಿ ಹೋಗುತ್ತದೆ. ದೇವರಾಯನ ಅಂತಿಮ ಸಂಸ್ಕಾರದ ಕ್ರಿಯಾ–ಕರ್ಮಗಳನ್ನು ಮುಗಿಸಿಕೊಂಡು ಶಾವಕ್ಕಾ ಊರು ಬಿಟ್ಟು ಹೋಗುತ್ತಾಳೆ. ದೇವರಾಯ ಹೋದ ಮ್ಯಾಲ, ಸಂಬಂಧವು ಹೋಯಿತು ಎಂದು ಹೇಳಿ ಹೋಗುತ್ತಾಲೆ.

ಇಲ್ಲಿ ಲೇಖಕರು ಈ ಪಾತ್ರದ ಮುಖಾಂತರ ಒಂದು ಹೆಣ್ಣು ಕಾನೂನಿನ ಪ್ರಕಾರ ಮದುವೆ ಆಗದಿದ್ದರೆ ಅವಳು ಅನುಭವಿಸುವ ನೋವನ್ನು ಚಿತ್ರಿಸಿದ್ದಾರೆ. ಅವಳು ತನ್ನ ಜೀವ ಮಾನವೀಡಿ, ಇಟ್ಟುಕೊಂಡವನನ್ನು ಪ್ರೀತಿಯಿಂದ ನೋಡಿಕೊಳ್ಳತ್ತಾಳೆ. ಆದರೆ ಅವನು ತೀರಿಹೋದ ಮೇಲೆ ಇಂತವಹರ ಆಸರೆಯೂ ತಪ್ಪಿಹೋಗುತ್ತದೆ. ಮುಂದೆ ಸಾಯುವ ತನಕ ಇವರ ಗತಿಯೇನು ? ಎಂಬ ಪ್ರಶ್ನೆ ಕಾಡುತ್ತಲೇ ಇರುತ್ತದೆ.

9) ಅಚ್ಯಾಸಾನಿ: ಅಚ್ಯಾಸಾನಿ ಅಷ್ಟೊಂದು ರೂಪವತಿ ಆಗಿರಲಿಲ್ಲ ,ಕೇವಲ ರೂಪದಿಂದಲೇ ಗಿರಾಕಿಗಳನ್ನು ಆಕರ್ಷಿಸಿ ಧಂದೆ ನಡೆಸುವುದು ಲಾಭದಾಯಕವಾಗಿರಲಿಲ್ಲ. ಆದ್ದರಿಂದ

ಸಂಗೀತ ಕಲಿತು ಧಂದೆಯ ಜೊತೆಗೆ ಸಂಗೀತವೂ ಇದ್ದರೆ, ಸಂಗೀತ ಪ್ರೀಯರು ಬರಬಹುದು ಎಂಬ ಕಾರಣಕ್ಕೆ ಸಂಗೀತ ಕಲಿಯಲು ಬಯಸಿದಳು. ತುಕಾರಾಮ ಎಂಬ ಕುರೂಪಿಯ ಜೊತೆ ಇರಲು ಮನಸ್ಸಿಲ್ಲದಿದ್ದರೂ ತುಂಬೂರಿ ಹಾಗೂ ಸಂಗೀತದ ಸಲುವಾಗಿ ಅವನ ಸಖ್ಯವನ್ನು ಬೆಳೆಸಲು ಬಯಸುತ್ತಾಳೆ.ಆದರೂ ಮನಸ್ಸಿಲ್ಲದ ಅವನ ಜೊತೆ ಇರುವುದು ಬೇಕಾಗಿರಲಿಲ್ಲ. ಹಾಗೇನಾದರೂ ಆದರೆ ಹಾಲಿನಲ್ಲಿ ಧತೂರಿ ಪುಡಿ ಹಾಕಿ ಕೊಟ್ಟು ಕೊನೆಗಾಣಿಸುವುದು ಎಂಬ ಪ್ಲ್ಯಾನ ಹಾಕಿ ಅವನ ಜೊತೆ ಇರುತ್ತಾಳೆ.

ಇಲ್ಲಿ ಲೇಖಕರು ಒಂದು ಹೆಣ್ಣು ತಾನು ಬದುಕಲು ಎಂತಹ ವೇಷ ಧರಿಸಬೇಕಾಗುತ್ತದೆ ಎಂಬುದನ್ನು ಮನದಟ್ಟು ಮಾಡಿದ್ದಾರೆ. ರೂಪವಿಲ್ಲ ಎಂದಾಕ್ಷಣ ಸಂಗೀತ ಕಲಿತು ಬದುಕು ಸಾಗಿಸಬೇಕು ಎಂಬ ಈ ಪಾತ್ರವು ಕೊಲೆ ಮಾಡಲು ಕೂಡ ಹೇಸುವುದಿಲ್ಲ. ಈ ಪಾತ್ರದ ಮುಖಾಂತರ ಹೆಣ್ಣಿನ ಅಂತರಂಗದ ಒಳನೋಟಗಳನ್ನು ಹೇಳುತ್ತಾರೆ.

10) ಸವಿತಾ : ಇವಳು ಕಥಾನಾಯಕನ ಹೆಂಡತಿ ಕಡುಬಡತನದಿಂದ ಬಂದ ಹೆಣ್ಣು. ಅವಳ ತವರು ಮನೆಯಲ್ಲಿ ಒಂದು ಸೀರೆ ಕೊಂಡರೆ ಅದರಲ್ಲಿ ಹರಿದು ಅಕ್ಕ-ತಂಗಿ ಇಬ್ಬರು ಉಡುತ್ತಿದ್ದರು. ಗುಡ್ಡಕ್ಕೆ ಹೋಗಿ ಕುಳ್ಳ, ಕಟ್ಟಿಗೆ ಆರಿಸುವುದು ಇವಳ ಕಾಯಕ. ಇಂತಹ ಕಡುಬಡಯನದಿಂದ ಬಂದ ಹೆಣ್ಣು ಗಂಡನ ಮನೆಯಲ್ಲಿ ಆದರೂ ಸುಖಃ ಸಿಗಬಹುದು ಎಂದು ಬಯಸಿದರೆ ಇಲ್ಲಿಯೂ ಅದೇ ಹಾಡು ಆದರೂ ಕೂಡ ಎಂದು ಐಷಾರಾಮಿ ಜೀವನವನ್ನು ಬಯಸದೇ ಕೇವಲ ಗಂಡನ ಪ್ರೀತಿ ವಿಶ್ವಾಸ ಬಯಸುವ ಮುಗ್ಧ ಹೆಣ್ಣು. ಗಂಡನು ಮಾಲತಿ ಎಂಬ ಹೆಣ್ಣಿನ ಜೊತೆ ಸಂಪರ್ಕವಿದ್ದರೂ ಅರಿತುಕೊಳ್ಳದೇ ಸದಾ ಗಂಡನ ಆರೈಕೆ ಮಾಡುತ್ತಾ, ಹೊರ ಪ್ರಪಂಚದ ಸತ್ಯದ ಗೋಜಿಗೆ ಹೋಗದೇ ಇರುವ ಮುಗ್ಧ ಹೆಣ್ಣು.

ಈ ಮುಗ್ಧತೆಗೆ ಅವಳ ಬಡತನವು ಕಾರಣವಾಗಿರಬಹುದೇ ? ಎಂಬ ಸಂಶಯ ಮೂಡುತ್ತದೆ. ಆದರೂ ಮನೆಯಲ್ಲಿ ಆಸ್ತಿಯ ಜಗಳ, ಗಂಡನ ಹೊರಗಿನ ಸಂಪರ್ಕ ಯಾವುದನ್ನು ಅರಿಯದ ಮುಗ್ಧೆ. ಕಾದಂಬರಿ ಉದ್ದಕ್ಕೂ ಸಾಗಿ ಬರುವ ಈ ಪಾತ್ರವು ಯಾವುದೇ ಸಂದರ್ಭದಲ್ಲಿಯೂ ಐಷಾರಾಮಿ ಬದುಕಿಗೆ ಆಶೆ ಪಟ್ಟ ಹೆಣ್ಣು ಅಲ್ಲ. ಗಂಡನೇ ಪರದೈವ ಎಂದು ತಿಳಿದು, ಗಂಡನ ಪ್ರೀತಿಗಾಗಿ ಹಂಬಲಿಸುವ ಹೆಣ್ಣಿನ ಪಾತ್ರವಿದು. ಮುಗ್ಧ ಹೆಣ್ಣು ಮಕ್ಕಳ ದುರಂತದ ಬದುಕಿನ ಚಿತ್ರಣ ಕಾದಂಬರಿಯ ಈ ಪಾತ್ರದ್ದಾಗಿದೆ.

11) ಕಾಶಮ್ಮ :- ಒಬ್ಬ ವಿಧವೆಯ ಗಂಡ ಸತ್ತ ನಂತರ ಕಪನೂರ ಸ್ವಾಮಿ ಔಷಧೋಪಚಾರ ಮಾಡಲು ಇವಳ ಮನೆಗೆ ಬರುತ್ತಾನೆ. ಮೆಲ್ಲನೆ ಇವಳನ್ನು ವಶಪಡಿಸಿಕೊಂಡು ಮೋಸದಿಂದ ಇವಳ ಆಸ್ತಿಯನ್ನು ಲಪಟಾಯಿಸುತ್ತಾನೆ. ಇದೇ ವ್ಯಕ್ತಿ

ಮತ್ತೊಂದು ಹೆಣ್ಣಿನ ಸಹವಾಸ ಬಯಸಿದಾಗ ಈ ಕಾಶಮ್ಮನಿಗೆ ಕೋಪ ಬರುತ್ತದೆ. 'ಬೇರೊಂದು ಹೆಣ್ಣನ್ನು ಬಯಸುವುದು ಯೋಗ್ಯವಲ್ಲ' ಸ್ವಾಮಿ ಇದ್ದಿಯಾ ಎಂಬುದನ್ನು ನೆನಪಿನಲ್ಲಿಟ್ಟುಕೋ ಎಂದು ತನ್ನ ಕೋಪ ವ್ಯಕ್ತ ಪಡಿಸುತ್ತಾಳೆ. ಹಾಗಿದ್ದೂ ಕೊನೆಗೆ ತನ್ನ ಆಸ್ತಿಯನ್ನೆಲ್ಲಾ ಕಳೆದುಕೊಳ್ಳುವ, ಹೆಣ್ಣಿನ ಬದುಕು ಹೋರಾಟಗಳಿಂದ ತುಂಬಿದ್ದನ್ನು ನಿರೂಪಿಸುವ ಪಾತ್ರವಿದು.

ಈ ಪಾತ್ರದಲ್ಲಿ ಒಂದು ಹೆಣ್ಣು ಹೇಗೆ ಮೋಸ ಹೋಗುತ್ತಾಳೆ ಮತ್ತು ಅನೈತಿಕ ಸಂಬಂಧಗಳು ಎಂತಹ ಗಂಡಾಂತರಕಾರಿ ಎಂಬುದನ್ನು ಇಲ್ಲಿ ಚಿತ್ರಿಸಲಾಗಿದೆ. ಲೇಖಕರು ಸಮಾಜದಲ್ಲಿ ಕಂಡು ಬರುವ ಇಂತಹ ಪ್ರಸಂಗಗಳನ್ನು ಪ್ರತಿಬಿಂಬಿಸದಂತೆ ಭಾಸವಾಗುತ್ತದೆ.

'ಯಾತನಾ ಶಿಬಿರ' ಈ ಕಾದಂಬರಿಯಲ್ಲಿ ಬರುವ ಸ್ತ್ರೀ ಪಾತ್ರಗಳು

1) **ಶಾರಿ :** ಲಿಂಗಬಸ್ಯಾ ಹೆಂಡತಿ. ಜನರೆಲ್ಲಾ 'ಚಿಲ್ಲರೆ ರಂಡೆ' ಎಂದೇ ಸಂಭೋದಿಸುತ್ತಿದ್ದರು. ಹರಸೂರಿನ ಈ ಶಾರಿ ಗಂಡನ ಜೊತೆ ದುಡಿಯಲು ಬಂದವಳು. ಗಂಡ ಇವಳನ್ನು ಬಿಟ್ಟು ಹೋದ. ಪರದೇಶಿಯಾದ ಶಾರಿ ಬಾವಿ ಬೀಳಲು ಹೋಗಿದ್ದಳು. ಇದನ್ನರಿತ ಊರಿನ ಗೌಡ ಅವಳನ್ನು ಕರೆದುಕೊಂಡು ಬಂದ. ಅವಳಿಗೆ ಮನೆ ಕಟ್ಟಿಸಿಕೊಟ್ಟ. ಇದರಿಂದ ಶಾರಿ ಮತ್ತು ಗೌಡನ ನಡುವೆ ಸಂಬಂಧ ಇದೆ ಎಂದು ಗೌಡರ ವಿರೋಧಿಗಳು ಗುಲ್ಲೆಬ್ಬಿಸಿದರು.

ಕೆಲವು ವರ್ಷಗಳ ನಂತರ ಲಿಂಗಬಸ್ಯಾ ಮರಳಿಬಂದ, ಬಂದವನೇ ಶಾರಿಯೊಡನೆ ಒಳ್ಳೆಯ ಬದುಕು ನಡೆಸಿದ. ಶಾರಿ ಮತ್ತು ಗೌಡರ ನಡುವಿನ ತಂದೆ-ಮಗಳ ಸಂಬಂಧ ಎಂಬುದನ್ನು ಅರಿತ. ಪರಿವರ್ತನೆಗೊಂಡ.

ಈ ಪಾತ್ರದ ನಿರೂಪಣೆಯಲ್ಲಿ ಗಂಡನ ಬಿಟ್ಟ ಹೆಣ್ಣಿನ ಬದುಕಿನ ಚಿತ್ರವಿದೆ. ಜನರ ದೃಷ್ಟಿಯಲ್ಲಿ 'ಚಿಲ್ಲರೆ ರಂಡೆ' ಎನಿಸಿದರೂ, ಎಂದೂ ಯಾವುದೇ ತಪ್ಪು ಮಾಡದ ರೀತಿ ಶೋಷಣೆಗೆ ಒಳಗಾಗುವ ಬಗೆ ಇಲ್ಲಿದೆ.

2) **ಕುಸುಮಾ:** ಕುಸುಮಾ ನಾರಾಯಣ ಶಾಸ್ತ್ರಿಗಳ ಮಗಳು. ನಕ್ಷತ್ರದಂತಹ ಹುಡುಗಿ. ಕೆಂಪು ಮೈಬಣ್ಣ ನಾಜೂಕು ತುಟಿಗಳು, ಬೊಗಸೆಗಣ್ಣು, ಉದ್ದಕೂದಲು, ತುಂಬಿದ ಮೈಯಿಂದ ಕುಸುಮಾ ಎಲ್ಲರಿಗೂ ಬೇಕಾದವಳಾಗಿದ್ದಳು. ಸ್ವಲ್ಪ ಬಿಚ್ಚು ಸ್ವಭಾವ, ತುಸು ಜಗಳಗಂಟೆ.

ಕುಸುಮಾಗೆ ಒಬ್ಬ ಅಶ್ಲೀಲವಾಗಿ ವರ್ತಿಸಿದ. ಅವನ ನಾಜೂಕು ಜಾಗಕ್ಕೆ ಕಲ್ಲು ಹೊಡೆದು ತಕ್ಕ ಉತ್ತರ ನೀಡಿದ್ದಳು. ಕುಸುಮಾ ಬೆಳೆದಂತೆ ಅವಳ ಬಗ್ಗೆ ದಂತಕತೆಗಳು ಬೆಳೆದವು. ಕೃಷ್ಣಾ ದೀಕ್ಷಿತರನ್ನು ವರಿಸಿಕೊಂಡು ಸುಖವಾಗಿ ಇದ್ದಳು. ಈ ಕಾದಂಬರಿ

ಉದ್ದಕ್ಕೂ ಕುಸುಮಾಳ ಪಾತ್ರವು ಸಾಗುತ್ತದೆ. ಗಂಡ ಕೃಷ್ಣಾ ದೀಕ್ಷಿತ ಬ್ರಾಹ್ಮಣಕಿ ಬಿಟ್ಟೆ? ಎಂದು ಹೇಳಿದಾಗ ಇವಳ ಮನಸ್ಸಿಗೆ ಆಶ್ಚರ್ಯ ಮತ್ತು ಆಘಾತವು ಆಯಿತು. ಚಂದನಕೇರಿ ಬರಗಾಲ ಬಂದಾಗ ಊರಿನ ಜನರೆಲ್ಲರೂ ಊರು ಬಿಟ್ಟು ಹೋಗುತ್ತಿದ್ದರು. ಆದರೂ ಕೂಡ ಕುಸುಮಾ ಗಂಡನ ಜೊತೆ ಇದ್ದು, ಕಾಲರಾ ಪೀಡಿತ ಜನರ ಸೇವೆ ಮಾಡುತ್ತಿದ್ದಳು. ಒಂದು ದಿನ ಕಾಲರಾ ಬಂದು ಅವಳೇ ಇಹ ಲೋಕ ತ್ಯಜಿಸಿದಳು.

ಈ ಲೇಖಕರು ಸೃಷ್ಟಿಸಿದ ಈ ಪಾತ್ರವು ಕಥಾನಾಯಕನಿಗೆ ಪೂರಕ ಪಾತ್ರದಂತೆ ಸೃಷ್ಟಿಯಾಗಿದೆ. ಕುಸುಮಾ ದಿಟ್ಟ ಹುಡುಗಿ ಆದರೂ ಕೃಷ್ಣಾದೀಕ್ಷಿತನ ಅನುಕೂಲದಂತೆ ಇರುತ್ತಾಳೆ. ಯಾವತ್ತೂ ಅವಳ ಸಂಸಾರದಲ್ಲಿ ಇರುಸು–ಮುರುಸು ಇಲ್ಲ. ಜನರ ಸೇವೆ ಮಡುತ್ತ, ಇಹಲೋಕ ತ್ಯಜಿಸುವ ಧೀಮಂತ ಪಾತ್ರ.

3)ಬಸಮ್ಮ: ಸಾಹುಕಾರ ಶಾಮಣ್ಣನ ಹೆಂಡತಿ. ಶಾಮಣ್ಣ ಇಲ್ಲದ ಸಮಯದಲ್ಲಿ ತಾನೇ ಅಂಗಡಿಯಲ್ಲಿ ಕುಳಿತು ವ್ಯಾಪಾರ ಮಾಡುತ್ತಿದ್ದಳು. ಮದುವೆಯಾಗಿ 6 ವರ್ಷವಾದರೂ ಉಡಿ ತುಂಬಿರಲಿಲ್ಲ. ದೇವರಾಯಿತು, ದಿಂಡರಾಯಿತು, ಮಂತ್ರ –ತಂತ್ರಗಳಾದವು,ವೈದ್ಯ–ಡಾಕ್ಟರುಗಳ ಔಷಧಿ ಆಯಿತು. ಆದರೂ ಪಾಪ ಬಂಜೆಯಾಗಿ ಉಳಿದಳು. ಗಂಡ ಶಾಮಣ್ಣ ವ್ಯಾಪಾರದ ಸಲುವಾಗಿ ಖರೀದಿ ಮಾಡಲು ವಾರಗಂಟಲೇ ಪರ ಊರಿಗೆ ಹೋಗುತ್ತಿದ್ದ. ಹೀಗಾಗಿ ಇವಳ ಮನಸ್ಸಿನಲ್ಲಿ ಮತ್ತು ಮೈಯಲ್ಲಿ ಎಲ್ಲೋ ಒಂದು ಕಡೆ ಸುಖ ಕಡಿಮೆ ಆಗಿತ್ತು.

ಒಂದು ದಿನ ರಾಮಾದೀಕ್ಷಿತರ ಮೇಲೆ ಹಸಿದ ಹೆಬ್ಬುಲಿಯಂತೆ ಎರಗಿದಳು. ರಾಮಾದೀಕ್ಷಿತರು ಅಂಜಿ ಇಂದು ರಾಮನವಮಿ ಎಂದು ಹೇಳಿ ಪಾರಾಗಿದ್ದರು. ನೇಕಾರ ನಿಂಗಣ್ಣ ಯಾವಾಗಲೂ ಇವಳನ್ನು ನೋಡಿ ನಗುತ್ತಿದ್ದ. ನಿಂಗಣ್ಣನಿಗೆ ಬಸಮ್ಮ ದಪ್ಪ ಕೆನೆ ಹಾಕಿ ಚಹಾ ಮಾಡಿಕೊಡುತ್ತಿದ್ದಳು. ಚಹಾ ಕುಡಿಯುತ್ತ ನಿಂಗಣ್ಣ ಜಗತ್ತನ್ನೇ ಮರೆಯುತ್ತಿದ್ದ.

ಒಂದು ದಿನ ಬಸಮ್ಮನಿಗೆ ಬಚ್ಚಲು ಮನೆಯಲ್ಲಿ ಭೂತ ಹಿಂಬಾಲಿಸಿದಂತೆ ಆಗಿ ಬೆಚ್ಚಿ ಬಿದ್ದಳು. ನಿರ್ಜೀವ ವಸ್ತುವಿನಂತೆ ಹಾಗೇ ಬಿದ್ದಳು.ಬಸಮ್ಮ ಶ್ರೀಮಂತೆ ಆದರೆ ಮನೋಭಿಲಾಷೆಯಂತೆ ಅವಳ ಸುಖದಲ್ಲಿ ಸ್ವಲ್ಪ ಕೊರಗು ಎದ್ದು ಕಾಣುತ್ತಿತ್ತು. ಅದನ್ನು ತುಂಬಿಕೊಳ್ಳಲು ನಿಂಗಣ್ಣನಿಗೆ ಚಹಾದಲ್ಲಿ ದಪ್ಪ ಕೆನೆ ಹಾಕಿ ಚಹಾ ಮಾಡಿಕೊಡುತ್ತಿದ್ದಳು. ಗಂಡ ವ್ಯಾಪಾರ ಮಾಡಲು ಹೋದರೆ ವಾರಗಟ್ಟಲೇ ಹೋಗಬೇಕಾಗುತ್ತಿತ್ತು. ಹೀಗಾಗಿ ಇವಳಿಗೆ ಬೇರೆದಾರಿ ಕಾಣದೆ ಹೀಗೆ ಮಾಡಿದಳು.

4) ಚನ್ನಿ : ಕುಲಕರ್ಣಿ ಭೀಮನ ಮನೆಯ ಆಳು ಒಂದು ದಿನ ಆದಿತ್ಯವಾರ ಅಮವಾಸ್ಯೆ ದಿನ ಭೀಮನ ಮನೆಯ ಮುಂದೆ ಯಾರೋ ಸಾರಿಸಿ ರಂಗೋಲಿ ಹಾಕಿ, ಕುಂಕುಮ, ಅರಿಸಿಣ, ಬಾಳೆಹಣ್ಣು, ತೆಂಗಿನಕಾಯಿ, ಕೇರ ಬೀಜ ಹಾಕಿ ಮುತ್ತಲೆಲೆಯಲ್ಲಿ ಇಟ್ಟಿದ್ದರು.

ಇದನ್ನು ನಸುಕಿನಲ್ಲಿ ಇದನ್ನು ನೋಡಿ ಭೀಮ ನಡುಗಿದ ಚೀರಿದ ತಾಯಿ ಓಡಿ ಬಂದಳು. ಮಗನ ಅವಸ್ತೆ ನೋಡಿ ಗಾಬರಿಯಾದಳು ಚನ್ನಿ ಬಂದು ಅದನ್ನು ನೋಡಿ– ಭೀಮಗ ಮತ್ತು ರತ್ನಾಬಾಯಿಗೆ ಒಳಗ ನಡ್ರಿ ಯಾರ್‍ಯಾರ ನೋಡಿ ಪುಕ್ಕ ಹಾರೋರಂತ ನಕ್ಕಾರು ಒಳಗ ನಡ್ರೀ ಎಂದು ಹೇಳಿ ತಾನೇ ಅದನ್ನೆಲ್ಲ ಸ್ವಚ್ಛ ಮಾಡಿದಳು.

ಕೆಳವರ್ಗದ ಹೆಣ್ಣು ಮಗಳ ಧೈರ್ಯ ಇಲ್ಲಿ ವಿಶೇಷವಾದದ್ದು. ಸಾವಿಗೂ–ನೋವಿಗೂ ಅಂಜದೇ ಅನಾದಿಕಾಲದಿಂದಲೂ ಮೇಲ್ವರ್ಗದ ಜನರ ಸೇವೆ ಮಾಡುತ್ತ ಬಂದಿರುವ ಒಂದು ಜನಾಂಗದ ಪ್ರತಿರೂಪದಂತೆ ಭಾಸವಾಗುತ್ತದೆ. ಯಾರೋ ಬಾನಾಮತಿ ಮಾಡಿದ್ದನ್ನು ನೋಡಿ ಹೆದರಿದ, ಕಲಿತ ಬ್ರಾಹ್ಮಣ ಜನ, ಏನೂ ಕಲಿಯದ ಹೆಣ್ಣು ಅಂಜದೇ ಅಳುಕದೇ ಸ್ವಚ್ಛ ಮಾಡಿದ್ದನ್ನು ನೋಡಿದರೆ, ಕಲಿತವರು, ಸುಶಿಕ್ಷಿತರು ಯಾರು ಇವರಲ್ಲಿ ಎಂಬ ಪ್ರಶ್ನೆ ಮೂಡುತ್ತದೆ. ಚನ್ನಿಯ ನಿಸ್ವಾರ್ಥ ಸೇವೆ ಮೆಚ್ಚುವಂಥದು.

5) ರತ್ನಾಬಾಯಿ: ಕುಲಕರ್ಣಿ ಭೀಮನ ಹೆಂಡತಿ.ಇದೊಂದು ಈ ಕಾದಂಬರಿಯ ಸಾಮಾನ್ಯ ಪಾತ್ರ.

6) ರುಕ್ಕವ್ವ: ಸಾಬ್ಯಾನ ಹೆಂಡತಿ, ಸಾಬ್ಯಾ ಶಾಮಣ್ಣನ ಆತ್ಮೀಯ ಗೆಳೆಯ. ರುಕ್ಕವ್ವ ಕಪ್ಪು ಮೈ, ದೊಡ್ಡ ಕಣ್ಣು, ಪುಷ್ಪ ಎದೆಯ ಹೆಣ್ಣು. ಕಪ್ಪು ಸುಂದರಿ ಎಂದು ಹೇಳಬಹುದು.ಈ ಕಾದಂಬರಿಯ ಚಿಕ್ಕ ಪಾತ್ರವಿದು.

ಒಂದು ಕೈಫಿಯತ್ ಈ ಕಾದಂಬರಿಯಲ್ಲಿ ಬರುವ ಪಾತ್ರಗಳು.

1) ರೇಖಾ : ಕಥಾನಾಯಕ ನಾರಾಯಣ ಭಟ್ಟರ ಹೆಂಡತಿ. ಸುಂದರವಾದ ಹೆಂಡತಿ. ಗಂಡನ ಜೊತೆಗೆ ಸುಖದು:ಖಗಳನ್ನು ಹಂಚುಕೊಂಡು ಜೀವನ ಸಾಗಿಸುತ್ತಿದ್ದಳು. ಆದರೆ ಮದುವೆಯಾದ ಒಂದೇ ವರ್ಷದಲ್ಲಿ ಗಂಡು ಮಗುವಿಗೆ ಜನ್ಮ ನೀಡಿ ತೀರಿಕೊಂಡಳು. ತೀರಾ ಸರಳ ಪಾತ್ರ.

2) ಕಮಲಮ್ಮ : ಕಥಾ ನಾಯಕ ನಾರಾಯಣಭಟ್ಟರ ತಂಗಿ. ಅತ್ತಿಗೆ ತೀರಿಕೊಂಡ ನಂತರ ಆ ಮಗುವಿನ ಜವಾಬ್ದಾರಿ ಹೊತ್ತವಳು. ಆದರೆ ಒಂದು ದಿನ ಜ್ವರ ಬಂದು, ಎಂಟು ದಿನವಾದ್ರೂ ಕಡಿಮೆ ಆಗಲಿಲ್ಲ. ಕೊನೆಗೆ ಜ್ವರದಲ್ಲಿಯೇ ತನ್ನ ಪ್ರಾಣ ತ್ಯಾಗ ಮಾಡಿದಳು. ಇದೊಂದು ತೀರಾ ಸರಳ ಪಾತ್ರ.

3) **ಪಾರ್ವತಮ್ಮ:** ಕಮಲಮ್ಮಳ ನೆರೆಮನೆಯವಳು. ಉಪ್ಪಾರ ಜಾತಿಯವಳು. ಕಮಲಮ್ಮನಿಗೆ ಆರಾಮವಿಲ್ಲದಾದ ಸಮಯದಲ್ಲಿ ಕಮಲಮ್ಮ ಮತ್ತು ಕೂಸಿನ ವ್ಯವಸ್ಥೆ ಮಾಡಿದವಳು. 'ಮನುಷ್ಯ ಧರ್ಮ' ಎಂದರೆ ಒಬ್ಬರು ಮತ್ತೊಬ್ಬರಿಗೆ ಸಹಾಯ ಮಾಡುವುದು ಎಂಬ ತತ್ವವನ್ನು ಅರಿತವಳು. ಹಣದ ಸಹಾಯ ಮತ್ತು ಊಟ–ಉಪಹಾರದ ಸಹಾಯ ಮಾಡುತ್ತಿದ್ದಳು.

ಯಾವುದೇ ಜಾತಿ, ಧರ್ಮದವರು ಇದ್ದರೂ ಕೂಡಾ ಮನುಷ್ಯ ಧರ್ಮ ಎನ್ನುವುದು ಬಲು ಮುಖ್ಯ ಎಂಬ ತಾತ್ವಿಕತೆಯ ನಂಬಿಕೆಯಲ್ಲಿ ಈ ಪಾತ್ರ ಮೂಡಿದೆ.

4) ತುಂಗಾ : ಕಾಡಿನಲ್ಲಿ ಒಂದು ಗುಡಿಸಿಲಿನಲ್ಲಿ ವಾಸಿಸುತ್ತಿರುವ ಹೆಣ್ಣು. ಅಂತಹ ಕಾಡಿನಲ್ಲಿ ಒಬ್ಬಂಟಿಗಳಾಗಿ ವಾಸಿಸುವ ಹೆಣ್ಣು. ಚಿಕ್ಕ ಚಹಾದ ಅಂಗಡಿಯನ್ನು ಇಟ್ಟುಕೊಂಡು ವ್ಯಾಪಾರ ಮಡುತ್ತಿದ್ದಳು. ಕಾಡಿನಲ್ಲಿ ಬರುವ ಜನರಿಗೆ ಇಡ್ಲಿ, ವಡೆ, ದೋಸೆಗಳನ್ನು ಮಾಡಿ ಕೊಟ್ಟು, ಹಣ ಪಡೆದು ಅದರಿಂದ ಬದುಕು ಸಾಗಿಸುತ್ತಿದ್ದಳು. ಅವಳು ಒಬ್ಬ ಮೀನುಗಾರನ ಹುಡುಗನನ್ನು ಪ್ರೀತಿಸಿ ಮದುವೆಯಾಗಿ ಊರು ಬಿಟ್ಟು ಬಂದಿದ್ದಳು. ಆದರೆ ಕೆಲವು ದಿನಗಳಿಂದ ಅವಳ ಗಂಡ ಶಂಕರ ಮಾಯವಾಗಿದ್ದ. ಹೀಗಾಗಿ ಅವಳು ಒಬ್ಬಂಟಿಗಳಾಗಿ ಈ ಕಾಡಿನಲ್ಲಿಯೇ ಉಳಿದಿದ್ದಳು. ಅನೀರಿಕ್ಷಿತವಾಗಿ ನಾರಾಯಣ ಭಟ್ಟರು ಇವಳು ಇರುವಲ್ಲಿಗೆ ಬಂದು ತಂಗಿದರು. ಅವರಿಬ್ಬರಲ್ಲಿ ಪ್ರೇಮಾಂಕುರವಾಯಿತು.

ಮುಂದೆ ಅವರು ಮುಂಬೈ ಮಹಾನಗರಿಗೆ ಬಂದರು. ಮುಂಬೈ ಮಹಾನಗರ ಕಡಲಿನ ದಂಡೆಯ ಮೇಲೆ ಇವರ ಸಂಸಾರ ಪ್ರಾರಂಭವಾಯಿತು. ಆದರೆ ಅದೆಷ್ಟು ದಿನ ಒಂದು ಜೋಪಡಿಯಲ್ಲಿ ಇರಬಹುದು. ರೈಲಿನಲ್ಲಿ ಪರಿಚಯವಾದ ಸಲೀಂರ ಮನೆಗೆ ಕೆಲಸ ಹುಡುಕಿಕೊಂಡು ಹೋದರು. ಅಲ್ಲಿ ಸಲೀಂ ಅವರ ತಾಯಿಯ ಶುಶ್ರೂಷೆ ಮಾಡುವ ಕೆಲಸವು ಸಿಕ್ಕಿತು. ಅತ್ಯಂತ ಪ್ರಾಮಾಣಿಕವಾಗಿ ಕೊನೆಯ ದಿನಗಳನ್ನ ಎಣಿಸುತ್ತಿದ್ದ ಸಲೀಂ ಅವರ ತಾಯಿಯ ಸೇವೆ ಮಾಡಿದಳು. ಯಾರನ್ನೂ ಮೆಚ್ಚಿಸುವುದಕ್ಕಾಗಿ ಅಥವಾ ಪುಣ್ಯಗಳಿಸುವುದಕ್ಕಾಗಿ ಅವಳು ಸೇವೆ ಮಾಡುತ್ತಿರಲಿಲ್ಲ. ಮನುಷ್ಯಳಾಗಿ ಹುಟ್ಟಿದ್ದಕ್ಕಾಗಿ ಅವಳು ಸೇವೆ ಮಾಡುತ್ತಿದ್ದಳು. ಅನೀರಿಕ್ಷಿತವಾಗಿ ಭೆಟ್ಟಿಯಾದ ನಾರಾಯಣಭಟ್ಟರಲ್ಲಿ ಅನುರಕ್ತಳಾಗಿ ಮುಂಬೈ ನಗರಕ್ಕೆ ಬಂದು ಅವರಿಬ್ಬರೂ ಒಂದೇ ಔಟ ಹೌಸಿನಲ್ಲಿ ವಾಸಿಸುತ್ತಿದ್ದರು. ಆದರೂ ಕೂಡ ಮನಸ್ಸಿನಲ್ಲಿ ಎಲ್ಲೋ ಒಂದು ಕಡೆ ತನ್ನ ಗಂಡನಾದ ಶಂಕರನ ನೆನಪು ಹಾಗೇ ಉಳಿದಿತ್ತು.

ಒಂದು ದಿನ ಗಂಡನ ಭೆಟ್ಟಿಯಾಯಿತು. ಮತ್ತೇ ಹಳೆಯ ನೆನಪುಗಳು ಬಂದು ಕೊನೆಗೆ ಶಂಕರನ ಕಡೆ ಹೋಗುವ ನಿರ್ಧಾರ ಮಾಡುತ್ತಾಳೆ.

ಈ ಕಾದಂಬರಿಯ ಉತ್ತರಾರ್ಧದಿಂದ ಪ್ರಾರಂಭವಾಗುವ ಈ ಪಾತ್ರವು ನಿಜವಾದ ಪ್ರೀತಿಯ ಅರ್ಥ ತಿಳಿಸುತ್ತದೆ. ಪ್ರೇಮ ವಿವಾಹವಾಗಿ ಓಡಿ ಬಂದು ಸ್ವತಂತ್ರ ಜೀವನ ಸಾಗಿಸುತ್ತಿದ್ದಾಗ ಗಂಡ ಮಾಯವಾಗುತ್ತಾನೆ ಅಂಜದೇ ಅಳುಕದೇ ಬದುಕಲೇಬೇಕೆಂದು ಸ್ವಾವಲಂಬಿಯಾಗಿ ಬದುಕುವ ಹೆಣ್ಣಿನ ಪಾತ್ರವಿದು. ಮತ್ತೇ ಭಟ್ಟರ ಪರಿಚಯ, ಮುಂಬೈ ನಗರಿಗೆ ಪಯಣ, ಗಂಡನ ಜೊತೆ ಇರುವ ನಿರ್ಧಾಗಳೆಲ್ಲವು ತುಂಗಾಳ ಬದುಕಿನಲ್ಲಿ ಅನೀರಿಕ್ಷಿತವಾಗಿ ನಡೆದು ಹೊಗುತ್ತವೆ ಲೇಖಕರು ಈ ಪಾತ್ರದ

ಮೂಲಕ ಪ್ರೀತಿಯ ಆಳವನ್ನು ಗುರುತಿಸಿದ್ದಾರೆ. ತನ್ನ ಬದುಕನ್ನು ತನಗೆ ತಿಳಿದಂತೆ ರೂಪಿಸಿಕೊಳ್ಳುವ ಶಕ್ತಿಯುತ ಪಾತ್ರವಿದು.

5) ಜುಲೈಖಾ : ಸಲೀಂ ಅವರ ಪತ್ನಿ ಆಕಸ್ಮಿಕವಾಗಿ ರೈಲಿನಲ್ಲಿ ನಾರಾಯಣ ಭಟ್ಟರಗೆ ಮತ್ತು ತುಂಗಾಳಿಗೆ ಪರಿಚಯವಾಗುತ್ತದೆ. ನಾರಾಯಣ ಭಟ್ಟ ಮತ್ತು ತುಂಗಾಳ ಕೆಲಸವನ್ನು ಹುಡುಕಿಕೊಂಡು ಅವರ ಮನೆಗೆ ಹೊಗುತ್ತಾರೆ ಮುಸ್ಲಿಂ ಧರ್ಮದಳಾದ ಜುಲೈಖಾ, ಹಿಂದೂ ಧರ್ಮದ ತುಂಗಾಳನ್ನು ಯಾವುದೇ ರೀತಿಯ ಭೇದ ಭಾವದಿಂದ ನೋಡುತ್ತಿರಲಿಲ್ಲ. ಹೊರಗೆ ಕೋಮು ಗಲಭೆಗಳು ನಡೆಯುತ್ತಿದ್ದರು ಇವರ ಮನೆ ಮಾತ್ರ ಪ್ರಶಾಂತವಾಗಿತ್ತು. ಜುಲೈಖಾ ಇಪ್ಪತ್ತು–ಇಪ್ಪತ್ತೆರಡರ ವಯಸ್ಸಿನವಳು. ಇವಳು ಮಾತಾಡಿದರೆ ಮಲ್ಲಿಗೆ ಅರಳಿದಂತಾಗುತ್ತಿತ್ತು. ಕಥಕ ನರ್ತಕಿಯ ಕಾಲ್ಗೆಜ್ಜೆಯಂತೆ ನಗು, ಇವಳ ಜೀವನ ರಂಗುರಂಗಿನ ಕಾರಂಜಿಯಂತಿತ್ತು.

'ಮಾನವನ ಧರ್ಮ' ಎಂಬುದು ಎಲ್ಲ ಧರ್ಮಗಳನ್ನು ಮೀರಿ ನಿಲ್ಲುವಂತಹದು ಎಂಬುದು ಈ ಪಾತ್ರದ ಬೆಳವಣಿಗೆಯಲ್ಲಿ ಕಂಡು ಬರುತ್ತದೆ.

6) ಫಾತಿಮಾ: ಸಲೀಂನ ತಾಯಿ. ಕ್ಯಾನ್ಸರದಿಂದ ಬಳಲುತ್ತಾ ದಿನಗಳನ್ನು ಎಣಿಸುತ್ತಾ ಮಲಗಿದ್ದರು. ಮುದುಕಿಯ ಭೂಮಿಯ ಎಲ್ಲ ಸಂಬಂಧಗಳು ತುಂಡು ತುಂಡಾಗಿದ್ದರೂ ಇನ್ನೂ ಬದುಕಿರಬೇಕೆಂಬ ಅದಮ್ಯ ಆಸೆಯಿಂದ ಅಂಗಳದಲ್ಲಿ, ಹಿತ್ತಲಿನಲ್ಲಿ ಬೆಳೆದ ಗಿಡ ಮರಗಳಿಗೆ, ಹಸಿರು ಹುಲ್ಲಿಗೆ ನೀರು ಹಾಕಿದ್ದಾರೆ ಇಲ್ಲವೋ ಎಂದು ಚಿಂತಿಸುತ್ತಿದ್ದಳು. ಉಪ್ಪಿನಕಾಯಿಯಲ್ಲಿನ ಉಪ್ಪು, ಸಾಂಬಾರದಲ್ಲಿನ ಹುಳಿಯ ಬಗ್ಗೆಯೂ ಮಾತಾಡುತ್ತಿದ್ದಳು. ಕೆಲವು ದಿನಗಳಿಗೆ ಸೀಮಿತವಾದ ಬದುಕು, ಹಜ್ ಯಾತ್ರೆಗೆ ಹೋಗುವುದು ಎಂದು ? ಎಂದು ಕೇಳುತ್ತಿದ್ದಳು. ತನ್ನ ಕೈಯಲ್ಲಿ ಬಂಗಾರದ ಉಂಗುರ ಬೇಕೆಂದು ಹಟ ಮಾಡುತ್ತಿದ್ದಳು. ಕೊನೆಗೆ ಒಂದು ದಿನ ಇಹಲೋಕ ತ್ಯಜಿಸಿದಳು. ಜೀವಂತಿಕೆಯಿಂದ ತುಂಬಿದ ಪಾತ್ರವಿದು.

7) ಬಹಿಣಾಬಾಯಿ ಸಾಳುಂಕೆ: ಇವಳು ಸಮುದ್ರ ದಂಡೆಯಲ್ಲಿ ನಾರಾಯಣ ಭಟ್ಟರ ನೆರೆಯವಳು. ಮಾತಿಗೊಮ್ಮೆ ಬೈಯುವುದು ಇವಳ ವಾಡಿಕೆ. 'ಕಾಯರೇ ಭಾಡಖಾವು' ಎಂದೇ ಅವಳ ಮಾತು ಶುರು ಆಗುತ್ತಿದ್ದವು. ಬಹಿಣಾಬಾಯಿ ಎಂದರೆ ಎಲ್ಲರಿಗೂ ಆಪತ್ ಬಂಧು. ಇಲ್ಲಿದ್ದ ಹೆಂಗಸು ಬಸಿರು ಬಾಣಂತನ, ಮಕ್ಕಳು, ಮರಿಗಳ ರೋಗ ರಿಜಿನುಗಳು, ಗಂಡಸರ ಜಗಳ–ತಂಟೆ, ಎಲ್ಲದಕ್ಕೂ ಬಹಿಣಾಬಾಯಿ ಬೇಕೇಬೇಕು. ರಾತ್ರಿ ಹೊತ್ತು ಪೋಲೀಸ ಬಂದರೆ "ಕಾಯರೇ ಭಾಡಕಾವು" ಅತಾ ಕಶಾಲಾ ಆಲಾಸ? ಎಂದು ಧೈರ್ಯದಿಂದ ಕೇಳುತ್ತಿದ್ದಳು. ಇಷ್ಟು ಧೈರ್ಯದಿಂದ ಇರುವ ಇವಳ ವ್ಯಕ್ತಿತ್ವ ಮಾತ್ರ ನಿಗೂಢವಾಗಿತ್ತು.

ಲೇಖಕರು ಈ ಪಾತ್ರದ ಮುಖಾಂತರ ಮಾನವೀಯ ಸಂಬಂಧಗಳ ಬಗ್ಗೆ ವಿಶ್ಲೇಸಿದ್ದಾರೆ ಆಪತ್ ಬಂಧುವಿನಂತೆ ಕೆಲಸ ಮಾಡುವ ಈ ಪಾತ್ರ, ಭಾಷೆ ಮತ್ತು ಧರ್ಮವನ್ನು ಮೀರಿ ಮಾನವೀಯತೆ ನಿಲ್ಲುವಂತಹದು ಎಂಬುದನ್ನು ಹೇಳುತ್ತದೆ.

ಹೀಗೆ ಕುಸನೂರ ಕಾದಂಬರಿಗಳಲ್ಲಿ ಬರುವ ಪಾತ್ರಗಳೆಲ್ಲವೂ ಸಾಮಾನ್ಯ ಸ್ತ್ರೀಯ ಪಾತ್ರಗಳು, ಆದರೂ ಕೂಡ ಒಂದು ತತ್ವ ಜ್ಞಾನ, ಒಂದು ಸಂದೇಶದ, ಒಂದು ಶೋಷಣೆಯ ಹಿನ್ನೆಲೆಯಲ್ಲಿ ರಚಿತವಾದವುಗಳು ಇಲ್ಲಿ ಸ್ತ್ರೀಯು ಪಡುವ ಯಾತನೆ, ಅನುಭವಿಸುವ ಶೋಷಣೆ, ಸ್ತ್ರೀಯ ಅಸಹಾಯಕತೆ, ಮಾನಸಿಕ ತೊಳಲಾಟಗಳನ್ನು ಅನುಭವಿಸಿದ್ದನ್ನು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಿದಾರೆ. ಇವರ ಕಾದಂಬರಿಗಳಲ್ಲಿ ಅನೇಕ ಪ್ರಕಾರದ ಮನೋವೃತ್ತಿಯ ಪಾತ್ರಗಳು ಬರುತ್ತವೆ. ಆ ಎಲ್ಲ ಪಾತ್ರಗಳನ್ನು ಅಧ್ಯಯನದ ಅನುಕೂಲಕ್ಕೆ ಈ ರೀತಿಯಾಗಿ ವಿಶ್ಲೇಷಿಸಲಾಗಿದೆ.

1) ಸಾಂಪ್ರದಾಯದ ವಿರುದ್ಧ ಹೋರಾಡುವ ಪಾತ್ರಗಳು

2) ಸಂಪೂರ್ಣ ಸಂಪ್ರದಾಯದ ಬದ್ಧವಾಗಿ ಜೀವಿಸುವ ಪಾತ್ರಗಳು

3) ಶೋಷಣೆಗೆ ಒಳಗಾದ ಪಾತ್ರಗಳು

4) ಮಹಿಳೆಯಿಂದ ಮಹಿಳಾ ಶೋಷಿತ ಪಾತ್ರಗಳು

5)ಮಾನವೀಯತೆ ಮತ್ತು ತ್ಯಾಗದ ಪಾತ್ರಗಳು

<u>1)ಸಾಂಪ್ರದಾಯದ ವಿರುದ್ಧ ಹೋರಾಡುವ ಪಾತ್ರಗಳು</u> :

ಚಂದ್ರಕಾಂತ ಕುಸನೂರವರ ಕಾದಂಬರಿಗಳಲ್ಲಿ ಬರುವ ಈ ರೀತಿಯ ಪಾತ್ರಗಳು ಹೆಚ್ಚಿನ ನೋವು,ಶೋಷಣೆ, ಅಸಹಾಕತೆಯಿಂದ ಬಳಲಿ,ಸಂಪ್ರದಾಯದ ವಿರುದ್ಧ ತಲೆ ಎತ್ತಿ ನಿಲ್ಲುವ ಪ್ರಯತ್ನ ಪಡುವ ಪಾತ್ರಗಳಿವು ಕೆಲವು ಪಾತ್ರಗಳು ಬಿಡುಗಡೆ ಹೊಂದದೆ ಅಲ್ಲಿಯೆ ನರಳುವುದು ಕಂಡುಬರುತ್ತದೆ ಈ ನಿಟ್ಟಿನಲ್ಲಿ 'ಕೆರೂರ ನಾಮಾ' ದಲ್ಲಿ ಬರುವ ತುಳಸಕ್ಕ, ನಿಂಗಿ, ಅಮರಾಂಬಿಕೆ,' ಒಂದು ಕೈಫಿಯತ್' ದ ತುಂಗಾ ಪಾತ್ರಗಳು.

'ತುಳಸಕ್ಕ ' ಬ್ರಾಹ್ಮಣ ಬಾಲ ವಿಧವೆ ಸೊರಗಿದ ಗಂಡನಿಂದ ಚಿಕ್ಕ ವಯಸ್ಸಿನಲ್ಲಿ ಬಾಲ ವಿಧವೆ ಪಟ್ಟ ಕಟ್ಟಿಕೊಳ್ಳುತ್ತಾಳೆ, ಕೇಶಮುಂಡನ ಮಾಡಿ ಕೊಳ್ಳದೇ ಸಕೇಶಿಯಾಗಿ ಉಳಿಯುತ್ತಾರೆ, ಸಮಾಜ ಮತ್ತು ಕುಟುಂಬದವರು ಅದೇಷ್ಟು ಹೇಳಿದರೂ, ಒತ್ತಡ ಹಾಕಿದರೂ ಸಕೇಶಿಯಾಗಿ ಉಳಿಯುತ್ತಾಳೆ ತನಗೆ ಬರಬೇಕಾದ ಆಸ್ತಿಯಲ್ಲಿ ಪಾಲನ್ನು ಪಡೆದುಕೊಂಡು ಸ್ವಾವಲಂಬಿಯಾಗಿ ಬದುಕು ಸಾಗಿಸಲು ಬಯಸುತ್ತಾಳೆ, ಬೇಸಾಯ ಮಾಡಿ ಉತ್ತಮ ಫಲ ಪಡೆದು ಶ್ರೀಮಂತಳಾಗುತ್ತಾಳೆ ಆದರೂ ಸಕೇಶಿಯಾಗಿ ಉಳಿದದ್ದು ಸಂಪ್ರದಾಯ ವಾದಿಗಳ ಕೆಂಗಣ್ಣಿಗೆ ಗುರಿಯಾಗುತ್ತಾಳೆ ಅನೇಕರು ಅನ್ಯೆತಿಕ ಪಟ್ಟ ಕಟ್ಟಿದರೂ ಅಂಜದೆ ತನ್ನಷ್ಟಕ್ಕೆ ತಾನೇ ಇರುತ್ತಾಳೆ ಕೊನೆಗೆ ಬಲಾತ್ಕಾರಕ್ಕೆ ಒಳಗಾಗಿ ಆತ್ಮಹತ್ಯೆಗೆ ಶರಣಾಗುತ್ತಾಳೆ ಸಂಪ್ರದಾಯವಾದಿಗಳ ಶೋಷಣೆ, ಒಬ್ಬಂಟಿಗ ಹೆಣ್ಣಿನ ಮೇಲೆ ಸಮಾಜ ನಡೆಸುವ ಬಲಾತ್ಕಾರಗಳು ಇಂದಿನ ಸಮಾಜದ ಮುಖವಾಡದಂತೆ ಗೋಚರವಾಗುತ್ತದೆ

'ಕೆರೂರು ನಾಮಾ ' ದಲ್ಲಿ ಬರುವ ನಿಂಗಿಯ ಪಾತ್ರವೂ ಇದಕ್ಕಿಂತಲೂ ವಿಭಿನ್ನವಾಗಿದೆ ಮದುವೆ, ಗಂಡ ಎಂಬುದರಲ್ಲಿ ವಿಶ್ವಾಸವಿಲ್ಲದ ಹೆಣ್ಣು ದಿನಾಲು ಒಂದುಚೂರು ಕರಗುವ, ಸೊರಗುವ, ಒಂದು ದಿನ ಬಿಟ್ಟು ಓಡಿ ಹೋಗುವ ಗಂಡನೊಂದಿಗೆ ಬದುಕುವುದು ಇವಳ ಜಾಯಮಾನವಲ್ಲ. ಹೀಗಾಗಿ ಗಂಡೆಂಬ ಪ್ರಾಣಿಯನ್ನು ದೂರವಿಟ್ಟುಮದುವೆ ಎಂಬ ಬಂಧನದಿಂದ ಬಯಸಿ ಸುಖವನ್ನು ಪಡೆಯುತ್ತಿರುವ ಹೆಣ್ಣು.

'ಒಂದು ಕೈಫಿಯತ್' ತುಂಗಾ ಬ್ರಾಹ್ಮಣ ಹುಡುಗಿ ತನ್ನ ಮತದ ಸಂಪ್ರದಾಯಗಳನ್ನು ಮೀರಿ ಮೀನುಗಾರನ ಹುಡುಗನೊಂದಿಗೆ ಪ್ರೇಮ ವಿವಾಹವಾಗುತ್ತಾಳೆ ತನ್ನ ಬಂಧು ಬಳಗದವರು ಬಿಟ್ಟು ಕಾಡಂಚಿನಲ್ಲಿ ನೆಲೆಸುತ್ತಾಳೆ ತನ್ನ ಗಂಡನು ಕಾಡಿನಲ್ಲಿ ಮಾಯವಾದಾಗ ತಾನೇ ಸ್ವತಃ ದುಡಿದು ತನ್ನ ಬದುಕನ್ನು ಸಾಗಿಸಿರುತ್ತಾಳೆ ಅಕಸ್ಮಾತ್ ನಾರಾಯಣಭಟ್ಟರೊಂದಿಗೆ ಸ್ನೇಹವಾಗುತ್ತದೆ ಅವರೊಂದಿಗೆ ಮುಂಬಯಿಗೆ ಹೋಗುತ್ತಾಳೆ ಅಲ್ಲಿ ಮತ್ತು ತನ್ನ ಗಂಡನ ಭೆಟ್ಟಿಯಾಗುತ್ತದೆ ಕೊನೆಗೆ ತನ್ನ ಗಂಡನೊಂದಿಗೆ ಇರಲು ಬಯಸುತ್ತಾಳೆ ಸಂಪ್ರದಾಯದ ವಿರುದ್ಧ ಪ್ರೇಮ ವಿವಾಹವಾಗಿ ತನಗೆ ಬಂದ ಕಷ್ಟಗಳನ್ನು ಸಹಿಸಿಕೊಂಡು ಪ್ರೀತಿಗೆ ಜಾತಿ ಮತಗಳ ಹಂಗಿಲ್ಲ ಎಂಬುದನ್ನು ನಂಬಿದ ಪಾತ್ರಗಳು.

2)ಸಂಪೂರ್ಣ ಸಂಪ್ರದಾಯದ ಬದ್ಧವಾಗಿ ಜೀವಿಸುವ ಪಾತ್ರಗಳು :

ಸಂಪ್ರದಾಯದ ಪರಿಧಿಯಲ್ಲಿ ಜೀವಿಸುವ ಅನೇಕ ಕುಸನೂರರವರ ಕಾದಂಬರಿಗಳಲ್ಲಿ ಸಾಕಷ್ಟು ಕಾಣ ಸಿಗುತ್ತವೆ ಈ ಪಾತ್ರಗಳು ಸಂಪ್ರದಾಯವನ್ನು ತಮ್ಮಲ್ಲಿ ಅಳವಡಿಸಿಕೊಂಡಿವೆ, ಸರಳವಾದ, ಸುಗಮವಾದ ಬದುಕನ್ನು ಸಾಗಿಸಲು ಹಂಬಲಿಸುವ ಪಾತ್ರಗಳಿವು ಇವರಿಗೆ ಬೇಕಾಗಿರುವುದು ನೆಮ್ಮದಿಯ ಬದುಕು ಅದಕ್ಕಾಗಿ ತಮ್ಮ ಒಂದು ಕ್ಷಿತಿಜದಲ್ಲಿ ಇರಲು ಬಯಸುವ ಹೆಣ್ಣುಗಳ ಪಾತ್ರವಿದು.

'ಯಾತನಾ ಶಿಬಿರ ' ಕಾದಂಬರಿಯಲ್ಲಿ ಬರುವ ಕುಸುಮಾ ಬಿಚ್ಚು ಮನಸ್ಸಿನ ಸ್ವಚ್ಛ ಹುಡುಗಿ ಬ್ರಾಹ್ಮಣ ಕುಲದಂತೆ ವಿವಾಹವಾಗಿಸುಖಮಯ ಜೀವನ ಸಾಗಿಸಲು ಬಯಸಿದಳು 'ಕುಸುಮಾ' ಕೃಷ್ಣಾ ದೀಕ್ಷಿತರ ಹೆಂಡತಿ ಮದುವೆಗಿಂತ ಮುಂಚೆ ಬಿಚ್ಚು ಮನಸ್ಸಿನ ಹುಡುಗಿಯಾದರೂ ಎಂದೂ ಸಂಪ್ರದಾಯದ ಸೀಮಾ ರೇಖೆಯನ್ನು ಜಿಗಿದವಳಲ್ಲ ವಿವಾಹದ ಬಳಿಕವೂ ತನ್ನ ಪೂಜೆ ಪುನಸ್ಕಾರಗಳಲ್ಲಿ ತೊಡಗಿಸಿಕೊಂಡವಳು. ಮಡೀ–ಮೈಲಿಗೆ ಪಾಲಿಸುತ್ತಾ ಮನೆಯಲ್ಲಿಯೇ ಇರುವ ಹೆಣ್ಣು. ಒಂದು ದಿನ ಕೃಷ್ಣಾ ದೀಕ್ಷಿತರು ಸಂಧ್ಯಾವಂದನೆ ಮಾಡುವುದನ್ನು ಬಿಟ್ಟಾಗ, ಜನಿವಾರ ತೆಗೆದು ಹಾಕಿದಾಗ, ಆಶ್ಚರ್ಯವ್ಯಕ್ತಪಡಿಸಿ, ಸಂಪ್ರದಾಯಗಳನ್ನು ಬಿಟ್ಟರೆ ಅನಿಷ್ಟ ಬಡಕೊತದ ಎಂದು ಗಂಡನಿಗೆ ತಿಳಿ ಹೇಳಿದಳು. ಹೀಗೆ ಸಂಪೂರ್ಣವಾಗಿ ಸಂಪ್ರದಾಯಗಳಿಗೆ ಅರ್ಪಿಸಿಕೊಂಡ ಹೆಣ್ಣಿನ ಪಾತ್ರವಿದು. ಈ ಪಾತ್ರಗಳು ಸಂಪ್ರದಾಯಬದ್ದವಾದರೂ ತಮ್ಮ ಬದುಕಿನ ನಂಬಿಕೆಗೆ ತಕ್ಕಂತೆ ಬದುಕಿರುವರು. ಬೇರೆಯವರ ಅಧಿಕಾರವನ್ನು ಒಪ್ಪದ ಪಾತ್ರಗಳಿವು.

'ಗೋಹರಜಾನ ಮಾಲತಿ ಮತ್ತು ನಾನು' ಕಾದಂಬರಿಯಲ್ಲಿ ಬರುವ ಸಾವಿತ್ರಿ ಪಾತ್ರವು ಕುಸುಮಾಳ ಪಾತ್ರವನ್ನು ಹೋಲುತ್ತಿದ್ದರು. ಅವರಿಬ್ಬರಲ್ಲಿ ವ್ಯತ್ಯಾಸವು ಉಂಟು ಕುಸುಮಾ ಮಧ್ಯಮ ವರ್ಗದ ಹೆಣ್ಣಾದರೆ, ಸಾವಿತ್ರಿ ಬಡತನದಿಂದ ಬಂದ ಹೆಣ್ಣು ಹೀಗಾಗಿ ಅವರಿಬ್ಬರಲ್ಲಿ ಪಾತ್ರಗಳಲ್ಲಿ ಸ್ವಲ್ಪ ವ್ಯತ್ಯಾಸವನ್ನು ಕಾಣುತ್ತೇವೆ. ಸಾವಿತ್ರಿ ಬಡ ಕುಟುಂಬದಿಂದ ಬಂದ ಹೆಣ್ಣು ಆದ್ದರಿಂದ ಗಂಡನ ಮನೆಯವರಿಂದ ಕಿರುಕುಳ ಅನುಭವಿಸಬೇಕಾಗುತ್ತದೆ ಅವರಾಡುವ ಚುಚ್ಚು ಮಾತುಗಳನ್ನು ಸಹಿಸಿಕೊಂಡು ಇರುತ್ತಾಳೆ ಗಂಡನ ಪ್ರೀತಿಯೊಂದು ತನಗೆ ಆಸರೆ ಎಂದು ತಿಳಿದು, ಮುಗ್ಧ ಸ್ವಭಾವ ಪ್ರತಿರೂಪದಂತೆ ಈ ಪಾತ್ರವು ಸೃಷ್ಟಿಯಾಗಿದೆ ಯಾವತ್ತು ತನ್ನ ಸಂಪ್ರದಾಯ ಮೀರಿ ಹೋದವಳಲ್ಲ ಎಷ್ಟೆ ಕಷ್ಟ ಬಂದರೂ ಸಹಿಸಿಕೊಂಡು ಜೀವಿಸುವ ಇವಳು ಸಹನಾಮೂರ್ತಿಯಂತೆ ಭಾಸವಾಗುತ್ತಾಳೆ ಗಂಡ ಬೇರೊಂದು ಹೆಣ್ಣಿನೊಂದಿಗೆ ಸರಸ–ಸಲ್ಲಾಪ ವಾಡಿ ದಣಿದಂತೆ ಮನೆಗೆ ಬಂದಾಗಲೂ, ಏನನ್ನೂ ಅರಿಯದ ಇವಳು ಗಂಡನ ಆರೋಗ್ಯ ಚೆನ್ನಾಗಿಲ್ಲವೆಂದು ತಿಳಿದು ಆರೈಕೆ ಮಾಡಿದ ಹೆಣ್ಣಿನ ಚಿತ್ರವಿದು.

' ಕೆರೂರ ನಾಮಾ' ದ ಇಂದಮ್ಮ ಕೂಡ ಸಂಪ್ರದಾಯದ ಕ್ಷಿತಿಜದೊಳಗೆ ಇರುವ ಹೆಣ್ಣು ಶೇಷಾಚಲ ಎಂಬುವ ತನ್ನನ್ನು ಪ್ರೀತಿ ಮಾಡುತ್ತಾನೆ ಎಂದು ತಿಳಿದಿದ್ದರೂ ಎಂದಿಗೂ ಸಂಪ್ರದಾಯದ ಎಲ್ಲೆ ಮೀರದೆ, ತನ್ನ ಕುಟುಂಬದವರು ನಿಶ್ಚಯ ಪಡಿಸಿದ ವರನೊಂದಿಗೆ ವಿವಾಹವಾಗುತ್ತಾಳೆ, ಹಾಗೆಯೇ' ಒಂದು ಕೈಫಿಯತ್ ' ಬರುವ 'ಜುಲೈಖಾ' ಕೂಡ ಸಂಪ್ರದಾಯದ ಕ್ಷಿತಿಜದಲ್ಲಿಯೇ ಇರುವ ಹೆಣ್ಣಿನ ಪಾತ್ರವಿದು. ಸಂಪ್ರದಾಯಿಕ ನಂಬಿಕೆ ಒಳಗೂ ತಮ್ಮನ್ನು ಉಳಿಸಿಕೊಂಡ ಪಾತ್ರಗಳಿವು.

3) **ಶೋಷಣೆಗೆ ಒಳಗಾದ ಪಾತ್ರಗಳು** :

ಚಂದ್ರಕಾಂತ ಕುಸನೂರರವರು ತಮ್ಮ ಕಾದಂಬರಿಗಳಲ್ಲಿ ಸಮಾಜದಲ್ಲಿ ನಡೆಯುವ ವಿವಿಧ ಬಗೆಯ ಶೋಷಣೆಗಳ ಮುಖವಾಡಗಳನ್ನು ಪರಿಚಯಿಸಿದ್ದಾರೆ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯು ಹೇಗೆ ವ್ಯವಸ್ಥಿತವಾಗಿ ಶೋಷಣೆಗೆ ಒಳಗಾಗುತ್ತಾಳೆ ಎಂಬ ಚಿತ್ರಣ ಈ ಪಾತ್ರಗಳಲ್ಲಿ ಇದೆ ಪುರುಷ ಪ್ರಧಾನವಾದ ಸಮಾಜದಲ್ಲಿ ಮಹಿಳೆಯ ಜಾತಿ ಅಸಹಾಯಕತೆಯ ಲಾಭ ಪಡೆದು ಹೇಗೆ ಶೋಷಣೆಗೆ ಗುರಿಪಡಿಸುತ್ತಾರೆ ಈ ಸಮಾಜ ಅವರನ್ನು ನೆಮ್ಮದಿಯಿಂದ ಬದುಕಲು ಬಿಟ್ಟಿದೆಯೇ ? ಎಂಬ ಪ್ರಶ್ನೆ ಕಾಡುತ್ತಲೆ ಇರುತ್ತದೆ.

'ಗೋಹರಜಾನ,ಮಾಲತಿ ಮತ್ತು ನಾನು' ಕಾದಂಬರಿಗಳಲ್ಲಿ ಬರುವ ಮೂರು ಸ್ತ್ರೀ ಪಾತ್ರಗಳು ಇದಕ್ಕೊಂದು ಉದಾಹರಣೆ , ಚಂದಿ, ಗೋಹರಜಾನ, ಮಾಲತಿ ವಿಭಿನ್ನ ಬಗೆಯ ಪಾತ್ರಗಳಾದರೂ ಕೊನೆಗೆ ಅವರು ಅನುಭವಿಸಿದ ಶೋಷಣೆ ಮಾತ್ರ ಅಮಾನುಷ ಅಮಾನವೀಯ, 'ಚಂದಿ' ಪ್ರಭು ಜಾತಿಯ ಹೆಣ್ಣು ಪರಿಸ್ಥಿತಿಗೆ ಸಿಲುಕಿ ಕೈ ಹಿಡಿದಾತನಿಂದ ಶೋಷಣೆಗೆ ಒಳಗಾಗಿ ಮಾವನ ಕಾಮಕ್ಕೆ ಬಲಿಯಾಗಿ ನರಳಿದ ದಲಿತ ಹೆಣ್ಣಿನ ಬಡತನ ಮತ್ತು ಅಸಹಾಯಕತೆ ಲಾಭ ಪಡೆಯಲು ಹಂಬಲಿಸುವ ಪುರುಷರ ಶೋಷಣೆಯನ್ನು ಪ್ರತಿಬಿಂಬಿಸುವ

ಪಾತ್ರವಿದು . ಒಬ್ಬ ದಲಿತ ಮಹಿಳೆಯ ಕರುಣಾಜನಕ ಕಥೆ ಇದು ಯಾವ ನರಕದಲ್ಲಿ ಸಿಲುಕಬಾರದೆಂದು ವಿವಾಹವಾದಳು, ಅದೇ ಪತಿ ಅವಳನ್ನು ಮತ್ತೆ ಅದೇ ನರಕಕ್ಕೆ ಕರೆದುಕೊಂಡಾಗ ಹೋದಾಗ , ಪತಿಯನ್ನು ಬಿಟ್ಟು ತಾನೇ ಸ್ವತಃ ಕೆಂಪು ದೀಪದ ಕೆಳಗೆ ಹೋದಳು.

'ಮಾಲತಿ' ಪದವೀಧರೆ, ಕಲಿಯಬೇಕೆಂಬ ಹಂಬಲ , ಕಂಗಳಲ್ಲಿ ನೂರಾರು ಆಸೆಗಳನ್ನಿಟ್ಟುಕೊಂಡು ಶಿಕ್ಷಣ ಮುಂದುವರಿಸುತ್ತಾಳೆ ತನ್ನ ತಂದೆ ತಾಯಿಯಿಂದಲೇ ಶಿಕ್ಷಣಕ್ಕೆ ತಿಲಾಂಜಲಿ ನೀಡುತ್ತಾಳೆ, ಇದರ ನಡುವೆ ರವಿ ಎಂಬುವನನ್ನು ಪ್ರೀತಿಸಿ ತನ್ನ ಸರ್ವಸ್ವವನ್ನು ಅವನಿಗೆ ಅರ್ಪಿಸುತ್ತಾಳೆ ತಂದೆ ನಿಶ್ಚಯಿಸಿದವನ ಜೊತೆಗೆ ವಿವಾಹ ಮಾಡಿಕೊಳ್ಳಲಾಗದೆ , ಪ್ರೀತಿಸಿದವನ ಜೊತೆಗೆ ಇರಲುಆಗದೇ, ಕೊನೆಗೆ ಮುಂಬೈ ಎಂಬ ಮಾಯಾನಗರಿಯ ಪಾಲಾಗುತ್ತಾಳೆ ಜಾತಿ ವ್ಯವಸ್ಥೆಯು ಹೆಣ್ಣನ್ನು ಹೇಗೆ ಶೋಷಿಸುತ್ತದೆ? ಎನ್ನುತ್ತಲೇ ದಿಟ್ಟ ಬಿಚ್ಚು ಮನಸ್ಸಿನ ಮಹಿಳೆಯ ದುರಂತ ಸ್ಥಿತಿಯನ್ನು ಮಾಲತಿ ಪಾತ್ರವು ಸೂಚಿಸುತ್ತದೆ.

ಮತ್ತೊಂದು ರೀತಿಯ ಶೋಷಣೆಗೆ ಬಲಿಯಾದ ಹೆಣ್ಣು ವೃಂದಾಬಾಯಿ. ವೃಂದಾಬಾಯಿ ಗಂಡ ನಿಧನದ ನಂತರ ಅವಳ ಆಸ್ತಿಯನ್ನು ಶ್ರೀಪತಿಯು ಪಡೆದುಕೊಳ್ಳುತ್ತಾನೆ. ಕೊನೆಗೆ ಅವಳ ಆಸ್ತಿ ಸ್ವಾಮಿಜಿಯ ಪಾಲಾಗುತ್ತದೆ. ಆಸ್ತಿಯನ್ನು ಹೊಂದಿದ ಸ್ಥಿತಿವಂತ ಹೆಣ್ಣು ಗಂಡನ ನಿಧನದ ನಂತರ ಎಂತಹ ಶೋಷಣೆಗೆ ಒಳಗಾಗುತ್ತಾಳೆ ಎಂಬುದರ ಪ್ರತೀಕ ಈ ಪಾತ್ರ. ಇದರಂತೆ ಮತ್ತೊಬ್ಬ ವಿಧವೆ ಪಾತ್ರ ಕಾಶಮ್ಮ. ಗಂಡ ಸತ್ತ ನಂತರ ಕಪನೂರ ಸ್ವಾಮೀಯ ಮೋಸಕ್ಕೆ ಬಲಿಯಾಗಿ ತನ್ನ ಆಸ್ತಿಯನ್ನೇ ಕಳೆದುಕೊಳ್ಳುತ್ತಾಳೆ. ಅನೈತಿಕ ಸಂಬಂಧ ದಿಂದ ಎದುರಿಸುವ ಅಪಾಯಗಳನ್ನು ಲೇಖಕರು ಇಲ್ಲಿ ಪರಿಚಯಿಸಿದ್ದಾರೆ. ಆದರೂ ಈ ಎರಡೂ ಪಾತ್ರಗಳು ಅಸಹಾಯಕತೆ ಹೆಣ್ಣು ಅನುಭವಿಸುವ ಶೋಷಣೆಯನ್ನು ಚಿತ್ರಿಸುವ ಪಾತ್ರಗಳಿವು.

4)ಮಹಿಳೆಯಿಂದ ಮಹಿಳಾ ಶೋಷಿತ ಪಾತ್ರಗಳು :

ಮಹಿಳೆಯರ ಬಗ್ಗೆ ಸಾಕಷ್ಟು ಕರುಣೆ ಹೊಂದಿದ್ದರೂ ಮಹಿಳೆಯ ವಿವಿಧ ಮುಖಗಳನ್ನು ಕೂಡಾ ಚಂದ್ರಕಾಂತ ಕುಸನೂರರವರು ತಮ್ಮ ಕಾದಂಬರಿಗಳಲ್ಲಿ ಗುರುತಿಸಿದ್ದಾರೆ . ಮಹಿಳೆಯರೇ ಮಹಿಳೆಯರನ್ನು ವ್ಯವಸ್ಥಿತವಾಗಿ ಶೋಷಿಸುವ ಮನೋಧರ್ಮ ವನ್ನು ಅವರ ಪಾತ್ರಗಳ ಮೂಲಕ ಬಿತ್ತರಿಸಲು ಪ್ರಯತ್ನಿಸಿದ್ದಾರೆ.

'ಕೆರೂರು ನಾಮಾ ' ಕಿಟ್ಟಾಬಾಯಿ ಮತ್ತು ದ್ವಾರಕಾಬಾಯಿಯಂತಹ ಪಾತ್ರಗಳು, ಕಿಟ್ಟಾಬಾಯಿ ತುಳಸಕ್ಕನ ಓರಗಿತ್ತಿ ತುಳಸಕ್ಕ ವಿಧವೆಯಾದರೂ ತನ್ನ ಆಸ್ತಿ ಪಡೆದುಕೊಂಡು ಸ್ವಾವಲಂಬಿಯಾದದ್ದನ್ನು ಸಹಿಸಲಾರದೆ ತಾನೂ ಕೂಡ ಶ್ರೀಮಂತಳಾಗಲು ಅನೇಕ ತಂತ್ರ-ಕುತಂತ್ರಗಳನ್ನು ನಡೆಸುತ್ತಾಳೆ ತನ್ನ ಓರಗಿತ್ತಿಯನ್ನು ಚುಚ್ಚು ಮಾತುಗಳಿಂದಲೇ ಶೋಷಿಸುತ್ತಾಳೆ. ಅದರಂತೆ ದ್ವಾರಕಾಬಾಯಿ ಕೂಡಾ ತುಳಸಕ್ಕನ ನಿಂದನೆ ಮಾಡುವುದೆ ಕೆಲಸವಾಗಿರುತ್ತದೆ.

ಕೆರೂರ ನಾಮಾದಲ್ಲಿ ಬರುವ ಅಂಬಕ್ಕನ ಪಾತ್ರವಂತೂ ಖಳನಾಯಕಿಯ ಹಾಗೇ ಗೋಚರಿಸುತ್ತದೆ ಅಂಬಕ್ಕ ತನ್ನಲ್ಲಿ ಗರ್ವ ದರ್ಪ.ಅಸಹನೆ,ಕುತಂತ್ರ,ಮತ್ಸರ, ಮೋಸ, ಎಲ್ಲದರ ಮಿಶ್ರಣ ಪಡೆದುಕೊಂಡವಳು ತಾನು ಮಾಡಿದ ತಪ್ಪನ್ನು ಮುಚ್ಚಿಕೊಳ್ಳಲು ತನ್ನಲ್ಲಿ ದೇವಿ ಬರುತ್ತಾಳೆ ಎಂಬ ನಾಟಕವಾಡಿ ಮುಗ್ಧ ಜನರಿಗೆ ಮೋಸ ಮಾಡುತ್ತಿದ್ದಳು. ತನ್ನ ಸನ್ನಿಧಿಗೆ ಬಾರದ ತುಳಸಮ್ಮನನ್ನು ಬೈಯ್ಯುತ್ತಿದ್ದಳು . ಕಿಶಾನರಾಯನೊಂದಿಗೆ ಅನೈತಿಕ ಸಂಬಂಧವಿದ್ದರೂ ಈಕೆಯ ಗಂಢ ಫಂಡರಿ ಸುಮ್ಮನಿರುತ್ತಿದ್ದ ಅಂಬಕ್ಕ ತನ್ನ ಅಪರಾಂಪರ ಮಹಿಮೆಯ ಫಲವಾಗಿ ಅಂಬಾಬಾಯಿ ಆಗಿದ್ದಳು. ತನ್ನ ಬೂದಿ ಭಂಡಾರದಿಂದ ಜನರನ್ನು ಮೋಸಗೊಳಿಸುತ್ತಿದ್ದಳು ತನ್ನ ವ್ಯಕ್ತಿತ್ವದ ಪ್ರಭಾವದಿಂದ ಕೆರೂರನ್ನು ' ಸುಕ್ಷೇತ್ರ ಕೆರೂರು ' ರನ್ನಾಗಿ ಮಾಡಿದ್ದಳು. ಅಂತಹ ಅಂಬಾಬಾಯಿ ಕೊನೆಗೆ ದಿಕ್ಕಿಲ್ಲದೆ ದೆಸೆಯಿಲ್ಲದೆ ಸರ್ಕಾರಿ ಆಸ್ಪತ್ರೆಯಲ್ಲಿ ಅಸುನೀಗಿದ್ದು ದೊಡ್ಡ ದುರಂತ.

5)ಮಾನವೀಯತೆ ಮತ್ತು ತ್ಯಾಗದ ಪ್ರತೀಕವಾದ ಪಾತ್ರಗಳು :

ಚಂದ್ರಕಾಂತ ಕುಸನೂರರವರ ಕಾದಂಬರಿಗಳಲ್ಲಿ ಕೆಲವು ಪಾತ್ರಗಳು ಮಾನವೀಯತೆ ಮತ್ತು ತ್ಯಾಗದ ಪ್ರತಿರೂಪದಂತೆ_ ಸೃಷ್ಟಿಯಾದವುಗಳಾಗಿವೆ ಸ್ತ್ರೀಯನ್ನು ' ಕ್ಷಮಯಾಧರಿತ್ರಿ ' ಎಂದು ಹೊಗಳುತ್ತೇವೆ ಸಹನೆಯ ಸಾಕಾರಮೂರ್ತಿ ಎಂತಲೂ ಕರೆಯುತ್ತೆವೆ. ಕೆಲವು ಮೇಲು ಸ್ತರದ , ಕೆಳಸ್ತರದ ಹೆಣ್ಣುಗಳು ಪ್ರೀತಿ, ಪ್ರೇಮ, ಸಹನೆ, ತ್ಯಾಗಕ್ಕಾಗಿ ತಮ್ಮನ್ನೇ ಅರ್ಪಿಸಿಕೊಂಡ ಪಾತ್ರಗಳು ಇವೆ.

'ಕೆರೂರು ನಾಮಾ ' ದ ನಿಂಗಿಯ ಪಾತ್ರದಂತ ವಿಶಿಷ್ಟವಾದ ಪಾತ್ರವಾಗಿದೆ_ತಾನು ಪ್ರೀತಿಸಿದವನ ಜೊತೆ ಆನಂಧ ದಿಂದ ಇರುತ್ತಾಳೆ ತಾನು ಪ್ರೀತಿಸಿದ ಶಾಂತಾರಾಮ ಮದುವೆಯಾದವನು ಮತ್ತು ಇವನ ಆಸರೆ ಔಡಲ ಗಿಡದಂತೆ ಶಾಶ್ವತವಲ್ಲದ ಎಂಬುದು ಅರಿವಿದ್ದರೂ ಕೂಡ ಅವನಲ್ಲಿ ಅನುರಕ್ತಳಾಗಿರುತ್ತಾಳೆ. ಒಂದು ದಿನ ಶಾಂತಾರಾಮನಿಗೆ ಹಾವು ಕಚ್ಚಿದಾಗ ತನ್ನ ಸಾವಿಗೂ ಈ ಹೆದರದೇ ತನ್ನ ಬಾಯಿಂದ ವಿಷವನ್ನು ಹೊರತೆಗೆಯುತ್ತಾಳೆ ಇದು ನಿಷ್ಕಾಮ ಪ್ರೀತಿಯ ಮತ್ತು ತ್ಯಾಗದ ಪ್ರತಿರೂಪದಂತೆ ಗೋಚರವಾಗುತ್ತದೆ ಒಂದು ವೇಳೆ ವಿಷ ಇವಳ ದೇಹ ಸೇರಿದರೆ ಸಾವು ಖಂಡಿತ ಎಂಬುದರ ಅರಿವಿದ್ದರೂ ಕೂಡಾ ವಿಷವನ್ನು ಹೊರತೆಗೆದು ತಾನು ಪ್ರೀತಿಸಿದವನು ಸುಖವಾಗಿ ಇರಲೇಬೇಕು ಎಂಬುದು ಅವಳ ಆಸೆಯಾಗಿತ್ತು ಶಾಂತಾ ರಾಮನ ಹೆಂಡತಿ ಮಾಡದ್ದನ್ನು ಇಲ್ಲಿ ನಿಂಗಿ ಮಾಡಿರುವುದು ಅವಳ ಅಂತಃಕರಣ ಮಾನವೀಯತೆಗೆ ಸಾಕ್ಷಿಯಾಗಿದೆ.

'ಯಾತನಾ ಶಿಬಿರ ' ದ ಚೆನ್ನಮ್ಮ ಮನೆಗೆಲಸಗಳಲ್ಲಿ ಮೇಲ್ವರ್ಗದ ಜನರಿಗೆ ಸಹಾಯ ಮಾಡುವ ಹೆಣ್ಣು ಒಂದು ದಿನ ಕುಲಕರ್ಣಿ ಭೀಮನ ಮನೆಯ ಮುಂದೆ ಆದಿತ್ಯವಾರದ ಅಮವಾಸ್ಯೆಯ ದಿನ ಬಾನಾಮತಿ ಮಾಡಿಸಿ ಇಟ್ಟಿದ್ದರು ಇದನ್ನು ಕಂಡ ಭೀಮ ಮತ್ತು ಅವನ ತಾಯಿ ಗಾಬರಿಯಾದರು ಆಗ ಬಂದ ಚನ್ನಿ " ಏನಾಯ್ತು ? ಯಾಕಃ ಹೀಂಗ ನೀವು

ನಡ್ಡತ್ತೀರಿ" ". . . . . . . ಯಾವುದೋ ಕಸಬಾರ್ಗಿ ಕುತಂತ್ರ ಮಾಡ್ಯಾಯ್ತಿ". ಇದಕ್ಯಾಕ್ರೀ ಎಲ್ವಾ ಈಟು ಗಾಬ್ರಾಗೊದು ? ಈಗ ನಾ ರಜಶಿಲದಿಂದ ಸಾಫ ಮಾಡ್ತೀನಿ"[೧೨] ಎಂದು ಹೇಳಿ ಸಾಫ ಮಾಡಿದಳು. ಇಲ್ಲಿ ಚೆನ್ನಿಗೆ ತಾನು ಸಾಫ ಮಾಡಿದರೆ ತನಗೆ ಒದಗಬಹುದಾದ ತೊಂದರೆಯ ಯಾವುದೇ ಕಾಳಜಿಯಿಲ್ಲದೆ ಭಾನಾಮತಿ ಮಾಡಿದ್ದನ್ನು ಸಾಫ ಮಾಡಿದಳು ಇದರಿಂದ ಕೆಳವರ್ಗದ ಸ್ತ್ರೀಯರ ಧೈರ್ಯ ಹಾಗೂ ಮೇಲ್ವರ್ಗದ ಜನರ ಅಂಜುಬುರುಕುತನವನ್ನು ನೋಡಬಹುದಾಗಿದೆ.

'ಒಂದು ಕೈಫಿಯತ್'ದ ಪಾರ್ವತಮ್ಮನ ಪಾತ್ರವು ಮಾನವೀಯತೆಯ ನೆಲೆಯಲ್ಲಿ ನಿರ್ಮಾಣವಾದ ಪಾತ್ರ ಪಾರ್ವತಮ್ಮ ನಾರಾಯಣ ಭಟ್ಟರ ತಂಗಿಯ ಮನೆಯ ನೆರೆ ಹೊರೆಯವಳು, ಉಪ್ಪಾರ ಜಾತಿಯವಳಾದರೂ ಉಪಕಾರ ಮಾಡುವ ಜಾತಿಯವಳು. ಕಮಲಮ್ಮಗೆ ಜ್ವರ ಬಂದು ಬಳಲುತ್ತಿದ್ದಾಗ ಪಾರ್ವತಮ್ಮ ಏಳೆಂಟು ದಿನಗಳಿಂದ ಅಡಿಗೆ ಮಾಡಿ ಎರಡೂ ಹೊತ್ತು ತಂದು ಕೊಡುತ್ತಿದ್ದಳು. ನೆರೆಮನೆಯವರ ಪರಿಸ್ಥಿತಿ ನೋಡಿ ಸುಮ್ಮನೇ ಕೂಡ್ರಬೇಕೆ ? ಮನುಷ್ಯ ಧರ್ಮ ಎಂಬುದು ಇಲ್ಲವೇ ? ಎಂದು ಹೇಳಿ _ಕಮಲಮ್ಮ ಮತ್ತು ಕೂಸಿನ ಆರೈಕೆ ಮಾಡುತ್ತಿದ್ದಳು, ನಾರಾಯಣ ಭಟ್ಟರು ತಮ್ಮ ತಂಗಿಯ ಯೋಗ ಕ್ಷೇಮ ನೋಡಿಕೊಳ್ಳದೇ ಕಾಶಿ ಯಾತ್ರೆಗೆ ಹೋಗಿದ್ದು ಕಂಡು ಅವಳಿಗೆ ಬಲು ಕೋಪ ಬಂದಿತು.

"ತನ್ನ ತಂಗಿಯ ಸುಖ ದುಃಖ ಏನಂತ ನೋಡದೇ ಕಾಶಿ ಯಾತ್ರೆಗೆ ಯಾವ ಪುಣ್ಯಗಳಿಸಲ್ಲಿಕ್ಕೆ ಹೋಗಿದ್ದರು ? ಏನು ಕೊಟ್ಟ ಆ ವಿಶ್ವನಾಥ ತನ್ನವರು ತನ್ನ ಸುತ್ತ ಮುತ್ತಿದ್ದ ಜೀವಗಳು ತುತ್ತು ಅನ್ನಕ್ಕೆ ವಿಲಿವಿಲಿ ಒದ್ದಾಡುತ್ತಿರುವಾಗ ಈ ಮಂದಿ ದೇವರ ಮುಂದೆ ಕೈ ಮುಗಿದು ನಿಲ್ತಾರಲ್ಲ,ಆಗ ಅವರ ದೇವರು ಅವರ ಉಡಿಯಲ್ಲಿ ಹಾಕುವುದು ಏನು ? ಇನ್ನಷ್ಟು ದುಃಖ ಇನ್ನಷ್ಟು ಸಂಕಟ"[೧೩]ಎಂದು ನಾರಾಯಣ ಭಟ್ಟರನ್ನು ಕುರಿತು ಹೇಳಿದ ಮಾತುಗಳನ್ನು ಕೇಳಿದಾಗ ವಾಸ್ತವ ಜಗತ್ತು ಎಷ್ಟು ಸರಳ ಮತ್ತು ಸಂಕೀರ್ಣ ಎಂಬುದು ಅರಿವಾಗುತ್ತದೆ.

'ಏನಾದರೂ ಆಗು,ಮೊದಲು ಮಾನವನಾಗು' ಎಂಬ ಸಂದೇಶವನ್ನು ಲೇಖಕರು ಈ ಪಾತ್ರದ ಮುಖಾಂತರ ನೀಡಿದ್ದಾರೆ.

'ಒಂದು ಕೈಫಿಯತ್'ದಲ್ಲಿನ ಜುಲೈಖಾ ಪಾತ್ರವು ಕೋಮು ಸೌಹಾರ್ದತೆಯ ಅಡಿಯಲ್ಲಿ ಸೃಷ್ಟಿಯಾದ ಪಾತ್ರ ಮುಸ್ಲಿಂ ಧರ್ಮದವಳಾದರೂ ಹಿಂದೂ ಧರ್ಮದ ತುಂಗಾಳನ್ನು ತನ್ನ ಸಹೋದರಿಯಂತೆ ನೋಡಿಕೊಂಡಳು. ಇವರ ಮನೆ ಮಾತ್ರ ಕೋಮು ಸೌಹಾರ್ದ ತೆಯ ಶಾಂತಿ ನೆಲೆಯಾಗಿತ್ತು ಅನೇಕತೆಯಲ್ಲಿ ಏಕತೆ ಆಧಾರದ ಮೇಲೆ ಈ ಪಾತ್ರ ಸೃಷ್ಟಿಯಾಗಿದೆ.

ಚಂದ್ರಕಾಂತ ಕುಸನೂರರವರು ತಮ್ಮ ಕಾದಂಬರಿಗಳಲ್ಲಿ ಮಹಿಳೆಯ ಅಂತಃಕರಣ,ಪ್ರೀತಿ, ವಾತ್ಸಲ್ಯ, ತ್ಯಾಗ ಮೊದಲಾದ ಸ್ವಭಾವಗಳನ್ನು ಗುರುತ್ತಿಸಿದ್ದಾರೆ ಅಷ್ಟೇ ಅಲ್ಲದೇ ಅಹಂಕಾರ, ಅಜ್ಞಾನ, ಶೋಷಿತ ಪ್ರವೃತ್ತಿಗಳನ್ನು ಕಾಣಬಹುದು. ಮೇಲ್ವರ್ಗದ ಸ್ತ್ರೀಯರ ಬದುಕು .

ಬಡವ-ದಲಿತ ಸ್ತ್ರೀಯರ ಕರುಣಾಜನಕ ಬದುಕಿನ ತಿರುಳನ್ನು ಕುಸನೂರರವರು ಹೃದಯ ಸ್ಪರ್ಶಿಸುವಂತೆ ಚಿತ್ರಿಸಿದ್ದಾರೆ. ಅಲ್ಲದೆ ಮಹಿಳೆಯ ವಿವಿಧ ಮುಖಗಳನ್ನು ಪರಿಚಯ ಮಾಡಿದ್ದಾರೆ .

ಅಡಿ ಟಿಪ್ಪಣಿಗಳು :

೧) 'ಕೆರೂರು ನಾಮಾ' ಕಾದಂಬರಿ – ಪು.ಸಂ-೧

೨) 'ಕೆರೂರು ನಾಮಾ' ಕಾದಂಬರಿ-ಮುನ್ನುಡಿ.

೩) 'ಕೆರೂರು ನಾಮಾ' ಕಾದಂಬರಿ- ಪು.ಸಂ-೭

೪) 'ಕೆರೂರು ನಾಮಾ' ಕಾದಂಬರಿ- ಪು.ಸಂ-೪

೫) 'ಕೆರೂರು ನಾಮಾ' ಕಾದಂಬರಿ- ಪು.ಸಂ-೪೩

೬) 'ಕೆರೂರು ನಾಮಾ' ಕಾದಂಬರಿ- ಪು.ಸಂ-೪೪

೭) 'ಕೆರೂರು ನಾಮಾ' ಕಾದಂಬರಿ- ಪು.ಸಂ-೧೨೮

೮) 'ಕೆರೂರು ನಾಮಾ' ಕಾದಂಬರಿ- ಪು.ಸಂ-೨

೯) 'ಜೋಹರಜಾನ್, ಮಾಲತಿ ಮತ್ತು ನಾನು'- ಪು.ಸಂ-೭೨

೧೦) 'ಜೋಹರಜಾನ್, ಮಾಲತಿ ಮತ್ತು ನಾನು'- ಪು.ಸಂ-೨೭೯

೧೧) 'ಜೋಹರಜಾನ್, ಮಾಲತಿ ಮತ್ತು ನಾನು'- ಪು.ಸಂ-೨೧೯

೧೨) 'ಯಾತನಾಶಿಬಿರ' ಕಾದಂಬರಿ ಪು.ಸಂ-೧೧

೧೩) 'ಒಂದು ಕೈಫಿಯತ್' ಕಾದಂಬರಿ ಪು.ಸಂ-೧೭

ಅಧ್ಯಾಯ–5

ಚಂದ್ರಕಾಂತ ಕುಸೂನರರವರ ಭಾಷಾ ಶೈಲಿ

ಒಬ್ಬ ಸಾಹಿತಿಯ ಆಶಯವನ್ನು ಅರಿಯಲು ಅವರು ಬಳಸುವ ಭಾಷೆ ಪ್ರಮುಖ ಪಾತ್ರವಹಿಸುತ್ತದೆ. ಸಮುದಾಯ ಮತ್ತು ಪರಂಪರೆಯ ಪ್ರಭಾವವು ಭಾಷೆಯ ಮೇಲೆ ಆಗಿರುತ್ತದೆ. ಒಂದು ಕೃತಿಯ ಆಶಯ ವಿನ್ಯಾಸವನ್ನು ಭಾಷೆಯ ರಚನೆಯ ಮೂಲಕ ತಿಳಿಯಬಹುದು.

ಚಂದ್ರಕಾಂತ ಕುಸನೂರರವರು ಕಲಬುರ್ಗಿ ಜಿಲ್ಲೆಯವರು ಹೈದರಾಬಾದ ಕರ್ನಾಟಕದ ಭಾಷೆಯ ಪ್ರಭಾವ ಸಾಕಷ್ಟು ಅವರ ಮೇಲಿದೆ. ಹೈದರಾಬಾದ ಕರ್ನಾಟಕದ ಭಾಷೆ ಎಂದಾಗ ಕನ್ನಡ ಭಾಷೆಯಲ್ಲಿ ಉರ್ದು ಭಾಷೆಯ ಶಬ್ದಗಳು ಅನುವಂಶೀಯತೆಯಂತೆ ಸರಾಗವಾಗಿ ಸೇರಿ, ಅಲ್ಲಿಯ ಪ್ರಾದೇಶಿಕ ಸೊಬಗನ್ನು ಹೆಚ್ಚಿಸುತ್ತವೆ. ಹೀಗಾಗಿ ಆ ಭಾಷೆಯ ಸ್ವಾರಸ್ಯವನ್ನು ತಿಳಿಯುವುದೇ ಮುಖ್ಯವಾಗಿದೆ.

ಹೈದರಾಬಾದ ಕರ್ನಾಟಕ ಪ್ರದೇಶದ ಅಡುನುಡಿಯ ಸಮರ್ಥ ಬಳಕೆಯಿಂದ ಅವರ ಕಾದಂಬರಿಗಳು ಓದುಗರ ಗಮನ ಸೆಳೆಯುತ್ತವೆ. ಅವರ ಕಾದಂಬರಿಗಳಲ್ಲಿ ಬಳಸಲಾದ ನುಡಿಗಟ್ಟುಗಳು, ಗಾದೆ ಮಾತುಗಳು, ಪ್ರಕೃತಿ ವರ್ಣನೆ, ಸ್ತ್ರೀ ಸೌಂದರ್ಯದ ವರ್ಣನೆ, ಭೌಗೋಳಿಕ ಪ್ರದೇಶದ ವರ್ಣನೆಗಳು ಓದುಗರನ್ನು ಮಂತ್ರಮುಗ್ದರನ್ನಾಗಿಸುತ್ತವೆ. ಅವರ ಕಾದಂಬರಿಗಳನ್ನು ಭೌಗೋಳಿಕ ಪ್ರದೇಶಗಳ ವರ್ಣನ ಒಂದು ಜೀವಂತ ಪಾತ್ರದಂತೆ ಕಾರ್ಯನಿರ್ವಹಿಸಿದರೆ ; ಹಕ್ಕಿ–ಪಕ್ಷಿಗಳು ತತ್ವಜ್ಞಾನಿಯಂತೆ ತಮ್ಮ ನೋವು–ನಲಿವುಗಳನ್ನು ಹಂಚಿಕೊಂಡು ಸಂದೇಶ ಸಾರುತ್ತವೆ. ಅವರ ಕಾದಂಬರಿಗಳಲ್ಲಿ ಬರುವ ಕತೆಯ ಸೊಗಡು, ನಿರೂಪಣೆ ಹಾಗೂ ಪಾತ್ರಗಳ ಭಾಷೆ ಒಂದನ್ನೊಂದು ಬಿಗಿದಪ್ಪಿಕೊಂಡು ಸಾಗುತ್ತವೆ.

ಚಂದ್ರಕಾಂತ ಕುಸನೂರರವರು ಸೃಜನಶೀಲ ಬರಹದಿಂದ ಓದುಗರ ಮನಸ್ಸಿನ ರೀತಿಯನ್ನು ತಮ್ಮ ಗ್ರಾಮೀಣ ಸೊಗಡಿನ ಭಾಷೆ ಪ್ರಯೋಗದಿಂದ ಬದಲಾಯಿಸಿ ಓದುಗರ ಮನಸ್ಸಿನಲ್ಲಿ ಅಚ್ಚ ಅಳಿಯದೇ ನಿಂತು ಬಿಡುತ್ತಾರೆ ಗ್ರಾಮೀಣ ಪ್ರದೇಶದ ಭಾಷೆ, ಅಲ್ಲಿಯ ಸಮುದಾಯದ ಸಂಸ್ಕೃತಿ, ಉತ್ಸವಗಳು, ಶೋಷಣೆ ಮುಂತಾದ ಅಂಶಗಳ ಮೂಲಕ ಓದುಗರ ಮನಸ್ಸಿನಲ್ಲಿ ಸದಾಕಾಲ ಉಳಿದು ಬಿಡುತ್ತಾರೆ ಅವರು ಬಳಸುವ ಪ್ರಾದೇಶಿಕ ವಿಶಿಷ್ಟ ಪದಗಳು ಓದುಗರನ್ನು ವಿಚಾರ ಮಾಡಲು ಪ್ರೋತ್ಸಾಹಿಸುತ್ತದೆ.

ಚಂದ್ರಕಾಂತ ಕುಸನೂರರವರ ಕಾದಂಬರಿಗಳಲ್ಲಿ ಪ್ರಾದೇಶಿಕ ಭಾಷೆಯು ಸರಾಗವಾಗಿ ಕಾದಂಬರಿ ತುಂಬೆಲ್ಲಾ ಹರಿದಾಡುತ್ತದೆ. ಅವರು ಕಲಬುರ್ಗಿ ಭಾಗದ

ಕನ್ನಡ ಭಾಷೆಯನ್ನು ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಸಮರ್ಥ ರೀತಿಯಲ್ಲಿ ತೊಡಗಿಸಿಕೊಂಡು ಬಳಸಿದ್ದಾರೆ. ಈ ಅಧ್ಯಾಯದಲ್ಲಿ ಅವರ ಭಾಷಾ ಬಳಕೆ ಮತ್ತು ಶೈಲಿ ಕುರಿತು ಚರ್ಚೆಯನ್ನು ಬೆಳೆಸಲಾಗಿದೆ.

ಪ್ರಮಾಣ ಕನ್ನಡ ನಾಮಪದ ಅಂತ್ಯದ ಏ> ಯ ಆಗಿ ಪರಿವರ್ತನೆಯಾಗಿದೆ.

ಬೇಡ	–	ಬ್ಯಾಡ
ಮೇಲೆ	–	ಮ್ಯಾಲ
ಬೇರೆ	–	ಬ್ಯಾರೆ
ಹೇಗಾದರೂ	–	ಹ್ಯಾಂಗಾದರೂ
ಹೇಗೆ	–	ಹ್ಯಾಂಗ
ವೇಳೆ	–	ವ್ಯಾಳ್ಯಾ
ಮಳೆ	–	ಮಳಿ
ಬೆಳೆ	–	ಬ್ಯಾಳಿ
ಬೇಸಿಗೆ	–	ಬ್ಯಾಸಿಗೆ
ಬೇನೆ	–	ಬ್ಯಾನಿ

***ಪ್ರಮಾಣ ಕನ್ನಡ ನಾಮಪದಂತ್ಯದ ಅಂತ್ಯದ ಎ > ಇ/ಈ ಆಗಿ ಪರಿವರ್ತನೆಯಾಗಿದೆ.**

ಮನೆ	–	ಮನೀ
ಕುದುರೆ	–	ಕುದರಿ
ಆಕೆ	–	ಅಕೀ
ನಡಿಗೆ	–	ನಡಿಗೆ
ಕತೆ	–	ಕತೀ
ಆಸರೆ	–	ಆಸರಿ
ಸೊಸೆ	–	ಸೊಸಿ
ನಾಳಿಗೆ	–	ನಾಳಿಗಿ
ಕಡೀಗೆ	–	ಕಡೀಗಿ
ನಾಚಿಗೆ	–	ನಾಚ್ಗಿ
ಮೈಲಿಗೆ	–	ಮೈಲಿಗೀ

ಆಕೆ – ಆಕಿ

ಸೂಳೆ – ಸೂಳಿ

ಚಿಂತೆ – ಚಿಂತಿ

ಅಂಜಿಕೆ – ಅಂಜಿಕಿ

ಸಂಜೆ – ಸಂಜಿ

ಅಮವಾಸ್ಯೆ – ಅಮಾಸಿ

ಹುಣ್ಣಿವೆ – ಹುಣ್ಣಿವಿ

ಈಕೆ – ಈಕೀ

ತಲೆ – ತಲಿ

ದವಾಖಾನೆ – ದವಾಖಾನಿ

*ನಾಮಪದವಾಗಿದ್ದು, ದ್ವಿತೀಯಾಕ್ಷರದಲ್ಲಿ 'ರ'ಕಾರವಿದ್ದು, ತೃತೀಯಾಕ್ಷರದಲ್ಲಿ ಪರಿವೇಷ್ಟಿತ ಧ್ವನಿಗಳಾದ ಟ, ಡ, ಣ, ಳ ಗಳಿದ್ದರೆ 'ರ' ಕಾರದ ಮುಂದಿನ ಸ್ವರವು ಲೋಪ ಹೊಂದಿ ಮುಂದಿನ ವ್ಯಂಜನದೊಡನೆ ಹೊಂದಿಕೊಂಡಿರುತ್ತದೆ.

ಇರಲಿ – ಇರ್ಲಿ

ಹೊರಳಿ – ಹೊಳ್ಳಿ

ತರಲಿ – ತರ್ಲಿ

ಬರಲಿ – ಬರ್ಲಿ

*ಬಂಧು ಸೂಚಕಗಳಲ್ಲಿ ಅ > ಎ/ಯ ಆಗಿ ಉಚ್ಚರಿಸಲಾಗುತ್ತಿದೆ.

ಅಪ್ಪ – ಎಪ್ಪ

ಅವ್ವ – ಯವ್ವ

*ಕೆಳಸ್ತರದ ವ್ಯಕ್ತಿಗಳನ್ನು ಸಂಬೋಧಿಸುವಾಗ 'ಯ' ಎಂಬ ಪ್ರತ್ಯಯ ಹಚ್ಚಿರುವುದು ಸಾಮಾನ್ಯವಾಗಿ ಉಲ್ಲೇಖಿತಗೊಂಡಿದೆ.

ಭೀಮಪ್ಪ – ಭೀಮ್ಯಾ

ಸಾಬ – ಸಾಬ್ಯಾ

ಗಿರಿಯಪ್ಪ – ಗಿರ್ಯಾ

ಶಿವಪ್ಪ – ಶಿವ್ಯಾ

ನಾಗಪ್ಪಾ – ನಾಗ್ಯಾ

ಕಾಮಣ್ಣಾ – ಕಾಮ್ಯಾ

ತಿಪ್ಪ – ತಿಪ್ಯಾ

ಕಾಳಪ್ಪಾ – ಕಾಳ್ಯಾ

ರಾಮಪ್ಪಾ – ರಾಮ್ಯಾ

ಶೇಷಾಚಲ – ಶೇಷ್ಯಾ

ಬಾಳಪ್ಪಾ – ಬಾಳ್ಯಾ

ಇದರಂತೆ ಸ್ತ್ರೀಲಿಂಗ ರೂಪಕ್ಕೆ 'ಇ'ಕಾರ ಬಳಕೆಯಾಗಿದೆ.

ನಿಂಗವ್ವಾ – ನಿಂಗಿ

ಶಾರವ್ವಾ – ಶಾರಿ

ಜೋಡು ನುಡಿಗಳು

ಚಂದ್ರಕಾಂತ ಕುಸನೂರರವರ ಕಾದಂಬರಿಗಳಲ್ಲಿ ಭಾಷೆಯ ಸೊಬಗನ್ನು ಹೆಚ್ಚಿಸಲು ಗ್ರಾಮ ಭಾಷೆಯಲ್ಲಿ ಮಾತನಾಡುವಾಗ ಬರುವ ಜೋಡು ನುಡಿಗಳು ಸರಾಗವಾಗಿ ಮಿಶ್ರಿತವಾಗಿದೆ. ಭಾಷೆಯನ್ನು ಪರಿಣಾಮಕಾರಿಯಾಗಿ ಬಳಸುವಾಗ ಕಾದಂಬರಿಯಲ್ಲಿ ಒಂದು ಪದದ ಜೊತೆಗೆ ಅದೇ ಅರ್ಥಛಾಯೆಯುಳ್ಳ ಅಥವಾ ಅದಕ್ಕೆ ಪೂರಕ ಅರ್ಥದ ಮತ್ತೊಂದು ಪದವನ್ನು ಜೊತೆಗೂಡಿಸಿ ಬಳಸುವುದರಿಂದ ಕಾದಂಬರಿ ಓದುಗರಿಗೆ ಹತ್ತಿರವಾಗುತ್ತದೆ. ಇವರ ಕಾದಂಬರಿಗಳಲ್ಲಿ ಬಂದ ಜೋಡುನುಡಿಗಳನ್ನು ಈ ರೀತಿಯಲ್ಲಿ ಕೊಡಲಾಗಿದೆ.

ಬೀಗರು–ಬಿಜ್ಜರು, ಬಾಜಾ–ಭಜಂತ್ರಿ, ಖರೀದಿ–ಪರೀದಿ, ಮಡೀ–ಮೈಲಿಗೆ, ಹಣ್ಣು–ಹಾಲು, ಗೊಬ್ರಾ–ಗಿಬ್ರಾ, ಮಂತ್ರ–ಮಾಟಾ, ರಂಟೀ–ಕುಂಟಿ, ಜಾತಿ–ಗೀತಿ,ದೇವರು–ದಿಂಡರು,ಮಡಿಕೆ–ಉಡಿಕೆ, ಕಾಳು–ಕಡಿ,ಬೆಂಡು–ಬೆತ್ತಾಸು, ಸೀರೆ–ಕುಪ್ಪಸ,ಗುಡಿ–ಗುಂಡಾರ, ಜಾತಿ–ಮತ, ಮೇಲು–ಕೀಳು, ಗಿಡ–ಮರ,ಸಮಾಜ–ಗಿಮಾಜ,ಮನೀ–ಮಾರು, ಹೆಂಡ್ತಿ–ಮಕ್ಕಳು ಮುಂತಾದವುಗಳು.

ಅನುಕರಣಾವಾಚಕಗಳು

ದಿನ ನಿತ್ಯ ಬಳಕೆಯಲ್ಲಿ ಅನುಕರಣವಾಚಕ ನುಡಿಗಳನ್ನು ಬಳಸುತ್ತೇವೆ.ಚಂದ್ರಕಾಂತ ಕುಸನೂರರವರ ಕಾದಂಬರಿಗಳಲ್ಲಿ ಇಂತಹ ನುಡಿಗಳನ್ನು ಕಾದಂಬರಿಯಲ್ಲಿ ಬರುವ ಕತೆಯ ಆಶಯ, ಸನ್ನಿವೇಶಕ್ಕೆ ತಕ್ಕಂತೆ ಬಳಸಿದ್ದಾರೆ.ಇದರಿಂದ ಓದುಗರಲ್ಲಿ ಹೊಸ ಆಸಕ್ತಿಯನ್ನು ಹುಟ್ಟಿಸುತ್ತವೆ.

"ಮಟಮಟಾ ಮದ್ಯಾಣದಾಗ ತಿಕ್ಸಗೋಳಾಕ ಹೊಂಟದೇನಲೇ ನಿಂಗ್ಯಾ"

(ಯಾತನಾ ಶಿಬಿರ ಪು.ಸಂ.7)

"ದಬ ದಬ ಉಚ್ಚೆ ಹೊಯ್ದು" (ಯಾತನಾ ಶಿಬಿರ ಪು.ಸಂ.7)

" ಗದ ಗದಾ ನಡುಗಲಾರಂಭಿಸಿದ" (ಯಾತನಾ ಶಿಬಿರ ಪು.ಸಂ.10)

"ಸುರ್ ಸುರೆಂದು ಕುಡಿಯಲಾರಂಭಿಸಿದ" (ಯಾತನಾ ಶಿಬಿರ ಪು.ಸಂ.25)

"ಹೆಣ್ಣು ಮಕ್ಕಳ ಕಲಕಲ ಮಾತು" (ಯಾತನಾ ಶಿಬಿರ ಪು.ಸಂ.18)

"ತಮ್ಮ ಖಡಾವುಗಳನ್ನು ಹಾಕಿಕೊಂಡ ರಪ್ ರಪ್ ಎಂಬ ಶಬ್ದ ಮಾಡುತ್ತ ಸ್ವಾಮಿಗಳು ಹೊಂಟರು.(ಕೆರೂರು ನಾಮಾ–29)

"ಜಾತ್ರೆಯ ಹಿಂದಿನ ರಾತ್ರಿಯಿಂದಲೆ ಜಿಟಿ ಜಿಟಿ ಮಳೆ ಸುರಿಯುತ್ತಿತು.

(ಕೆರೂರ ನಾಮಾ–57)

"ಧಗ್ ಧಗ್ ಉರಿಯುತ್ತಿರುವ ಚಿತೆಯ ಸುತ್ತ ಕೆರೂರಿನ ಜನ ಅಳುತ್ತ ನಿಂತಿದ್ದರು. (ಕೆರೂರ ನಾಮಾ–142)

"ಇನ್ನೂ ಚುಮ ಚುಮ ನಸುಕು" (ಒಂದು ಕೈಫಿಯತ್ ಪು.ನಂ.73)

"ಅಂವ ನನ್ನ ಕಂಡ್ರ ಕಿಡಿ ಕಿಡಿಯಾಗ್ತಾನೆ" (ಒಂದು ಕೈಫಿಯತ್ ಪು.ನಂ.11)

"ಒಂದಿಷ್ಟು ಉಪ್ ಉಪ್ ಎಂದು ಊದಿಕೊಡ್ತಿಯಾ" (ಒಂದು ಕೈಫಿಯತ್ ಪು.ನಂ.19)

"ಹೊಟ್ಟೆ ಹಸಿವೆಯಿಂದ ಚುರ್ ಚುರ್ ಅಂತಾಯಿದೆ" (ಒಂದು ಕೈಫಿಯತ್ ಪು.ನಂ.21)

"ಬಟ್ಟೆ ಒಗೆಯುವ ಟಪ್ ಟಪ್ ಎಂದು ಶಬ್ದ ಕೇಳಿಸುತ್ತಿತ್ತು"

(ಒಂದು ಕೈಫಿಯತ್ ಪು.ನಂ.24)

"ಅವರು ಗುಸು ಗುಸು ಮಾತಾಡುತ್ತಾ ಕುಳಿತರು" (ಒಂದು ಕೈಫಿಯತ್ ಪು.ನಂ.85)

"ನಡೀ, ಲಗೂಲೇ ನಡೀ, ಝುಪ್ ಝುಪ್ ಹೆಜ್ಜೆ ಹಾಕು"

(ಗೋಹರಜಾನ, ಮಾಲತಿ ಮತ್ತು ನಾನು ಪು.ನಂ.206)

"ಗೋವರ್ಧನಾಚಾರಿ ಚಕ್ ಚಕ್ ನಡೆದರು"

(ಗೋಹರಜಾನ, ಮಾಲತಿ ಮತ್ತು ನಾನು ಪು.ನಂ.206)

ದ್ವಿರುಕ್ತಿಗಳು

ಕುಸನೂರರವರ ಕಾದಂಬರಿಗಳಲ್ಲಿ ಸಂದರ್ಭಕ್ಕೆ ತಕ್ಕಂತೆ ಸಹಜಯುತವಾಗಿ ದ್ವಿರುಕ್ತಿಗಳನ್ನು ಬಳಸಿದ್ದಾರೆ ಭಾವನೆಗಳನ್ನು ಯಥಾ ಪ್ರಕಾರ ಸಂದರ್ಭ, ಸನ್ನಿವೇಶಕ್ಕೆ ತಕ್ಕಂತೆ ಕೆರಳಿಸಲು ತೀವ್ರತೆಯನ್ನು ಹೆಚ್ಚಿಸಲು ಇವುಗಳು ತುಂಬಾ ಸಹಾಯಕವಾಗುತ್ತವೆ.

ಸಾಮಾನ್ಯವಾಗಿ ಒಂದು ವಿಶೇಷಾರ್ಥವನ್ನು ವ್ಯಕ್ತಪಡಿಸುವದಕ್ಕಾಗಿ ಒಂದು ಪದವನ್ನು ಬಿಡುವಿಲ್ಲದೇ ಎರಡು ಸಲ ಪ್ರಯೋಗಿಸುವುದಕ್ಕೆ ದ್ವಿರುಕ್ತಿ ಎನ್ನುವರು.ಇಂತಹ ದ್ವಿರುಕ್ತಿಗಳು ಕಾದಂಬರಿಗಳಲ್ಲಿ ಉತ್ಸಾಹ, ಕೋಪ, ಸಂಭ್ರಮ, ಆಶ್ಚರ್ಯ, ಆನಂದ ಮುಂತಾದ ಸಂದರ್ಭಗಳಲ್ಲಿ ಬಳಕೆಯಾಗಿದೆ.

"ಅವರಗಂಜಿ ಥರಾಥರಾ ನಡ್ಗತಾವು"(ಯಾತನಾ ಶಿಬಿರ-ಪು.ನಂ-18)

"ಕೆಳಗಿನ ಭೂಮಿಯಿಂದ ತುಂಬಿ ತುಂಬಿ ಹರಿಯುವ ಬೆಳಕು"

(ಒಂದು ಕೈಫಿಯತ್ ಪು.ನಂ-4)

"ಊದಿ ಊದಿ ಚಹ ಕುಡಿಯಲು ಪ್ರಾರಂಭಿಸಿದ" (ಯಾತನಾ ಶಿಬಿರ ಪು.ನಂ-14)

"ಪಿಳಿ ಪಿಳಿ ಕಣ್ಣು ಬಿಡುತ್ತ ನಾನು ಅವನ ಮುಖ ನೋಡಿದೆ"

(ಗೋಹರಜಾನ, ಮಾಲತಿ ಮತ್ತು ನಾನು ಪು.ನಂ.35)

ಶೈಲಿ

ಚಂದ್ರಕಾಂತ ಕುಸನೂರರವರ ಕಾದಂಬರಿಗಳಲ್ಲಿ ಬರುವ ಭಾಷೆಯ ಅವಲೋಕ ಮಾಡಿದ ಮೇಲೆ, ಕಾದಂಬರಿಗಳಲ್ಲಿ ಅವರ ತಂತ್ರಗಾರಿಕೆ ಹಾಗೂ ಅವುಗಳ ಶೈಲಿಯ ಕೆಲವು ಮುಖ್ಯ ಅಂಶಗಳನ್ನು ಕುರಿತು ವಿಶ್ಲೇಷಣೆ ಮಾಡಲಾಗಿದೆ.

ಶೈಲಿ ಎಂದರೆ 'ಅತ್ಯುತ್ತಮ ಪದಗಳ ಅತ್ಯುತ್ತಮ ಜೋಡಣೆಯೇ ಶೈಲಿ'. ಕೋಲರಿಡ್ಜ ಪ್ರಕಾರ ಶೈಲಿ ಎಂದರೆ-'ಆಲೋಚನೆ ತೊಡಿಸುವ ಉಡುಪು' ಆಲೋಚನೆಗೆ ಸಮರ್ಪಕ ಭಾಷೆಯನ್ನು ತೊಡಿಸುವ ಸಮಾರಂಭ ಎನ್ನುತ್ತಾನೆ. ಹೀಗೆ ಅನೇಕರು ಶೈಲಿಯ ಬಗ್ಗೆ ತಮ್ಮದೇ ವ್ಯಾಖ್ಯಾನ ನೀಡಿದ್ದಾರೆ. ಆದರೆ ಶೈಲಿಯಿಂದ ಲೇಖಕನ ಪ್ರತಿಭೆಯನ್ನೂ ಒರೆಗೆ ಹಚ್ಚಬಹುದು ಎಂಬುದು ಮಾತ್ರ ಸತ್ಯ. ಶೈಲಿ ಎಂದರೆ ಲೇಖಕರು ತಮ್ಮ ಬರವಣಿಗೆಯಲ್ಲಿ ಭಾಷೆಯನ್ನು ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಹಾಗೂ ಭಾಷೆಯನ್ನು ಪರಿಣಾಮಕಾರಿಯಾಗಿ ಬಳಸುವ ಕಲೆಯ ತಂತ್ರವನ್ನು ಶೈಲಿ ಎನ್ನುವರು.

ಒಟ್ಟಿನಲ್ಲಿ ಶೈಲಿ ಎಂಬುದು ಸಾಹಿತಿಯ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವ ಸಾಧನವು ಅಹುದು. ಒಂದು ಸಮಾಜದ ಸಂಸ್ಕೃತಿ ಪ್ರತಿಬಿಂಬವೂ ಅಹುದು ಶೈಲಿಯನ್ನು ನೋಡಿದಾಕ್ಷಣ ಇದು ಚಂದ್ರಕಾಂತ ಕುಸನೂರರವರ ಬರಹದ ಶೈಲಿ ಎಂದು ಗುರುತಿಸುವ ಮಟ್ಟಿಗೆ, ಚಂದ್ರಕಾಂತ ಕುಸನೂರರವರು ತಮ್ಮ ಕಾದಂಬರಿಗಳಲ್ಲಿ ತಮ್ಮದೇ ಆದ ಶೈಲಿಯ ಛಾಪು ಮೂಡಿಸಿದ್ದಾರೆ. ಅವರ ಸಾಹಿತ್ಯ ರಚನೆಯಲ್ಲಿ ಭಾಷೆಯ ಧ್ವನಿ, ರೂಪ, ಅರ್ಥ, ಶಬ್ದ, ಪದ ಹಾಗೂ ವಾಕ್ಯಗಳು ಪ್ರಮುಖವಾಗಿ ತಮ್ಮ ಅರ್ಥವನ್ನು ಕಳೆದುಕೊಳ್ಳದೇ, ತಮ್ಮ ಲಯವನ್ನು ಬದಲಿಸದೇ ಬರುತ್ತವೆ. ಅವರ ಕಾದಂಬರಿಗಳಲ್ಲಿ ಸಾಮಾಜಿಕ ಮತ್ತು

ಪ್ರದೇಶದ ಜನಪದ ಆಚರಣೆ ಹಾಗೂ ಭಾಷೆಯೊಂದಿಗೆ ಜೀವಂತ ಸಂಬಂಧ ಅವರ ಶೈಲಿಯಲ್ಲಿ ಎದ್ದು ಕಾಣುತ್ತವೆ. ಕಲಬುರ್ಗಿಯ ಅವರ ಭಾಷಾ ಶೈಲಿ ಇಡೀ ಕರುನಾಡು ತುಂಬೆಲ್ಲಾ ಓದುಗರನ್ನು ಹೊಂದುವಂತೆ ಮಾಡಿದೆ. ಅರ್ಥಕ್ಕೆ ತಕ್ಕ ಶಬ್ದ ಬಿಡಿಸಲಾರದಂತೆ, ಬದಲಿಸಲಾಗದಂತೆ ಎರಕ ಹೊಯ್ದಂತೆ ಅವರ ಕಾದಂಬರಿಗಳಲ್ಲಿ ಒಂದು ನಾಣ್ಯದ ಎರಡು ಮುಖಗಳಂತೆ ಸಾಗುತ್ತದೆ.

ಉಪಮೆ-ರೂಪಕಗಳು

ಚಂದ್ರಕಾಂತ ಕುಸನೂರರವರ ಅಪ್ಪಟ ಪ್ರತಿಭೆ ಪ್ರದರ್ಶನವಾದದ್ದು ಇಲ್ಲಿಯೇ ತಮ್ಮ ಕಾದಂಬರಿಯಲ್ಲಿ ವಿಶಿಷ್ಟ ಪದಪುಂಜಗಳಿಂದ, ಉಪಮೆಗಳಿಂದ ಕಾದಂಬರಿಯ ಸೊಬಗನ್ನು ಹೆಚ್ಚಿಸಿದ್ದಾರೆ. ಇಂತಹ ಉಪಮೆ ರೂಪಕಗಳಿಂದ ಕಾದಂಬರಿಗಳು ತನ್ನ ಮಹತ್ವವನ್ನು ಹೆಚ್ಚಿಸಿಕೊಂಡಿವೆ. ದಿನನಿತ್ಯದಲ್ಲಿ ಸಾಮಾನ್ಯ ಜನರ ಬಾಯಲ್ಲಿ ಕಂಡು ಬರುವ ಇಂತಹ ಗ್ರಾಮ್ಯ ಉಪಮೆ- ರೂಪಕಗಳು ಓದುಗರ ಮನಸ್ಸನ್ನು ಆಕರ್ಷಿಸುತ್ತವೆ. " ಹಾವಿನಂತೆ ಬುಸುಗುಟ್ಟುತ್ತ" _ (ಯಾತನಾ ಶಿಬಿರ ಪು.ಸಂ-14)

" ಬೆಂಕಿಹ್ಯಾಂಗ ತಾಯಿ, ಮೈಲಿಗಾಯ್ತುಂದ್ರ ಊರಿಗೂರೇ ಸುಟ್ಟು ಬಿಟ್ಟಾಳು"

(ಯಾತನಾ ಶಿಬಿರಪು.ಸಂ-71)

" ಕೆಂಪು ಮೈಬಣ್ಣ, ಆಕರ್ಷಕ ರೂಪ, ತನ್ನ ವಯಸ್ಸಿನಿಂದಾಗಿ ಕುಸುಮಾ ರಾಜಾ ರವಿವರ್ಮನ ಕ್ಯಾಲೇಂಡರ್ ಮೇಲಿನ ಲಕ್ಷ್ಮಿ ಸರಸ್ವತಿಯಂತೆ ಕಾಣುತ್ತಿದ್ದಳು" (ಯಾತನಾ ಶಿಬಿರ ಪು.ಸಂ.74)

"ಅವಳ ಮುಖ ಕಾರ್ತಿಕ ಪೂರ್ಣಿಮೆಯ ಚಂದ್ರನಂತಿತ್ತು"

(ಒಂದು ಕೈಪಿಯತ್ ಪು.ಸಂ.81)

"ಸಿಗರೇಟಿನ ಹೊಗೆಯಂತೆ ಮೌನವಾಯಿತು ಅವಳ ಮುಖ"
(ಒಂದು ಕೈಫಿಯತ್ ಪು.ಸಂ 90)
"ಬಿಳಿ ಬಣ್ಣದ ಶರ್ಟು ಮತ್ತು ಜಿನ್ ಪ್ಯಾಂಟು ಧರಿಸಿದ ಶಂಕರ ಕಂಚಿನ ಪ್ರತಿಮೆಯಂತೆ ಕಾಣಿಸುತ್ತಿದ್ದ" (ಒಂದು ಕೈಫಿಯತ್ ಪು.ಸಂ 102)

"ಸಂಸಾರ ಸುಖ ಅಂಬೋದು ಅಮಾಸಿ ಚಂದ್ರನ್ಹಾಂಗಿತ್ತು"(ಕೆರೂರು ನಾಮಾ ಪು.ಸಂ 4)

" ತಗಡದ ಮ್ಯಾಲ ಮಳೆ ಬಿದ್ದಂತೆ ನಗಲಾರಂಭಿಸಿದ" (ಕೆರೂರು ನಾಮಾ ಪು.ಸಂ54)

"ಹಾವಿನ ಬಿಚ್ಚಿದ ಹೆಡೆಯಂತೆ ಕಾಣಿಸುವ ಕ್ಯಾಕ್ಟಸ್" (ಕೆರೂರು ನಾಮಾ ಪು.ಸಂ 50)

"ಬಂಗಾರದಿಂದ ಮಾಡಿದ 'ಬಾಹುಲಿ' ಹಾಂಗ ಥಳ ಥಳ ಮಿಂಚುತ್ತಿದ್ದಳು"

(ಕೆರೂರು ನಾಮಾ ಪು.ಸಂ 108)

"ದು:ಶಾಸನನ ಕೈಯಲ್ಲಿ ಸಿಕ್ಕ ದ್ರೌಪದಿಯಂತೆ" (ಒಂದು ಕೈಫಿಯತ್ ಪು.ಸಂ 14)

" ಅನ್ನದ ಚಂಡಿನಂತೆ ಕಾಣಿಸುವ ಪಿಂಡಗಳು" (ಒಮದು ಕೈಫಿಯತ್ ಪು.ಸಂ30)

"ದಟ್ಟ ನೀಲಿರಂಗಿನ ಆಕಾಶ, ಅರಿವಾದ ಸಂತನಂತೆ ಶಾಂತವಾಗಿತ್ತು"

(ಒಂದು ಕೈಫಿಯತ್ ಪು.ಸಂ 38)

"ಸುಕ್ಕ ಗಟ್ಟಿದ ತೆಂಗಿನಕಾಯಿಯಂತೆ ಕಾಣುವ ಮೊಲೆಗಳು"

(ಒಂದು ಕೈಫಿಯತ್ ಪು.ಸಂ 69)

" ಸಮುದ್ರದಲ್ಲಿನ ತೆರೆಗಳು ಆನೆ ಸೊಂಡಿಲದಂತೆ ಮೇಲೆ ಕೆಳಗಾಗುತ್ತಿದ್ದವು"

(ಒಂದು ಕೈಪಿಯತ್ ಪು.ಸಂ 71)

ಗಾದೆಮಾತುಗಳು

"ವೇದ ಸುಳ್ಳಾದರೂ ಗಾದೆ ಸುಳ್ಳಾಗದು" ಎಂಬ ನಾಣ್ಣುಡಿಯು ಗಾದೆ ಮಾತುಗಳ ಮಹತ್ವವನ್ನು ಸಾರುತ್ತದೆ. ಒಬ್ಬ ಸೃಜನಶೀಲ ಬರಹಗಾರ ತಾನೊಬ್ಬ ಯಶಸ್ವಿ ಬರಹಗಾರ ಎಣಿಸಿಕೊಳ್ಳಬೇಕಾದರೆ ಅವನು ಪ್ರಯೋಗಿಸುವ ತನ್ನ ಪ್ರಾದೇಶಿಕ ವಾಗ್ರೂಢಿಗಳನ್ನು ಎಷ್ಟರ ಮಟ್ಟಿಗೆ ಬಳಸಿದ್ದಾರೆ ಎನ್ನುವುದರ ಮೇಲೆ ಅವಲಂಭಿತವಾಗಿರುತ್ತದೆ. ಆಡು ನುಡಿಯ ಜೀವಂತ ಪ್ರತೀತಗಳಾದ ಗಾದೆಗಳು ಕಾದಂಬರಿಯ ಮೆರಗನ್ನು ಹೆಚ್ಚಿಸುತ್ತವೆ. ಆಡು ಮಾತಿನ ಕೆನೆಯಂತಿರುವ ಗಾದೆಗಳು ಸಾಕಷ್ಟು ಇವರ ಕಾದಂಬರಿಗಳಲ್ಲಿ ಕಾಣಸಿಗುತ್ತವೆ.

"ಕಲಿತಿದ್ದ ಸ್ವಭಾವ ಕುಣ್ಯಾಗಿಟ್ರೂ ಹೋಗೊಲ್ಲ"

(ಗೋಹರಜಾನ ಮಾಲತಿ ಮತ್ತು ನಾನು ಪು.ಸಂ 39)

"You know, Time and Tide for want for no man"

(ಗೋಹರಜಾನ ಮಾಲತಿ ಮತ್ತು ನಾನು–6)

"ಎಮ್ಮಿಗಿ ಉರಿ ಬಂದ್ರ ಎತ್ತಿಗಿ, ಬರೀ ಕೊಟ್ಟಾಂಗಾಯ್ತಪ"

(ಕೆರೂರು ನಾಮಾ ಪು.ಸಂ 38)

"ಪಾಲಿಗೆ ಬಂದದ್ದು ಪಂಚಾಮೃತ" (ಕೆರೂರು ನಾಮಾ ಪು.ಸಂ 6)

"ಉಪ್ಪುಂಡ ಮನೀ ಜಂತಿ ಎಣಿಸ್ತ್ಯಾ"

(ಗೋಹರಜಾನ ಮಾಲತಿ ಮತ್ತು ನಾನು ಪು.ಸಂ44)

"ಉಂಡ ಎಡ್ಯಾಗ ಉಚ್ಚೀ ಹೋಯ್ತ್ಯಾ"

(ಗೋಹರಜಾನ ಮಾಲತಿ ಮತ್ತು ನಾನು ಪು.ಸಂ 44)

"ಊರು ಚಿಂತೆ ಮಾಡಿ ಮುಲ್ಲಾ ಬಡವಾದನಂತೆ"

(ಗೋ.ಮಾ.ಮತ್ತು ನಾನು ಪು.ಸಂ 267)

ಬೈಗುಳಗಳು

ಗ್ರಾಮೀಣ ಭಾಷೆಯಲ್ಲಿ ಬೈಗುಳಗಳು ಹಾಸು ಹೊಕ್ಕಾಗಿವೆ. ಚಂದ್ರಕಾಂತ ಕುಸನೂರರವರು ತಮ್ಮ ಕಾದಂಬರಿಗಳಲ್ಲಿ ಸನ್ನಿವೇಶಕ್ಕೆ ಹಾಗೂ ಸಂದರ್ಭಕ್ಕೆ ಅನುಗುಣವಾಗಿ ಬಳಸಿ, ಭಾಷೆಯ ಮತ್ತು ಕಾದಂಬರಿ ಮೆರಗನ್ನು ಹೆಚ್ಚಿಸಿದ್ದಾರೆ.

"ಬೈಗುಳಗಳು ಭಾಷೆಯ ಪರಿಣಾಮಕಾರಿ ಘಟಕಗಳಾಗಿವೆ. ಅವು ಒಂದು ರೀತಿಯಲ್ಲಿ ಭಾಷಿಕ ಹೊಡೆತ ಎನ್ನಬಹುದು. ಬೈಗುಳವು ಹೊಡೆತಕ್ಕಿಂತ ಸೂಕ್ಷ್ಮವದುದು ಮತ್ತು ಸಂಕೀರ್ಣವಾದುದು. ವ್ಯಕ್ತಿಗೆ ದೈಹಿಕ ಮತ್ತು ಮಾನಸಿಕ ಯಾತನೆಯಾದಾಗ ಬೈಗುಳಗಳು ಸೃಷ್ಟಿಯಗುತ್ತವೆ. ಬೈಗುಳಗಳಿಗೆ ಸಾಮಾಜಿಕ ಒಪ್ಪಿಗೆ ಬಿದ್ದಾಗ ಅದಕ್ಕೆ ಅರ್ಥ ಪ್ರಾಪ್ತಿಯಾಗುತ್ತದೆ"[7] "ಕತ್ತೆಗೆ ಲತ್ತಿ ಪೆಟ್ಟು ಮನುಷ್ಯನಿಗೆ ಮಾತಿನ ಪೆಟ್ಟು" ಎಂಬ ಗಾದೆಯಂತೆ, ಅತೀ ಅವಶ್ಯಕತೆಯಿದ್ದಾಗ ಮಾತ್ರ ಬೈಗುಳಗಳು ಪ್ರಯೋಗವನ್ನು ಇವರ ಕಾದಂಬರಿಯಲ್ಲಿ ಕಾಣುತ್ತೇವೆ.

"ಬೈದು ಹೇಳುವವನನ್ನು ನಂಬು, ನಕ್ಕು ಹೇಳುವವನನ್ನು ನಂಬಬೇಡ" "ಬೈದು ಹೇಳಿದವ ಬುದ್ದಿಗಾಗಿ, ನಕ್ಕು ಹೇಳಿದವ ಕೆಟ್ಟದ್ದಾಗಿ" ಎನ್ನುವ ಗಾದೆಗಳು ಬೈಗುಳಗಳ ಮಹತ್ವವನ್ನು ಸಾರುತ್ತವೆ. ಸಮಾಜದಲ್ಲಿ ಇಂತಹ ಬೈಗುಳಗಳು ಸಾಕಷ್ಟು ಪ್ರಮಾಣದಲ್ಲಿ ಜನರ ಆಡು ಮಾತಿನಲ್ಲಿ ಅರಿವಿಲ್ಲದಂತೆ ಬಂದು ಹೋಗುತ್ತವೆ. ಇಂತಹ ಬೈಗುಳಗಳನ್ನು ಚಂದ್ರಕಾಂತ ಕುಸನೂರರವರು ತಮ್ಮ ಕಾದಂಬರಿಗಳಲ್ಲಿ ಸಮರ್ಥವಾಗಿ ಉಪಯೋಗಿಸಿದ್ದಾರೆ.

"ರಂಡೇಮಗನ ನಿನ್ನ ಹೊಲದಾಗ ಕುರುಬರ ಶ್ಯಾಂತ ದಿನಾ ಉಚ್ಚಿ ಹೊಯ್ತಾನ, ಖಬರಿಲ್ಲ ಖಬರಗೇಡಿ"(ಯಾತನಾ ಶಿಬಿರ ಪು.ಸಂ–7)

"ಕತ್ತೆ ಮುಂಡೆ ಮಗನೇ! ಆಗಬೇಕು" (ಯಾತನಾ ಶಿಬಿರ ಪು.ಸಂ–52)

"ಕೇಳ್ಸಿತಾಯಿಲ್ಲೇನೆ ರಂಡೆ, ನೀರ್ ತೆಗಿ, ಎಲ್ಲಾ ಹೇಸಿ ತೋಳಕೊಂತೀನಿ"

(ಯಾತನಾ ಶಿಬಿರ ಪು.ಸಂ–60)

"ತಿನ್ನು,ತಿನ್ನು,ತಿಂದ ಸಾಯಿ ರಂಡೆ" (ಯಾತನಾ ಶಿಬಿರ ಪು.ಸಂ–60)

"ಅದ್ಕ ಆ ಹಲಕಟ್ ನನ್ಮಕ್ಕಳು ಎನಂತಾರ (ಯಾತನಾ ಶಿಬಿರ ಪು.ಸಂ–63)

"ಸೂಳೆ ಮಗನೇ ಚೋಟದ್ದಿ, ಕಳೂ ಮಾಡ್ತೇನು" (ಯಾತನಾ ಶಿಬಿರ ಪು.ಸಂ–70)

"ಯಾವನೋ ಅವನು ಸೂಳಿಮಗಾ ಬಂದಾವ? ಎಂದು ಕೇಳಿದ"

(ಯಾತನಾ ಶಿಬಿರ ಪು.ಸಂ–100)

"ಇನ್ನ ಮ್ಯಾಲ ಬೋಳಿ ಮಕ್ಕಳನ್ನು ಕರಕೊಂಡ ಬರಬ್ಯಾಡ"

(ಯಾತನಾ ಶಿಬಿರ ಪು.ಸಂ–100)

"ನಾನ್ಯಾ ಅಂದ್ರ ಮಹಾಕಂತ್ರಿ ಸೂಳೆಮಗ" (ಕೆರೂರು ನಾಮಾ ಪು.ಸಂ–1)

"ಏ ರಂಡೇ ಮಗನೇ, ನಿನ್ನ ಮೈಯಾಗ ಹುಳಾಬೀಳಾ, ನನ್ನ ಮನೀ ಗ್ವಾಡಿಗಿ ಕೂದಲಾ ತುಂಬಿದ ಬಟ್ಟಿ ಜಾಡಿಸ್ತೆನೋ?" (ಕೆರೂರು ನಾಮಾ ಪು.ಸಂ-5)

"ಆ ಭೋಸ್ಡಿ ಗೊಡವಿಗಿ ಹೋಗಬ್ಯಾಡೋ ಅಂತ ಎಷ್ಟು ಹೇಳಿದರೂ ನೀ ಕೇಳಲಿಲ್ಲಾ ಈಗ ಹೊಡಿಸಿಗೊಂಡೀ" (ಕೆರೂರು ನಾಮಾ ಪು.ಸಂ-5)

"ಅಂವಾ ಕಿಶನರಾಯ ಚೋದಿಮಗ ಹಿಂಗ ಹೇಳಿದ್ನಾ? ಅಂವಗ ಶೆಟಿಬ್ಯಾನಿ ಬಂದು ಹೋಗಾ" (ಕೆರೂರು ನಾಮಾ ಪು.ಸಂ-35)

"ಆ ರಂಡೀ ನನ್ನನ್ನ ಗ್ವಾಡೀಗಿ ಕುಂದ್ರ ಸೂಕ ಹೊಂಟಾಳ"

(ಕೆರೂರು ನಾಮಾ ಪು.ಸಂ-36)

"ಗಿರ್‍ಯಾ . . . .ಏ ಚೋದಿ ಮಗನ ಗಿರ್‍ಯಾ" (ಕೆರೂರು ನಾಮಾ ಪು.ಸಂ-45)

"ಅರೇ ಭೋಸಡಿಚಾನೋ, ಅಪ್ಪಾಜಿ ಪೂಜಾ ಕರೂಲಾಗಲಾಯ"

(ಒಂದು ಕೈಫಿಯತ್ ಪು.ಸಂ-73)

"ತೋಗೋರೋ ಸೂಳೇ ಮಗನಾ, ತಿನ್ನು

(ಗೋಹರಜಾನ,ಮಾಲತಿ ಮತ್ತು ನಾನು ಪು.ಸಂ-13)

"ಇವರನ್ನು ದಡ್ಡ ಸೂಳೇ ಮಕ್ಕಳೆಂದು ಬಿರುದು"

(ಗೋಹರಜಾನ,ಮಾಲತಿ ಮತ್ತು ನಾನು ಪು.ಸಂ-24)

"ಲೇ ಚಂದೀ ರಂಡಿ-ಮ್ಯಾಲೇನ ಮಾಡ್ಲಿ ಕತ್ತೀದಿ"

(ಗೋಹರಜಾನ,ಮಾಲತಿ ಮತ್ತು ನಾನು ಪು.ಸಂ-42)

"ಅಯೋ ಹುಚ್ಚಪ್ಯಾಲಿ" (ಗೋಹರಜಾನ,ಮಾಲತಿ ಮತ್ತು ನಾನು ಪು.ಸಂ-43)

"ಚೋದಿ ಮಕ್ಕಳಿಗೆ ಹತ್ಕಡಿ ಹಾಕ್ಸಿ ತರ್ರಸ್ತೀನಿ"

(ಗೋಹರಜಾನ,ಮಾಲತಿ ಮತ್ತು ನಾನು ಪು.ಸಂ-48)

"ಹೋಗ ರಂಡೀ, ಇಲ್ಯಾಕ ಬಂದೀ"

(ಗೋಹರಜಾನ,ಮಾಲತಿ ಮತ್ತು ನಾನು ಪು.ಸಂ-53)

"ಹೋಗು ಭೋಸ್ಡಿ, ಛಿನಾಲಗಿತ್ತಿ ಹೋಗು"

(ಗೋಹರಜಾನ,ಮಾಲತಿ ಮತ್ತು ನಾನು ಪು.ಸಂ-53)

"ತುಕ್ಯಾ ರಂಡೇ ಮಗನೀಗಿ ಕೆಲಸಿಲ್ಲ ಭಗ್ಸಿಲ್ಲ"

(ಗೋಹರಜಾನ,ಮಾಲತಿ ಮತ್ತು ನಾನು ಪು.ಸಂ-56)

"ಬೋಸಡಿ ಮಗನಾ , ಆ ರಂಡಿಲಿಂದ ನಮ್ಮ ಮನೀ ಹಾಳಾಯ್ತು. ಸತ್ತು ಹೋಗಲ ಭೋಸಡಿ" (ಗೋಹರಜಾನ,ಮಾಲತಿ ಮತ್ತು ನಾನು ಪು.ಸಂ-90)

"ಬೋಸಡಿ ಮಗನಾ ನಾಯಾರಂತಿ ತಿಳಿದೀದಿ"

(ಗೋಹರಜಾನ,ಮಾಲತಿ ಮತ್ತು ನಾನು ಪು.ಸಂ-134)

"ಈ ರಂಡೀ ಧಿಮಾಕು ನೋಡಿದ್ರ, ಈಕಿ ಬೆದೀಗಿ ಬಂದಾಳಂತ ಗೊತ್ತಾಗ್ತದ"

(ಗೋಹರಜಾನ,ಮಾಲತಿ ಮತ್ತು ನಾನು ಪು.ಸಂ–170)

"ರಂಡೇ ಮಕ್ಕಳು ಬರೀ ವೈಷ್ಣವಗೋಳೆ ಸಾಯ್ಲಿಕತ್ಯಾವ"

(ಗೋಹರಜಾನ,ಮಾಲತಿ ಮತ್ತು ನಾನು ಪು.ಸಂ–206)

"ಸ್ವಾಮಿ ಮಹಾ ಕಾಲಾಂತಕ ಸೂಳೇಮಗಾ"

(ಗೋಹರಜಾನ,ಮಾಲತಿ ಮತ್ತು ನಾನು ಪು.ಸಂ–228)

"ಖರಾರಿ ಯಾರದೆಂದಲೇ ಭೋಸ್ಡಿಮಗನಾ' ಎಂದು ಮೌಲಾಲಿ

(ಕೆರೂರು ನಾಮಾ ಪು.ಸಂ–82)

"ಓ ಮುರ್ಖೋ ರಂಡಿಕಿ ಅವಲಾದ ಬೋಲಾ, ಮಾ ಭೇನಕಿ ಗಾಲಿದಿಯಾ, ಹಲ್ ಕಟ್ ಜಾತ ಬೋಲಾ"(ಕೆರೂರು ನಾಮಾ ಪು.ಸಂ–83)

ನಿನ್ನ ನವ್ನ ನಾನ್ಯಾ, ನಿನ್ನ ಉಪಟಳ ಬಾಳಾಗೈತಿ' (ಕೆರೂರು ನಾಮಾ ಪು.ಸಂ–85)

ನಾನ್ಯಾ ನಾನ್ಯಾ ಚೋದಿ ಮಗನಾ ಬಾಯಿ ಹರೀ ಬಿಡಬ್ಯಾಡಂತ ತಾಕೀತು ಮಾಡಿದರೂ ನೀ ನಿನ್ನ ಹಲ್ಕಟ ಚಟಾ ಬಿಡುವಲ್ಲಲೇ' (ಕೆರೂರು ನಾಮಾ ಪು.ಸಂ –98)

"ಯಾ ಹಡಿಸಿ ಮಗಾ ಬರ್ತಾನಬರಲಿ" (ಕೆರೂರು ನಾಮಾ ಪು.ಸಂ –106)

"ಆ ಲೌಡಿ ಮಗ ಬಂದ ಹಾದಿಗಿ ಹೋಗಂತ ಹೇಳು (ಕೆರೂರು ನಾಮಾ ಪು.ಸಂ –164)

ಉಪಭಾಷೆಯ ಪದಗಳು

ಹೈದರಾಬಾದ ಕರ್ನಾಟಕ ಭಾಷೆಯ ಸೊಗಡನ್ನು ಬಳಸಿಕೊಂಡು ಬಂದ ಇವರ ಕಾದಂಬರಿಗಳಲ್ಲಿ ಪ್ರಾದೇಶಿಕ ವೈವಿಧ್ಯತೆಯ ಶಬ್ದಗಳು ಹಾಸುಹೊಕ್ಕಾಗಿವೆ. ಕೆಲವೊಂದು ಇಲ್ಲಿ ಉಲ್ಲೇಖಿಸಲಾಗಿದೆ.

ಗ್ವಾಡೆ – ಗೋಡೆ

ಥ್ವಾಡೆ – ಸ್ವಲ್ಪ

ಖರೆ – ಸತ್ಯ

ಹೇತಿ – ಹೆಂಡತಿ

ಸೂಲಗಿತ್ತಿ – ಪ್ರಸೂತಿ ಮಾಡುವವಳು

ಹವಾಖೋರಿ – ವಾಯುವಿಹಾರಿ

ಸಫಾಟ – ಸಮತಲ

ಡಬಿಕೆ – ಹೊಂಡ

ಕಸಬಿಣಿ – ಸೂಳೆ

ಕುಪ್ಪಸ – ಜಂಪರ

ಸ್ವಾಮ್ಯಾರ – ಸ್ವಾಮಿಗಳೆ

ಕಮ್ಮಿ – ಕಡಿಮೆ

ಬ್ರಾಂಬ್ರೂ	–	ಬ್ರಾಹ್ಮಣರು
ಹೋದ್ರ	–	ಹೋದರೆ
ಗವಂಡಿ	–	ಗೌಂಡಿ
ಈಟು	–	ಎಷ್ಟು
ಇಷ್ಯಯ್ಯ	–	ವಿಷಯ
ಕುಂದ್ರು	–	ಕುಳಿತುಕೊಳ್ಳು
ಇಸ್ವಿದ್ಯಾಲಯ	–	ವಿಶ್ವವಿದ್ಯಾಲಯ
ತಾಕತ್ತು	–	ಶಕ್ತಿ
ಮನ್ಯಾಗ	–	ಮನೆಯಲ್ಲಿ
ಸಾಲಿ	–	ಶಾಲೆ
ಸುಮ್ನ	–	ಸುಮ್ಮನೆ
ಅಂವಾ	–	ಅವನು
ಇಚಾರ	–	ವಿಚಾರ
ಇಲ್ಯಾಕ	–	ಇಲ್ಲಿಗೇಕೆ
ಬಂದೀ	–	ಬಂದಿರುವೆ
ಮಾರಿ	–	ಮುಖ
ಸೋವಿವಳ್ಗ	–	ಕಡಿಮೆ ಖರ್ಚಿನಲ್ಲಿ
ಕುಡ್ದು	–	ಕುಡಿದು
ಕುಲಕಣ್ಣಿ	–	ಕುಲಕರ್ಣಿ
ತುಸು	–	ಸ್ವಲ್ಪ
ಹೌಂದು	–	ಹೌದು
ತ್ವಾಟಾ	–	ತೋಟ
ಮುಂಜಾಳೆ	–	ಮುಂಜಾನೆ
ಲಗೂನ	–	ಬೇಗನೆ
ಅವ್ರಿಗೆ	–	ಅವರಿಗೆ
ಉದ್ದರಿ	–	ಉದ್ರಿ
ಲಕಲಾಬ	–	ಲಕ್ಷಾಧಿಪತಿ
ಈರಶೈವ	–	ವೀರಶೈವ
ಫಾಲತೂ	–	ಉಪಯೋಗವಿಲ್ಲದ
ಉಂಗ್ರಾ	–	ಉಂಗುರ
ಲಗೂಲೆ	–	ಬೇಗನೆ

ಲಗೂಲೆ	–	ಬೇಗನೆ
ಎಡಿ	–	ಊಟದ ತಟ್ಟೆ
ದೋನಶೆ	–	ಎರಡುನೂರು
ಲಗುಸ್ಮಿ	–	ಲಕ್ಷ್ಮೀ
ಹಂತ್ಯಾಕ	–	ಹತ್ತಿರ
ಸ್ವಾಮಾರ	–	ಸೋಮವಾರ
ಅಂಜ್ಕಿ	–	ಅಂಜಿಕೆ
ತಲಬ್	–	ಚಟ
ಮನಷ್ಯಾ	–	ಮನುಷ್ಯ
ಅನಪಡ್	–	ಅನಕ್ಷರಸ್ಥ
ಕೈಗಡಾ	–	ಸಾಲ
ರಾತ್ರ್ಯಾಗ	–	ರಾತ್ರಿಯಲ್ಲಿ
ಭ್ಯಾಡ್ರಿ	–	ಬೇಡ
ನಂಗ	–	ನನಗೆ
ಯಾತಕ್ಕ	–	ಏತಕ್ಕೆ
ಇಬ್ರೂ	–	ಇಬ್ಬರೂ
ಅದರೊಳಗೆ	–	ಅದರೊಳಗೆ
ಪೋರಿ	–	ಹುಡುಗಿ
ಹಾಪೀಸ	–	ಆಫೀಸು
ಖರಾಬ	–	ಕೆಟ್ಟ
ಜಡ್ಡ	–	ಬೇನೆ
ಹತ್ರಾ	–	ಹತ್ತಿರ
ಅದ್ನ	–	ಅದನ್ನು

ಅನ್ಸತದ	–	ಅನಿಸುತ್ತದೆ
ಕೆಲ್ಸಾ	–	ಕೆಲಸ
ಹೋದ್ರು	–	ಹೋದರು
ಪಾರ	–	ಹುಡುಗ
ಬಡೂರು	–	ಬಡವರು
ಹಂಡ್ಯಾ	–	ಹಂಡೆ
ದೇವ್ರ	–	ದೇವರು
ಮೂಲ್ಯಾಗ	–	ಮೂಲೆಯಲ್ಲಿ
ಬಲ್ಲಿ	–	ಬಳಿಗೆ
ಉತ್ರಾ	–	ಉತ್ತರ
ಕಿಂವಿ	–	ಕಿವಿ

ಉರ್ದುಭಾಷೆಯ ಶಬ್ದಗಳ ಬಳಕೆ :

ಚಂದ್ರಕಾಂತ ಕುಸನೂರರವರ ಕಾದಂಬರಿಗಳು ಹೈದರಾಬಾದ ಕರ್ನಾಟಕದ ಕನ್ನಡ ಭಾಷೆಯ ಸಾಂಸ್ಕೃತಿಕ ರಾಯಭಾರಿಗಳಂತೆ ಕಾಣುತ್ತವೆ. ಅವರ ಕಾದಂಬರಿಗಳಲ್ಲಿ ಉರ್ದುಭಾಷೆಯಲ್ಲಿ ಪದಗಳು, ಕನ್ನಡದ ಪದಗಳೊಂದಿಗೆ ಸರಾಗವಾಗಿ ಅರಿವಿಲ್ಲದಂತೆ ಮಿಶ್ರಿತಗೊಳ್ಳುತ್ತವೆ. ಇದರಿಂದ ಹೈದರಾಬಾದ ಕರ್ನಾಟಕದ ಭಾಷೆಯಂದು ಸುಲಭವಾಗಿ ಗುರುತಿಸಬಹುದಷ್ಟು ಪ್ರಭಾವ ಬೀರುತ್ತವೆ. ಅವರ ಎಲ್ಲಾ ಕಾದಂಬರಿಗಳಲ್ಲಿ ಇಂತಹ ಶಬ್ದಗಳನ್ನು ಕಾಣಬಹುದು.

ಬಮ್ಮನಕಾ	–	ಬ್ರಾಹ್ಮಣರ
ಇಲಾಜೂ	–	ಚಿಕಿತ್ಸೆ
ಬೇಟಾ	–	ಮಗ
ಬಡಾಹುಷಾರ	–	ಬಹಳಬುದ್ಧಿವಂತ
ಬಚ್ಚೇಕೋ	–	ಹುಡುಗನ

ಹಮಾರೇ	–	ನಮ್ಮ
ಸವಾಲಜವಾಬು	–	ತನಿಖೆ
ಬೈಠಕ್	–	ಚರ್ಚೆ
ದುಷ್ಮನ್	–	ಶತ್ರು
ಜಾಯದಾತ	–	ಆಸ್ತಿ
ಹಾತ್ಕಡಿ	–	ಕೈಕೊಳಗ
ಹಿಸ್ಸಾ	–	ಪಾಲು
ಫೈಸಲಾ	–	ತೀರ್ಮಾನ
ಬಾಪಕಾಘರ	–	ತಂದೆಯಮನೆ
ಊಠ	–	ಏಳು
ಕ್ಯಾಹೈ	–	ಏನ ಐತಿ
ಈಮಾನ್ ದಾರಿಸೇ	–	ಪ್ರಾಮಾಣೀಕವಾಗಿ
ದುನಿಯಾ	–	ಜಗತ್ತು
ಬಡಕರ	–	ಹೆಚ್ಚಿನದು
ಸಿರ್ಫ	–	ಕೇವಲ
ಚೋರ	–	ಕಳ್ಳ
ಹುಕುಂ	–	ಆದೇಶ
ಖರಾಬ	–	ಕೆಟ್ಟ
ಅದಾಲತ್	–	ನ್ಯಾಯಾಲಯ
ಶೇತಸಾರಾ	–	ಭೂಕರ
ಜಿಂದಾ	–	ಜೀವಂತ
ಮೊಹಬೊತ್ತ	–	ಪ್ರೀತಿ

ಚಂದ್ರಕಾಂತ ಕುಸನೂರರವರ ಕಾದಂಬರಿಗಳಲ್ಲಿ ಪ್ರಕೃತಿ ವರ್ಣನೆ

ಪ್ರಾಚೀನ ಕನ್ನಡ ಸಾಹಿತಿಗಳನ್ನು ಮೊದಲ್ಗೊಂಡು ಇಂದಿನ ಸಾಹಿತಿಯವರೆಗೂ ಪ್ರಕೃತಿ ಮಾತೆಯವರ್ಣನೆಯನ್ನು ಮಾಡುತ್ತಲೇ ಬಂದಿದ್ದಾರೆ. ಸಾಹಿತಿಯ ದೃಷ್ಠಿ ಮತ್ತು ಸೃಷ್ಟಿಯ ಮೇಲೆ ಪ್ರಕೃತಿಯ ಸೌಂದರ್ಯ ಅಡಗಿದೆ. ಲೋಕದ ಚೆಲವನ್ನು ಕೆಲವೇ ಶಬ್ದಗಳಲ್ಲಿ ಬಂಧಿಸಿ ಇಡುವುದು ಅಸಾಧ್ಯವಾದ ಮಾತಾದರೂ ಸಾಹಿತಿಗಳು ತಮ್ಮ ದೃಷ್ಟಿಯಲ್ಲಿ ಪ್ರಕೃತಿಯಲ್ಲಿ ಕಂಡದ್ದನ್ನು ಶಬ್ದಗಳ ಮೂಲಕ ಓದುಗರಿಗೆ ಉಣಬಡಿಸುತ್ತಾರೆ. ಚಂದ್ರಕಾಂತ ಕುಸನೂರವರು ಇದಕ್ಕೆ ಹೊರತಾಗಿಲ್ಲ. ತಮ್ಮ ಕಾದಂಬರಿ ಉದ್ದಕ್ಕೂ ಪ್ರಕೃತಿಯನ್ನು ವಿವಿಧ ಶಬ್ದಗಳಿಂದ ಅಲಂಕರಿಸಿದ್ದಾರೆ.

"ಸೂರ್ಯನ ಬೆಳಕು ಝಗ್ಗೆಂದು ಊರು ತುಂಬೆಲ್ಲಾ ಬಿದ್ದಿತು. ಭತ್ತದ ಗದ್ದೆಗಳು ಇನ್ನಷ್ಟು ಹಸಿರು ಕಾಣಿಸುತ್ತಿದ್ದವು. ಗಿಡಮರಗಳಲ್ಲಿ ಹಕ್ಕಿ ಪಕ್ಷಿಗಳು ತಮ್ಮ ರೆಕ್ಕೆ ಪುಚ್ಚಗಳನ್ನು ಜಾಡಿಸಿಕೊಳ್ಳುತ್ತ ಮದುವೆ ಮನೆಯಲ್ಲಿ ನರೆದ ಬೀಗರಂತೆ ಮಾತಾಡುತ್ತಿದ್ದವು" (ಒಂದು ಕೈಫಿಯತ್ ಪು.ಸಂ–9)

"ನದಿಯಲ್ಲಿ ನೀರು ತನ್ನ ಪಾಡಿಗೆ ತಾನು ಹರಿಯುತ್ತಿತ್ತು.ಗಾಳಿಗೆ ತೆರೆಗಳು ಕಥಕ ನರ್ತಕಿಯಂತೆ ಮೈ ಅಲುಗಾಡಿಸುತ್ತ ಕುಣಿಯುತ್ತಿದ್ದವು.ಸೂರ್ಯನ ಕಿರಣಗಳಿಂದ ತೆರೆಗಳ ಮೈ ಬೆಳ್ಳಿಯಂತೆ ಮಿಂಚುತ್ತಿತ್ತು." (ಒಂದು ಕೈಫಿಯತ್ ಪು.ಸಂ–21)

"ಇಡೀ ಬ್ರಹ್ಮಾಂಡವೇ ಮಾತೃವಾತ್ಸಲ್ಯದ ಮೂರ್ತರೂಪವಾಗಿದೆ. ತಾಯಿಯ ಪ್ರೀತಿಯ ಅನಂತ ರೂಪದಿಂದ ಈ ಬ್ರಹ್ಮಾಂಡ ಚೈತನ್ಯದಿಂದ ಕೂಡಿದೆ" (ಒಂದು ಕೈಫಿಯತ್ ಪು.ಸಂ–35)

"ಇಳಿಯುವ ಚಂದ್ರನ ಅರಿಸಿಣದ ಬೆಳಕು, ನೀರಿನಲ್ಲಿ ಚಕ್‌ಚಕೆಂದು ಹೊಳೆಯುತ್ತಿತ್ತು."
(ಒಂದು ಕೈಫಿಯತ್ ಪು.ಸಂ–41)
ಎತ್ತರದ ತರತರದ ಮರಗಳು ತಮ್ಮ ಮೂಡಿನಲ್ಲಿದ್ದವು ಎಲೆಗಳು ಗಾಳಿಯಲ್ಲಿ ಕಂಪಿಸುತ್ತಿದ್ದರಿಂದ ಗಾಳಿಯಲ್ಲಿ ಹತ್ತಾರು ಮಂದಿ ಮಾತಾಡಿದಂತೆ ಕೇಳಿಸುತ್ತಿತ್ತು. ಬಿಸಿಲಲ್ಲಿ ಕಾಸಿ ಆರಿಸಿದ ಹಾಲಿನ ಬಣ್ಣ ತೇಲಿತ್ತು ಆಕಾಶ ಅನಾಮತ್ತಾಗಿ ಅಂತರದಲ್ಲಿ ನಿಂತು, ಭೂಮಿಯ ಸುತ್ತಾಟವನ್ನು ನೋಡುತ್ತಿತ್ತು".
(ಒಂದು ಕೈಫಿಯತ್ ಪು.ಸಂ–52)

ಪ್ರಕೃತಿ ವರ್ಣನೆ :

"ಹಿಟ್ಟು ಚೆಲ್ಲಿದ್ದಾಂಗ ಬೆಳದಿಂಗಳ, ನೀಲಿ ಆಕಾಶ, ಅಲ್ಲಲ್ಲಿ ಚದುರಿಕೊಂಡಿದ್ದ ನಕ್ಷತ್ರಗಳು ಸಣ್ಣದಾಗಿ ಬೀಸುವ ಗಾಳಿ" (ಕೆರೂರು ನಾಮಾ ಪು.ಸಂ–109)

"ಮಳೆಗಾಲ ಸರಿಯಿತು 'ಆಕಾಶ ಮತ್ತೇ ತನ್ನ ನೀಲಿ ವೈಭವದೊಂದಿಗೆ ತೆರೆದುಕೊಂಡಿತು.ಎಲ್ಲ ಕಡೆಗಳಲ್ಲಿ ಹಸಿರು ನಳನಳಸ ತೊಡಗಿತು. ಹೂ ಅರಳಿದವು. ಹಕ್ಕಿ-ಪಕ್ಷಿಗಳ ಹಾರಾಟ ಸುರುವಾಯಿತು. ಬಿಸಲು ಕಾಯ್ದಾರಿಸಿದ ಹಾಲಿನಂತೆ ಹಿತವಾಗಿತ್ತು. ರಾತ್ರಿ ರಮ್ಯವಾಗಿತ್ತು. ಸೃಷ್ಠಿ ಅಗಮ್ಯವಾಗಿತ್ತು". (ಕೆರೂರು ನಾಮಾ ಪು.ಸಂ-63)

"ಆಗ ತಾನೇ ಸೂರ್ಯೋದಯವಾಗಿತ್ತು ಸೂರ್ಯನ ಕೇಸರಿ ಬಿಸೀಲು ಹಳ್ಳದ ನೀರಿನಲ್ಲಿ ಬೆರೆತಿದ್ದರಿಂದ ತೆರೆಗಳು ಬಂಗಾರದ ಮೀನಿನಂತೆ ಕಾಣಿಸುತ್ತಿದ್ದವು. ಬಣ್ಣ ಬಣ್ಣದ ಹಕ್ಕಿ-ಪಕ್ಷಿಗಳು, ಸುಯಂದು ಹಾರುತ್ತ ಬಂದು, ತೆರೆಗಳ ಮೇಲೆ ತೇಲಾಡುತ್ತಿದ್ದ ಮೀನಗಳನ್ನು ಚಿಕಂದು ಚೋಚಿನಲ್ಲಿ ಹಿಡಿದು ಹಾರಿ ಹೊಗುತ್ತಿದ್ದವು. ಹೊಯ್ಯೂಡುವ ಗಾಳಿ ಕಚಕುಳಿಯಿಟ್ಟಂತೆ, ಗಿಡ ಮರಗಳ ಹಸಿರು ಎಲೆಗಳು ಕಂಪಿಸುತ್ತಿದ್ದವು. ಹಸಿರಿನಲ್ಲಿ ಕಾಲುದಾರಿ ಹೆಬ್ಬಾವಿನಂತೆ ಬಿದ್ದುಕೊಂಡಿತ್ತು. (ಕೆರೂರು ನಾಮಾ ಪು.ಸಂ-75)

'ದೂರು ಕಂದು ನೀಲಿ ಆಕಾಶದಲ್ಲಿ ಅರ್ಧಚಂದ್ರ ಕಾಣಿಸುತ್ತಿದ್ದ. ಆಗಾಗ್ಗೆ ಯಾವುದೇ ಒಂದು ಹಕ್ಕಿ 'ಟಂವ್ ಟಂವ್' ಎಂದು ಕೂಗುತ್ತ ಹಾರಾಡುತ್ತಿತ್ತು. ಜಲಜಾಕ್ಷಿ ಉತ್ತರ ದಿಕ್ಕಿನಲ್ಲಿ ಹೊಲದ ದಂಡೆಯ ಗುಂಟ ಹರಿಯುತ್ತಿತ್ತು. ಉತ್ಸಾಹ ಆನಂದ ಆರ್ಭಟದಲ್ಲಿ ಜಲಜಾಕ್ಷಿಯ ಅಲೆಗಳು ಮೈಮರೆತು ಕುಣಿಯುತ್ತಿದ್ದವು. ಹಗಲು ಉರಿಬಿಸಿಲಿನಲ್ಲಿ ಕಾಯ್ದು ಸುಸ್ತಾಗಿದ್ದ ಗಾಳಿ, ತುಸು ತಂಪಾಗಿ ಜುಳು ಜುಳು ಬೀಸುತ್ತಿತ್ತು. ಆಕಾಶದಿಂದ ಇಳಿದು ಬೀಳುವ ಕತ್ತಲು ಆಕಾಶದಲ್ಲಿಯೇ ಮೇಲೆ ನಿಂತು ಬಿಟ್ಟಿತು. ಎಲ್ಲ ಕಡೆಗಳಲ್ಲಿ ಬೆಳಕು, ಆನಂದ, ಉತ್ಸಾಹ. (ಯಾತನಾ ಶಿಬಿರ ಪು.ಸಂ-19)

ಈ ರೀತಿಯಾಗಿ ಚಂದ್ರಕಾಂತ ಕುಸನೂರರವರು ಅತೀ ಸರಳವಾದ ಮತ್ತು ಸಹಜವಾದ ಶಬ್ದಗಳಿಂದ ಪ್ರಕೃತಿಯ ವರ್ಣನೆ ನೂಡಿದ್ದಾರೆ. ಅನೇಕ ಸಾಹಿತಿಗಳು ಮಲೆನಾಡಿನ ಸೌಂದರ್ಯವನ್ನು ವರ್ಣಿಸಿದರೆ, ಚಂದ್ರಕಾಂತ ಕುಸನೂರರವರು ಬರಗಾಲದ ನಾಡಾದ ಕಲಬುರ್ಗಿಯ ಸುತ್ತ ಮುತ್ತಲಿನ ಕ್ಷೇತ್ರವನ್ನು ವರ್ಣಿಸಿದ್ದಾರೆ. ಅಲ್ಲಿ ಬರುವ ಹಳ್ಳ, ಹೊಳೆ, ಬಿಸಿಲು, ಸೂರ್ಯೋದಯ, ಚಂದ್ರೋದಯ, ಪ್ರಾಣಿ-ಪಕ್ಷಿಗಳ ವರ್ಣನೆ ಮಲೆನಾಡಿನ ವರ್ಣನೆಯನ್ನು ನಾಚಿಸುವಂತೆ ಭಾಸವಾಗುತ್ತದೆ. ಇದು ಕುಸನೂರರವರು ತಾವು ಕಂಡ ಪ್ರಕೃತಿಯನ್ನು ಒಬ್ಬ ಚಿತ್ರ ಕಲಾವಿದರಾಗಿ ಚಿತ್ರಿಸಿದ ಪರಿ ಇದು. ಸಹೃದಯೀ ಓದುಗರ ಅಂತರಂಗ ಮುಟ್ಟುವಂತೆ ಅವರ ವರ್ಣನೆ ಸಾಗುತ್ತದೆ.

ಈ ಬಗ್ಗೆ ಅಲಂಕಾರಯುಕ್ತ, ಶಬ್ದಗಳ ಚಮತ್ಕಾರ ಯುಕ್ತ ಭಾಷೆಯನ್ನು ಬಳಸುವುದರ ಜೊತೆಗೆ ಚಂದ್ರಕಾಂತ ಕುಸನೂರರವರ ಕಾದಂಬರಿಗಳು ಸಹೃದಯರಿಗೆ ವಿಶಿಷ್ಟವಾದ ರಸಾನಂದವನ್ನು ಉಂಟು ಮಾಡುತ್ತವೆ. ಕಾರ್ತಿಕ ಪೂರ್ಣಿಮೆಯ ಪೂರ್ಣಚಂದ್ರನು ತನ್ನ ಸಹಜ, ಸುಂದರವಾದ ಬೆಳದಿಂಗಳನ್ನು ಚೆಲ್ಲಿದಂತೆ, ಚಂದ್ರಕಾಂತ

ಕುಸನೂರರವರು ತಮ್ಮ ಸಹಜವಾದ ಭಾಷೆಯ ಬೆಳದಿಂಗಳನ್ನು ತಮ್ಮ ಕಾದಂಬರಿಗಳಲ್ಲಿ ಹರಡಿ, ಸಹೃದಯ ಓದುಗರನ್ನು ಆಕರ್ಷಕಗೊಳಿಸಿರುವುದು ಕಂಡು ಬರುತ್ತದೆ.

ಚಂದ್ರಕಾಂತ ಕುಸುನೂರರವರ ಕಾದಂಬರಿಗಳಲ್ಲಿ ಸ್ತ್ರೀ ಸೌಂದರ್ಯ ವರ್ಣನೆ

"ಈ ಲೋಕದ ಸೌಂದರ್ಯವನ್ನು ಕುಂಚದಲ್ಲಿ ಹಿಡಿದಿಡುವ ಕಲೆ ಚಿತ್ರ ಕಲಾವಿದನಿಗೆ ಗೊತ್ತಾದರೆ, ಶಬ್ದಗಳಲ್ಲಿ ಹಿಡಿದು ಆ ಸೌಂದರ್ಯನುಭವವನ್ನು ಓದುಗರ ಹೃದಯಕ್ಕೆ ತಲುಪಿಸುವ ಕಲೆ ಸಾಹಿತಿಗಳಿಗೆ ಗೊತ್ತು" ಆದರೆ ಚಂದ್ರಕಾಂತ ಕುಸನೂರರವರ ಚಿತ್ರ ಕಲಾವಿದರು ಹೌದು, ಸಾಹಿತಿಗಳೂ ಹೌದು ಹಾಗಾದರೆ ಅವರ ದೃಷ್ಟಿಯಲ್ಲಿ ಹಾಗೂ ಅವರ ಸೃಷ್ಠಿಯಲ್ಲಿ ಸೌಂದರ್ಯ ಪ್ರಿಯತೆ ಕಾಣಬಹುದು.

ಪ್ರಾಚೀನ ಕವಿಗಳಿಂದ ಹಿಡಿದು ನವೋದಯದವರೆಗೂ ಸ್ತ್ರೀ ಸೌಂದರ್ಯ ವರ್ಣನೆಯಿಂದ ಯಾರು ಹೊರತಾಗಿಲ್ಲ. ಆದರೆ ಕುಸನೂರರವರ ಸಾಹಿತ್ಯ ಕುಂಚದಲ್ಲಿ ಅರಳಿದ ಸ್ತ್ರೀ ಸೌಂದರ್ಯಯು ಸಚಿತ್ರವಾದ, ವರ್ಣಮಯವಾದ,ಉಜ್ವಲವಾದ ಒಂದು ವರ್ಣಶಿಲ್ಪದಂತೆ ಕಾಣುತ್ತದೆ. ಆಡು ಮಾತಿನ ಸೊಗಸಿನಲ್ಲಿ ಸ್ತ್ರೀ ಸೌಂದರ್ಯವನ್ನು ಹಿಡಿದಿಡುವ ಕಲೆ ಚಂದ್ರಕಾಂತ ಕುಸನೂರರವರಿಗೆ ಕರಗತ, ಪ್ರಾದೇಶಿಕ ಪದಗಳನ್ನು ಅರ್ಥವತ್ತಾಗಿ ಬಳಸಿದಾಗ ಸೌಂದರ್ಯವು ಇಮ್ಮಡಿಗೊಂಡಂತೆ ಭಾಸವಾಗುತ್ತದೆ. ಅಂತಹ ಕಲೆಯ ಮೂಲಕ ಸ್ತ್ರೀ ಸೌಂದರ್ಯವನ್ನು ಚಿತ್ರಿಸಿದ್ದಾರೆ.

"ಹುಡಗಿ ತುಂಬಾ ಸುಂದರವಾಗಿದ್ದಳು. ಮುಟ್ಟಿದರೆ ಮಾಸುವಂಥ ತಿಳಿ ಬಣ್ಣ, ಮಾದಕ ಕಣ್ಣು, ಆಕಾಶವೇ ನುಂಗಿಕೊಂಡಂಥ ನೀಲಿ ಕಣ್ಣುಗಳು"

(ಒಂದು ಕೈಫಿಯತ್ ಪು.ಸಂ–61)

ತುಳಸಕ್ಕನ ವರ್ಣನೆ

ತುಳಸಕ್ಕಂದು ಕೈತೊಳಕೊಂಡು ಮುಟ್ಟಬೇಕೂ ಅಂಥ ಮೈ, ಭಾಳ ಛಂದಿದ್ದಳು, ಎಷ್ಟು ಛಂದಪಾಂದ್ರ ನೋಡೋವ್ರಿಗಿ ಇನ್ನೊಮ್ಮೆ ಮತ್ತೊಮ್ಮೆ ನೋಡಬೇಕಂತ ಅನ್ನಸತಿತ್ತು.

(ಕೆರೂರು ನಾಮಾ ಪು.ಸಂ.4)

ನಿಂಗಿಯ ವರ್ಣನೆ

"ತಾಮ್ರ ಬಣ್ಣದ ನಿಂಗಿ , ನಡೆದರೆ ರಬ್ಬರ ಚೆಂಡು ಪುಟ್ಟದ್ಹಾಂಗ ಪುಟ್ಟೀತಿದ್ದಳು. ನಕ್ಕರೆ ಎಡಗಲ್ಲದ ಮ್ಯಾಲಗುಳಿ ಬೀಳುತಿತ್ತು, ಕಣ್ಣು ಹ್ಯಾಂಗದ್ವ ಪಾಂದ್ರ, ಅಗದಿ ಸೌಂದತ್ತಿ ಯಲ್ಲಮ್ಮನ ಜಾತ್ರ್ಯಾಗ ಖರೀದಿಸಿದ ದೊಡ್ಡ ಕವಡಿ ಹಾಂಗಿದ್ದವು. ಭಲೇ ಭಾಳ ಅಂದರ ಅಪರಂಪಾದ ಬ್ಯೂಟಿ ಆಗಿದ್ದಳು. ಇದೀಗೇ ಇಳಿಸಿದ ಜೇನುಗೂಡಿನೊಳಗಿನ ತುಪ್ಪದ್ಹಾಂಗ ಮೈ ಬಣ್ಣ ಥಳಾ ಥಳಾ ಅಂತ್ತಿತ್ತು." (ಕೆರೂರು ನಾಮಾ ಪು.ಸಂ.18)

"ನಿಂಗಿಯ ದೃಷ್ಠಿ ಮತ್ತು ನಡುಗೆ ಥಟ ಮುಂಗುಸಿಯ ದೃಷ್ಟಿ ಮತ್ತು ನಡುಗಿಗೆ ಹೋಲುತ್ತಿದ್ದವು."

(ಕೆರೂರು ನಾಮಾ ಪು.ಸಂ.42)

ಚಂದಿಯ ವರ್ಣನೆ

"ಚಂದಿಯದು ದುಂಡುಮುಖ, ಕೆಂಪು ಮೈಬಣ್ಣ, ರೇಶಮಿಯಂತೆ ಉದ್ದಕೂದಲು, ನಕ್ಕರೆ ಗಲ್ಲದ ಮೇಲೆ ಗುಳಿ ಬೀಳುವ ಚಂದಿ".(ಗೋಹರಜಾನ,ಮಾಲತಿ ಮತ್ತು ನಾನು ಪು.ಸಂ–28)

ಮಾಲತಿಯ ವರ್ಣನೆ

"ಎಣ್ಣೆ ಗಂಪಿನ ಮೈಕಾಂತಿ, ಆಕರ್ಷಕವಾದಂತಹ ಕಣ್ಣುಗಳು, ದುಂಡು ಮುಖ, ಆಹ್ವಾನಿಸುವಂತಿದ್ದ ಮೈಕಟ್ಟು". (ಗೋಹರಜಾನ,ಮಾಲತಿ ಮತ್ತು ನಾನು ಪು.ಸಂ–152)

ಮಾಲತಿ ನೀಲಿ ಸೀರೆ ಮತ್ತು ಗುಲಾಬಿ ರವಿಕೆ ಧರಿಸಿಕೊಂಡು ಬಂದಳು. ಅಧ್ಬುತವಾದಂತಹ ಲಾವಣ್ಯ ಒಂದು ಕ್ಷಣ ಕಣ್ಣು ಕುಕ್ಕಿದಂತಾದವು. ಇದ್ದಕ್ಕಿದ್ದಂತೆ ರಂಗುರಂಗಿನ ಕಾರಂಜಿ ಪುಟಿದಂತೆ ಭಾಸವಾಯಿತು.

(ಗೋಹರಜಾನ,ಮಾಲತಿ ಮತ್ತು ನಾನು ಪು.ಸಂ–159)

ಗೋಹರಜಾನಳ ವರ್ಣನೆ

ತುಂಬ ಸುಂದರವಾದ ರೂಪ, ಲಾವಣ್ಯ, ಮಾತು, ನಯ ವಿನಯ, ಹಾವ ಭಾವ, ಸೌಜನ್ಯ ಎಲ್ಲದರಲ್ಲಿಯೂ ವಿಶೇಷವಾದ ಆಕರ್ಷಕ ಮಾದಕತೆ, ಗಾಂಭಿರ್ಯ ಮತ್ತು ಸರಳತೆ ಇತ್ತು ನೋಡಿದರೆ ಹಾಗೆಯೇ ನೋಡುತ್ತಿರಬೇಕೆನ್ನುವಂಥ ಹೆಣ್ಣು.

ಕುಸಮಾಳ ವರ್ಣನೆ :

'ಕುಸಮಾ ಪೀತಾಂಬರವನ್ನುಟ್ಟುಕೊಂಡು, ದೊಡ್ಡ ಕುಂಕುಮ ಹಚ್ಚಿಕೊಂಡು, ಮೂಗಿನಲ್ಲಿ 'ನತ್ತು' ಇಟ್ಟುಕೊಂಡು ಮಣೆಯ ಮೇಲೆ ಒಂದು ಸಾಕ್ಷಾತ್ ಲಕ್ಷ್ಮೀಯಂತೆ ಕೂಡುತ್ತಿದ್ದಳು. ಕೆಂಪು ಮೈಬಣ್ಣ ಆಕರ್ಷಕರೂಪ , ತಕ್ಕ ವಯಸ್ಸಿನಿಂದಾಗಿ ಕುಸುಮಾ ರಾಜಾ ರವಿವರ್ಮನ ಕ್ಯಾಲೆಂಡರ್ ಮೇಲಿನ ಲಕ್ಷ್ಮೀ ಸರಸ್ವತಿಯಂತೇ ಕಾಣುತ್ತಿದ್ದಳು. (ಯಾತನಾ ಶಿಬಿರ ಪು.ಸಂ–17)

ಹೀಗೆ ಪ್ರಾಚೀನ ಕವಿಗಳಂತೆ ಸ್ತ್ರೀಯನ್ನು ತಾವರೆಗೆ, ನವಿಲಿಗೆ, ಕೇದಿಗೆ, ಕಾಮನಬಿಲ್ಲು, ನೈದಿಲೆಗೆ ಹೋಲಿಸದೇ, ತಾವು ಕಂಡಂತೆ ಪ್ರಾದೇಶಿಕ ಭಾಷೆಯ ಸೊಗಡನ್ನು ಬಳಸಿಕೊಂಡು ಓದುಗರಿಗೆ ಮತ್ತೇ ಮತ್ತೇ ಓದಬೇಕು ಎನ್ನುವ ರೀತಿಯಲ್ಲಿ ಸ್ತ್ರೀ ಸೌಂದರ್ಯವನ್ನು ತಮ್ಮ 'ಶಬ್ದಪಾಕ' ದಲ್ಲಿ ಉಣಬಡಿಸಿದ್ದಾರೆ.ತಾವು ಕಂಡ ಚೆಲವನ್ನು ಸರಳವಾದ ಶಬ್ದ ಮಾಧ್ಯಮಗಳ ಮೂಲಕ ಓದುಗರ ಹೃದಯಕ್ಕೆ ಲಗ್ಗೆ ಹಾಕಿದ್ದಾರೆ.

ಎಲ್ಲಿಯೂ ಆಡಂಬರದ ಶಬ್ದಗಳಿಲ್ಲ, ಸಾಮಾನ್ಯರ ಜನರ ಮನದಲ್ಲಿ ಉಳಿಯುವ ವಸ್ತುಗಳಿಗೆ, ದಿನನಿತ್ಯ ನೋಡುವ ಪ್ರಾಣಿ ಪಕ್ಷಿಗಳಿಗೆ ಸ್ತ್ರೀ ಸೌಂದರ್ಯವನ್ನು ವರ್ಣಿಸಿರುವುದು ಅವರ ಪ್ರತಿಭಾ ಶಕ್ತಿಗೆ ಹಿಡಿದ ಕೈಗನ್ನಡಿಯಾಗಿದೆ.

ವಚನಗಳು, ದೋಹೆಗಳು, ತತ್ವಗಳು

ಚಂದ್ರಕಾಂತ ಕುಸನೂರರವರು ತಮ್ಮ ಕಾದಂಬರಿಗಳಲ್ಲಿ ಪಾತ್ರಗಳ ಸನ್ನಿವೇಶಗಳಿಗೆ ತಕ್ಕಂತೆ ವಚನಗಳನ್ನು, ದೋಹೆಗಳನ್ನು, ತತ್ವ ಪದಗಳನ್ನು ಉಲ್ಲೇಖಸಿದ್ದಾರೆ.ಅವರ ಈ ಶೈಲಿಯ ಕಾದಂಬರಿಗಳನ್ನ ಹೆಚ್ಚು ಹೆಚ್ಚು ಜನಪ್ರೀಯಗೊಳಿಸಲು ಸಹಾಯವಾಗಿದೆ. 'ವಚನಗಳು' ಶರಣರು ತಮ್ಮ ಪರಿಸರದೊಂದಿಗೆ ಸ್ಪಂದಿಸಿದ ಕ್ರಿಯೆಯ ಫಲವಾಗಿ ಜನಮಾನಸದಲ್ಲಿ ಶಾಶ್ವತವಾಗಿ ಉಳಿದವುಗಳು, ವಚನಗಳು ವಿಶ್ವಮಾನವ ಸಂದೇಶವನ್ನು ಪ್ರೀತಿ ಮತ್ತು ನೀತಿಯ ನೆಲೆಯ ಮೇಲೆ ನಿಂತು ಹೇಳಿದವುಗಳು. ಇನ್ನು ಭಕ್ತಿಯ ಮೂಲಕ ಮುಕ್ತಿಯನ್ನು ಪಡೆಯುವುದು ಹೇಗೆ ಎಂಬುದನ್ನು ಸಾರಿದವುಗಳು 'ಕೀರ್ತನೆಗಳು'. ಸಹಜವಾದ ಆಡು ನುಡಿಗಳ ಮುಖಾಂತರ ಸಮಾಜವನ್ನು ಜಿಡ್ಡು ಗಟ್ಟಿದ ಸಂಪ್ರದಾಯಗಳಿಂದ ಮುಕ್ತಗೊಳಿಸಲು ಪ್ರಯತ್ನಿಸಿದವು.

ವಚನಗಳನ್ನು, ದೋಹೆಗಳನ್ನು, ತತ್ವಪದಗಳನ್ನು ಚಂದ್ರಕಾಂತ ಕುಸನೂರರವರು ತಮ್ಮ ಕಾದಂಬರಿಗಳಲ್ಲಿ ಪಾತ್ರಗಳಿಗೆ ಹೊಂದಿಸಿಕೊಂಡು ಬಳಸಿದ್ದಾರೆ. ಇದೊಂದು ಲೇಖಕರ ವೈಶಿಷ್ಠವೇ ಆಗಿದೆ.

ಅವರ ಕಾದಂಬರಿಗಳಲ್ಲಿ ವಚನಗಳು

"ನೀನೊಲಿದೆಡೆ ಕೊರಡು ಕೊನರುವುದಯ್ಯಾ

ನೀನೊಲಿದಡೆ ಬರಡು ಹಯನುಹುದಯ್ಯಾ

ನೀನೊಲಿದೆಡೆ ವಿಷವೆಲ್ಲ ಅಮೃತವಹುದಯ್ಯಾ

ನೀನೊಲಿದೆಡೆ ಸಕಲ ಪಡಿಪದಾರ್ಥ

ಇದಿರಿಲ್ಲಿರ್ಪ್ಪವು ಕೂಡಲ ಸಂಗಮದೇವಾ"

(ಗೋಹರಜಾನ,ಮಾಲತಿ ಮತ್ತು ನಾನು ಪು.ಸಂ-134)

"ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿಭೋ

ಸತ್ಯ ನುಡಿವುದೇ ದೇವಲೋಕ. ಮಿಥ್ಯವ ನುಡಿವುದೇ ಮರ್ತ್ಯಲೋಕ.

ಆಚಾರವೇ ಸ್ವರ್ಗ ಅನಾಚಾರವೇ ನರಕ. ಇದಕ್ಕೆ ನೀವೇ ಪ್ರಮಾಣ ಕೂಡಲ ಸಂಗಮದೇವಾ"(ಗೋಹರಜಾನ,ಮಾಲತಿ ಮತ್ತು ನಾನು ಪು.ಸಂ-135)

ದಾಸರ ಪದಗಳು

ಆರು ಬದುಕಿದರೇನು ಆರು ಬಾಳಿದರೇನು। ಪೂರ್ವಜನ್ಮದ ವಿಧಿ ತೀರುವ ತನಕ। ಪತಿಭಕುತಿಯಿಲ್ಲದಿಹ ಸತಿಯಿದ್ದು ಫಲವೇನು। ಮತಿಯಿಲ್ಲದವರಿಗೆ ಬೋಧಿಸಿದರೇನು॥

(ಯಾತನಾ ಶಿಬಿರ ಪು.ನಂ-65)

"ಸುಮ್ಮನೆ ಬರುವುದೇ ಮುಕ್ತಿ । ನಮ್ಮ ಅಚ್ಚುತಾನಂತನ ನೆನೆಯದೆ ಭಕ್ತಿ ॥ಪಲ್ಲವಿ॥
ಮನದಲ್ಲಿ ಧೃಡವಿರಬೇಕು ಪಾಪಿ । ಜನರ ಸಂಸರ್ಗನೀಗಲಿಬೇಕು ।

ಅನುಮಾನವನು ಬಿಡಬೇಕು । ತನ್ನ ತನು-ಮನು-ಧನವನೊಪ್ಪಿಸಿ ಕೊಡಬೇಕು.

ಕಾಮಕ್ರೋಧವ ಬಿಡಬೇಕು । ಪರಕಾಮಿನಿಯರ ಹಂಬಲ ಬಿಡಬೇಕು ।

ಹೇಮದಾಸೆಯ ಬಿಡಬೇಕು । ಹರಿನಾಮ ಸಂಕೀರ್ತನೆಯನ್ನು ಮಾಡಬೇಕು ।
(ಯಾತನಾ ಶಿಬಿರ ಪು.ನಂ68)
ತಲ್ಲಣಿಸದಿರು ಕಂಡ್ಯಾ ತಾಳು ಮನವೆ
ಎಲ್ಲರನು ಸಲುಹುವನು ಇದಕ್ಕೆ ಸಂಶಯವಿಲ್ಲ (ಒಂದು ಕೈಪಿಯತ್ ಪು.ನಂ-23)

ಭಜನೆಗಳು

ರಂಗ ನಹ್ವೆ ರೂಪ ನಹ್ವೇ ನಹ್ವೆ ಮಾಣಿಕ

ಚಾಳಕಾ ಪುರಾತ ಭಿಮ ಯಾ ಪರೀನೆ ದೇಖಿಲಾ ॥

ದತ್ತಾ ದಿಗಂಬರಾ ಯೇರೇ ಸಾವಳ್ಯಾಮಲಾ ಭೇಟ ದೇರೆ ॥

(ಒಂದು ಕೈಪಿಮತ್ ಪು.ನಂ-5)

ದೋಹೆಗಳು

"ಪಾನೀ ಶೇರಾ ಖುದ್ ಖುದ್ ಅಸ್ ಮಾನುಷಃ ಜಾತ

ದೇಖತ್ ಹೀ ಛಿಪ್ ಜಾಯೇಗಾ ಜ್ಯೂಲತಾರಾ ಪರಭಾರ॥"
(ಗೋಹರಜಾನ,ಮಾಲತಿ ಮತ್ತು ನಾನು ಪು.ಸಂ-33)

ಹೀಗೆ ಚಂದ್ರಕಾಂತ ಕುಸನೂರರವರು ಇಂತಹವುಗಳನ್ನು ಬಳಸುವದರ ಮೂಲಕ ಸಾಮಾಜಿಕ ಜೀವನ ಅಭಿವ್ಯಕ್ತಿಗೆ ಗಟ್ಟಿತನ ನೀಡಿದ್ದಾರೆ.

ಒಟ್ಟಿನಲ್ಲಿ ಚಂದ್ರಕಾಂತ ಕುಸನೂರರವರ ಭಾಷಾ ಶೈಲಿ ಅದ್ಭುತ. ಹೈದರಾಬಾದ ಕರ್ನಾಟಕದ ಭಾಷೆ, ಬದುಕನ್ನ ಇಡೀ ನಾಡಿಗೆ ಪರಿಚಯಿಸಿದ ರೀತಿ ಮೆಚ್ಚುವಂತಹದು. ಅವರ ಶೈಲಿಯನ್ನು ಓದಿಯೇ ಅನುಭವಿಸಬೇಕು.

ಅಡಿ ಟಿಪ್ಪಣಿಗಳು

೧)ವಚನ ಸಾಹಿತ್ಯ ಭಾಷೆ- ಡಾ.ಎಸ್.ಎಸ್.ಅಂಗಡಿ. ಪು.ಸಂ.೫೩

ಅಧ್ಯಾಯ–6

ಸಮಾರೋಪ

ಶ್ರೀ ಚಂದ್ರಕಾಂತ ಕುಸನೂರರವರ ಪ್ರಕಟಿತ ಐದು ಕಾದಂಬರಿಗಳಲ್ಲಿ ನಾಲ್ಕು ಕಾದಂಬರಿಗಳನ್ನು ಈ ಅಧ್ಯಯನಕ್ಕೆ ಅಳವಡಿಸಿಕೊಳ್ಳಲಾಗಿದೆ. ಅವರ ಕಾದಂಬರಿಗಳೆಲ್ಲವೂ ಹೈದರಾಬಾದ ಕರ್ನಾಟಕದ ಭಾಷೆಯ ಸೊಬಗನ್ನು ತುಂಬಿಕೊಂಡು ಕನ್ನಡ ಕಾದಂಬರಿ ಕ್ಷೇತ್ರಕ್ಕೆ ವಿಶಿಷ್ಟ ಕೊಡುಗೆಗಳಾಗಿವೆ. ಅವರ ಕಾದಂಬರಿಗಳಲ್ಲಿ ವಸ್ತು, ವಿಭಿನ್ನ ಪಾತ್ರಗಳು, ಮಹಿಳೆಯ ಜೀವನ ದರ್ಶನ, ಭೌಗೋಳಿಕ ಕ್ಷೇತ್ರಗಳ ವರ್ಣನೆ, ಹಕ್ಕಿ–ಪಕ್ಷಿಗಳ ಪಾತ್ರಗಳೆಲ್ಲವೂ ನೈಪುಣ್ಯತೆಯಿಂದ ಕೂಡಿವೆ. ಅಷ್ಟೆ ಅಲ್ಲದೆ ಜಾತಿ–ಮತಗಳ ನಡುವಿನ ತಿಕ್ಕಾಟ, ಆದರ್ಶ ಮತ್ತು ವಾಸ್ತವದ ನಡುವಿನ ತೊಳಲಾಟ, ಜಿಡ್ಡು ಗಟ್ಟಿದ ಸಂಪ್ರದಾಯಗಳ ಪರಂಪರೆ ಮುಂತಾದ ವಿಷಯಗಳೆಲ್ಲವೂ ಅವರ ಕಾದಂಬರಿಗಳ ಕೇಂದ್ರ ಬಿಂದುಗಳಾಗಿವೆ. ಅವರ ಕಾದಂಬರಿಗಳಲ್ಲಿ ನೈಜ ಪ್ರೇಮ, ದಾಂಪತ್ಯ, ಅಂತರ್ಜಾತೀಯ ವಿವಾಹ, ಕಾಮ, ವಾತ್ಸಲ್ಯ ಮುಂತಾದ ವಿಷಯಗಳು ಅವರ ಕಾದಂಬರಿಗಳಲ್ಲಿ ಪ್ರಧಾನವಾಗಿ ಚಿತ್ರಿತಗೊಂಡಿವೆ.

ಕುಸನೂರರವರ ಕಾದಂಬರಿಗಳಲ್ಲಿ ಬರುವ ಒಟ್ಟು ಸ್ತ್ರೀ ಪಾತ್ರಗಳನ್ನು ಗಮನದಲ್ಲಿಟ್ಟುಕೊಂಡು ಈ ಅಧ್ಯಯನ ನಡೆಸಲಾಗಿದೆ. ಇಲ್ಲಿ ಬರುವ ಸ್ತ್ರೀ ಪಾತ್ರಗಳು ಪುರುಷನಷ್ಟೇ ಪ್ರಾಮುಖ್ಯತೆ ಪಡೆದಿವೆ. ಇಲ್ಲಿ ಬರುವ ಚಿಕ್ಕ ಚಿಕ್ಕ ಪಾತ್ರಗಳು ಒಂದು ತತ್ವಕ್ಕೆ ಬದ್ಧವಾಗಿ ಬದುಕುವ ಪಾತ್ರಗಳಾಗಿವೆ. ಸಮಾಜದಲ್ಲಿ ಬರುವ ಪ್ರತಿ ಪಾತ್ರವೂ ಎಷ್ಟು ಮುಖ್ಯ ಎಂಬುದು ಇಲ್ಲಿ ಗೋಚರವಾಗುತ್ತದೆ. ದಾಂಪತ್ಯ ಸುಖ, ಪ್ರೀತಿ–ಪ್ರೇಮ, ಕಾಮ, ಕಾಮದ ಹೆಸರಿನಲ್ಲಿ ಮಹಿಳೆಯ ಶೋಷಣೆ, ದೇವದಾಸಿ ಪದ್ಧತಿಯಿಂದ ಅನುಭವಿಸುವ ನೋವುಗಳು ಮುಂತಾದ ಅಂಶಗಳೆಲ್ಲವು ಇಂದಿನ ಸಮಾಜದ ಸ್ಥಿತಿ ಗತಿ ಪ್ರತಿಬಿಂಬದಂತೆ ಸೃಷ್ಟಿಯಾಗಿವೆ.

"ಮಹಿಳೆಗೆ ಬೇಕಾಗಿರುವುದು ಸ್ವೇಚ್ಛೆಯಲ್ಲ ; ಆಳುವ ಅಧಿಕಾರವಲ್ಲ; ಆಕೆಗೆ ಅವಶ್ಯಕವಿರುವುದು ಸಹಜವಾಗಿ ಬೆಳೆಯುವ ಅವಕಾಶ; ಒತ್ತಡ ದಬ್ಬಾಳಿಕೆಗಳಿಂದ ಮುಕ್ತವಾದ ಬದುಕನ್ನು ಹೊಂದುವ ಅವಕಾಶ" ಇದನ್ನ ಅಮೇರಿಕಾದ ಖ್ಯಾತ ಸ್ತ್ರೀ ವಿಮೋಚನಾವಾದಿ ಮಾರ್ಗರೇಟ್ ಪುಲರ್ ಹೇಳಿದ್ದಾರೆ. ಚಂದ್ರಕಾಂತ ಕುಸೂನರರವರ ಕಾದಂಬರಿಗಳಲ್ಲಿ ಚಂದಿ, ಗೋಹರಜಾನ,ಮಾಲತಿ, ತುಳಸಕ್ಕ ಮುಂತಾದ ಪಾತ್ರಗಳಲ್ಲಿ ಇದನ್ನು ಕಾಣುತ್ತೇವೆ. ಪ್ರತಿ ಸ್ತ್ರೀಯು ತಾನು ಬದುಕಲು, ಬೆಳೆಯಲು ಒತ್ತಡ ದಬ್ಬಾಳಿಕೆಗಳಿಂದ ಮುಕ್ತವಾದ ಬದುಕನ್ನು ಪಡೆಯಲು ಇಚ್ಛಿಸುತ್ತಾರೆ ಅದಕ್ಕಾಗಿ

ಹೋರಾಡುತ್ತಾರೆ. ಇಂದಿನ ಪುರುಷ ಪ್ರಧಾನವಾದ ಸಮಾಜವು ಮಹಿಳೆಗೆ ಕಲ್ಪಿಸಿಕೊಟ್ಟಿದೆಯೇ? ಎಂಬ ಪ್ರಶ್ನೆ ಇವರ ಕಾದಂಬರಿಗಳಲ್ಲಿ ಮತ್ತೆ ಮತ್ತೆ ಕಾಡುತ್ತದೆ.

ಸ್ತ್ರೀಯು ತನ್ನ ಕುಟುಂಬದಲ್ಲಿ, ಸಮಾಜದಲ್ಲಿ ಸಂಘರ್ಷಗಳನ್ನು ಸಹಿಸಿಕೊಳ್ಳುತ್ತಾ ಬದುಕುವ ರೀತಿಯನ್ನು, ಬದುಕಲು ಆಗದೆ ಹೋದರೆ ಅವಳ ಪಡುವ ನೋವನ್ನು, ನೋವನ್ನು ಸಹಿಸಲಾರದೆ ಹೋದರೆ ಅವಳು ತೆಗೆದುಕೊಳ್ಳುವ ಆತ್ಮಹತ್ಯೆಯಂತದ ನಿರ್ಧಾರಗಳನ್ನು ಕುಸೂನೂರರವರು ತಮ್ಮ ಕಾದಂಬರಿಗಳಲ್ಲಿ ದಾಖಲಿಸಿದ್ದಾರೆ. ಹೀಗೆ ಹೆಣ್ಣುಗಳು ಹೋರಾಟ ಮಾಡುವುದು ಕೊನೆಗೊಮ್ಮೆ ಸೋತು ಸಾವಿಗೆ ಶರಣಾಗುವುದು ಆರೋಗ್ಯಕರ ಸಮಾಜದ ನಿರ್ಮಾಣದಲ್ಲಿ ಸೋತ ನಾಗರಿಕ ಸಮಾಜದ ಅಭಿವ್ಯಕ್ತಿಯೇ ಎಂಬ ಪ್ರಶ್ನೆ ಇಲ್ಲಿಯದು.

ಲೇಖಕರು ಶಕ್ತಿಯುತವಾದ ಹೋರಾಟ ಮನೋಭಾವದ ಧೀಮಂತ ದಿಟ್ಟ ಸ್ತ್ರೀ ಪಾತ್ರಗಳನ್ನು ಸೃಷ್ಟಿಸಿಯೂ ಅಂತ್ಯದಲ್ಲಿ ಅವರನ್ನು ಸೋಲಿಸುತ್ತಾರೆ. ಇದು ಲೇಖಕರ ನಿರಾಶಾವಾದದ ಸೂಚನೆಯೇ? ಅಥವಾ ಸಾಮಾಜಿಕ ವ್ಯವಸ್ಥೆಯ ವೈಪಲ್ಯವೇ?–ಪ್ರಶ್ನೆ ಓದುಗರದ್ದಾಗುತ್ತದೆ.

ಪರಾಮರ್ಶನ ಗ್ರಂಥಗಳು

1)'ಕೆರೂರನಾಮಾ' ಕಾದಂಬರಿ

ಲೋಹಿಮಾ ಪ್ರಕಾಶನ, ಬಳ್ಳಾರಿ.

2)'ಗೋಹರಜಾನ್,ಮಾಲತಿ ಮತ್ತು ನಾನು' ಕಾದಂಬರಿ.

ಐ.ಬಿ.ಎಚ್ ಪ್ರಕಾಶನ, ಬೆಂಗಳೂರು.

3)'ಯಾ ತನಾ ಶಿಬಿರ' ಕಾದಂಬರಿ.

ಮನೋಹರ ಗ್ರಂಥಮಾಲಾ, ಧಾರವಾಡ.

4)'ಒಂದು ಕೈಪಿಯತ್' ಕಾದಂಬರಿ.

ಪ್ರಗತಿ ಗ್ರಾಫಿಕ್ಸ್ ಬೆಂಗಳೂರು.

5)'ತೇರು ಕಾದಂಬರಿ' ವಿವೇಚನೆ–ಸುರೇಶ ಹನಗಂಡಿ

ಬೆಳುವಲ ಪ್ರಕಾಶನ ಬಳೋಬಾಳ.

6)'ಭೈರಪ್ಪನವರ ಕಾದಂಬರಿಗಳಲ್ಲಿ ಸ್ತ್ರೀಪಾತ್ರಗಳು–ಡಾ॥ ಆರ್.ಎನ್.ದಿಂಡೂರ.

ಪ್ರಮೀಳಾ ಪ್ರಕಾಶನ ಬೆಂಗಳೂರು.

7)'ಆಸ್ವಾದ' –ಎನ್ ಶ್ರೀನಿವಾಸ ಉಡಪ

ಐ ಬಿ ಎಚ್ ಪ್ರಕಾಶನ,ಬೆಂಗಳೂರು.

8)'ಕಾರಂತರ ಕಾದಂಬರಿಗಳಲ್ಲಿ ಗಂಡ–ಹೆಣ್ಣು.–ಟಿ.ಪಿ.ಅಶೋಕ

ಅಕ್ಷರ ಪ್ರಕಾಶನ, ಸಾಗರ.

9)'ಸೌಂದರ್ಯ ಸಮೀಕ್ಷೆ –ಜಿ.ಎಸ್.ಶಿವರುದ್ರಪ್ಪ.

10)'ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ, ಸಂಪಾದಕರು ಡಾ. ಚಿ.ಸಿ.ನಿಂಗಣ್ಣ.

11)'ಸಾಹಿತ್ಯದ ಪ್ರಕಾರಗಳು. ಪಿ.ವಿ.ಶಾಸ್ತ್ರೀ.

12)'ಕಾನೂರು ಹೆಗ್ಗಡತಿ'–ಕುವೆಂಪು.

ಉದಯರವಿ ಪ್ರಕಾಶನ, ಮೈಸೂರು.

13)'ಮಲೆಗಳಲ್ಲಿ ಮದುಮಗಳು'–ಕುವೆಂಪು.

ಉದಯರವಿ ಪ್ರಕಾಶನ, ಮೈಸೂರು.

14)'ಅವಿಭಕ್ತ'–

15) 'ಕುವೆಂಪು ಸಾಹಿತ್ಯದಲ್ಲಿ ಮಹಿಳೆ'– ಡಾ.ಕೆ.ಎಸ್.ರತ್ನಮ್ಮ.

16) 'ಕಾರಂತರ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳು'– ಲೇಖನ ಬಿ.ಎನ್.ಸುಮಿತ್ರಾಬಾಯಿ.

17) 'ಚದುರಂಗರ ಕಾದಂಬರಿಗಳು'–ಡಾ.ಸರಸ್ವತಿ ನಿಚ್ಚಣಕಿ.

ಅನುಬಂಧ–೧

ಸಾಹಿತಿ ಚಂದ್ರಕಾಂತ ಕುಸನೂರರವರ ಕಾದಂಬರಿ ಕುರಿತು ನಡೆಸಿದ ಸಂದರ್ಶನ.

೧) ಸರ್. ತಮ್ಮ ಮೇಲೆ ಪ್ರಭಾವ ಬೀರಿದ ಸಾಹಿತಿ ಯಾರಾದರೂ ಇದ್ದಾರೆಯೇ ?

ಹಾಗೇ ಯಾರು ಇಲ್ಲ.

೨) ತಾವು ಕಲಿತದ್ದು ಉರ್ದು ಮತ್ತು ಹಿಂದಿ ಮಾಧ್ಯಮವಾದರೂ,ಕನ್ನಡ ಸಾಹಿತ್ಯಕ್ಕೆ ಹೇಗೆ ಬಂದಿರಿ?

ನಾನು ಬಿ.ಎ ವರೆಗೆ ಉರ್ದು ಮಾಧ್ಯಮದಲ್ಲಿ ಕಲಿತೆ, ಎಮ್.ಎ.ಹಿಂದಿ ಮಾಧ್ಯಮದಲ್ಲಿ ಮಾಡಿದೆ. ಉರ್ದು ಭಾಷೆಯಲ್ಲಿ ಕಲಿಯುವುದು ಅನಿವಾರ್ಯವಾಗಿತ್ತು. ಉರ್ದು ಆಗಿನ ಕಾಳದಲ್ಲಿ ಸ್ಟೇಟ ಲಾಂಗ್ವೇಜ್ ಆಗಿತ್ತು. ಹೀಗಾಗಿ ಉರ್ದು ಅನಿವಾರ್ಯವಾಗಿತ್ತು. ಆದರೂ ಕೂಡ ಕನ್ನಡದ ಬಗ್ಗೆ ಪ್ರೀತಿ ವಿಶ್ವಾಸವಿತ್ತು. ವಾತಾವರಣ ಇರಲಿಲ್ಲ ಮುಂದೆ ಕನ್ನಡದ ಪರಿಸರ ಬೆಳೆಸಿಕೊಂಡು ಕನ್ನಡದಲ್ಲಿ ಬರೆಯಲು ಪ್ರಾರಂಭ ಮಾಡಿದೆ.

೩) ತಮ್ಮದು ಬಹುಮುಖ ವ್ಯಕ್ತಿತ್ವ, ನಾಟಕಕಾರರಾಗಿ, ಕತೆಗಾರರಾಗಿ, ಕವಿಯಾಗಿ, ಚಿತ್ರ ಕಲಾವಿದರಾಗಿ, ಕಾದಂಬರಿಕಾರರಾಗಿ ವಿವಿಧ ಕ್ಷೇತ್ರಗಳಲ್ಲಿ ತಮ್ಮ ಪ್ರತಿಭೆಯನ್ನು ತೋರಿಸಿದ್ದೀರಿ. ಇವುಗಳ್ಲಿ ನೀವು ಅತೀ ಹೆಚ್ಚಾಗಿ ಮೆಚ್ಚುವ ಕ್ಷೇತ್ರ ಯಾವುದು ?

ನನಗೆ ಎಲ್ಲಾ ಮೆಚ್ಚುಗೆ ವಿಶೇಷವಾಗಿ ಕಾದಂಬರಿ ಮತ್ತು ಚಿತ್ರಕಲೆ.

೪) ತಮ್ಮ ಕಾದಂಬರಿಗಳಲ್ಲಿ ಸ್ತ್ರೀ ಸೌಂದರ್ಯವನ್ನು ಅದ್ಭುತವಾಗಿ ಚಿತ್ರಿಸಿದ್ದೀರಿ. ಇದಕ್ಕೆ ತಮ್ಮ ಚಿತ್ರಕಲೆ ಅಭಿರುಚಿ ಕಾರಣವಾಗಿರಬಹುದೇ ?

ಸಹಜವಾಗಿ ಕಾರಣವಾಗಿದೆ. ಮೊದಲು ನನ್ನ ಕಲ್ಪನೆಯಲ್ಲಿ ರೂಪ, ಲಾವಣ್ಯ ಲಯಭರಿತ ಚಿತ್ರ ಮೂಡುತ್ತದೆ. ಚಿತ್ರಕಲೆಯಲ್ಲಿ ಅಭಿರುಚಿ ಇದ್ದರೆ ಅದು ಅಭವ್ಯಕ್ತಿಯಾಗಿ ಹೊರ ಹೊಮ್ಮಿ ಭಾಷಾ ರೂಪದಲ್ಲಿ ಬರುತ್ತದೆ. ಇದು ಸಹಜವಾಗಿ ನನಗೆ ಬಂದದ್ದು. ಕಲ್ಪನೆಯಲ್ಲಿ ಮೂಡಿದ ಚಿತ್ರಕ್ಕೆ ನಾನು ಶಬ್ದಗಳ ಮೂಲಕ ಬಣ್ಣ ತುಂಬುತ್ತೇನೆ.

೫) ಅಸಂಗತ ನಾಟಕಗಳು ಹೇಗೆ ಹುಟ್ಟಿಕೊಂಡವು ?

ಪೂರ್ವಕಾಲದಿಂದಲೂ ಇಂತಹ ಪರಿಕಲ್ಪನೆಗಳ ಮೂಡಿ ಬಂದಿವೆ ಇಂತಹ ಪರಿಕಲ್ಪನೆಗೆ ಮೂರ್ತ ಸ್ವರೂಪಕೊಟ್ಟು ಅವುಗಳನ್ನು ಸಾಹಿತ್ಯ ರೂಪಕ್ಕೆ ಪರಿವರ್ತಿಸಿದಾಗ ಅಸಂಗತ ನಾಟಕಗಳು ಹುಟ್ಟಿಕೊಂಡವು. ೬೦ರ ದಶಕದಲ್ಲಿ ಗಿರಡ್ಡಿ ಗೋವಿಂದರಾಜರ ಜೊತೆಗೂಡಿ 'ರಂಗ ಮಾಧ್ಯಮ' ಎನ್ನುವ ಒಂದು ನಾಟಕ ಸಂಸ್ಥೆಯನ್ನು ಪ್ರಾರಂಭಿಸಿದೆವು. ಅಲ್ಲಿ ಹೊಸ–ಹೊಸ ನಾಟಕಗಳು ಬೇಕಾದಾಗ ಈ ರೀತಿಯ ನಾಟಕಗಳನ್ನು ಬರೆದೆ. ಆದರೆ ಅಸಂಗತ ನಾಟಕಗಳು ಭಾರತೀಯ ಸಂಸ್ಕೃತಿಯ ಜಾಯಮಾನಕ್ಕೆ ಒಗ್ಗುವುದಿಲ್ಲ ಎಂದು ಕೆಲವರು ವಿರೋಧಿಸಿದರು.ಮೊದಲು ಇದರ ಕಲ್ಪನೆ ಯೋರೋಪನಲ್ಲಿ ಎರಡು ಮಹಾಯುದ್ಧಗಳು ನಡೆದ ಮೇಲೆ ಹುಟ್ಟಿಕೊಂಡವು. ಆದರೆ ನಮ್ಮಲ್ಲಿ ಅಂತಹ ಪ್ರಸಂಗಗಳು ಇಲ್ಲ ಎಂದು ಕೆಲವರ ವಾದ.ಆದರೆ ನಮಗೆ ಸ್ವಾತಂತ್ರ್ಯ ಸಿಕ್ಕು ಆದರೆ ಖುಷಿ

ಸಿಗಲಿಲ್ಲ. ಗಾಂಧಿಜೀ, ನೆಹರು, ವಲ್ಲಭಬಾಯಿ ಪಟೇಲ ನಂತಹ ಅನೇಕ ರಾಷ್ಟ್ರೀಯ ನಾಯಕರು ಕಂಡ ಭಾರತದ ಕನಸು ನನಸಾಗಲಿಲ್ಲ. ಈಗ ದೇಶದಲ್ಲಿ ಪಕ್ಷ, ಜಾತಿ, ಪಂಗಡ, ಧರ್ಮ ಎನ್ನುವ ಹೆಸರಲ್ಲಿ ದೇಶವನ್ನು ಆಳುವುದು ಕೂಡ ಒಂದು ದುರಂತ. ಸ್ವಾರ್ಥ ತುಂಬಿದ ಈ ದೇಶದಲ್ಲಿ ಒಳ್ಳೆಯವರೂ ಕೂಡಾ ಹೊಂದಾಣಿಕೆಯ ಬದುಕಲ್ಲಿ ಸಾಗುತ್ತಾ ಇರುವುದು, ಬಡವ ಬಡವನಾಗಿ ಉಳಿದಿದ್ದು ಇವೆಲ್ಲಾ ದುರಂತಗಳೇ.

೬) ಧೀರ ಧೀಮಂತ ಹೋರಾಟದ ಜೀವಂತಿಕೆ ತುಂಬುವ ಪಾತ್ರಗಳು ಕೊನೆಗೆ ಸಾವಿಗೆ ಶರಣಾವಂತೆ ಮಾಡಿದ್ದಿರಿ ಏಕೆ ?

ಆತ್ಮಹತ್ಯೆ ಅಥವಾ ಸಾವು ಎಲ್ಲ ಪ್ರಶ್ನೆಗಳಿಗೆ ಉತ್ತರವಲ್ಲ, ಸಾವು ಕೊನೆಯಲ್ಲ ಹೋರಾಟದ ಕೊನೆಯು ಅಲ್ಲ. ಹುಟ್ಟು ಮತ್ತು ಸಾವುಗಳ ಮಧ್ಯೆ ಅದೆಷ್ಟು ಸಂತೋಷದ ಕ್ಷಣಗಳು ಬರುತ್ತವೆ. ಅದೆಷ್ಟೊ ದುಃಖದ ಕ್ಷಣಗಳು ಬರುತ್ತವೆ. ಆದರೆ ದುಃಖದ ಕ್ಷಣಗಳನ್ನು ಉತ್ಸವಗಳಂತೆ ಅಥವಾ ಸಂತೋಷದ ಕ್ಷಣಗಳಂತೆ ಮಾರ್ಪಡಿಸಿ ಬದುಕಬೇಕು.ಸಹನಶೀಲತೆ ಇರಬೇಕು.

೭) ಸಂಪ್ರದಾಯ ಬದ್ಧವಾದ ಪಾತ್ರಗಳಲ್ಲೂ ತಮ್ಮ ಸ್ವಂತಿಕೆಯನ್ನು ಕಳೆದುಕೊಳ್ಳದ ಪಾತ್ರಗಳಿವೆ. ಅವುಗಳ ವೈಭವೀಕರಣ ಇದೆಯೋ ? ನಿಮ್ಮ ಸಂಪ್ರದಾಯದ ನಂಬಿಕೆ ಇದಕ್ಕೆ ಕಾರಣವೇ ? ಅಥವಾ ಪರಿಸರ ಕಾರಣವೇ ?

ಪಾತ್ರಗಳ ವೈಭವೀಕರಣ ಇಲ್ಲ ಯಾವುದೇ ಸಂಪ್ರದಾಯಗಳ ಪ್ರಭಾವ ಆಗಿಲ್ಲ ದೇವರು, ಆಧ್ಯತ್ಮ ಇವೆಲ್ಲವೂ ನನಗೆ ಸಂತಸ ಕೊಡುವ ವಿಚಾರಗಳು ನನ್ನ ಬದುಕಿಗೆ ಸುಖ ಕೊಡುವ ವಿಷಯಗಳು.

೮) ದೋಹೆ, ತತ್ವಪದಗಳು ಬಳಸಿದ ವಿಶಿಷ್ಠ ಕಾದಂಬರಿ ನಿಮ್ಮದು ಇವುಗಳನ್ನು ಬಳಸಿ, ಪಾತ್ರ ಬೆಳವಣಿಗೆಯಲ್ಲಿ ಕಾದಂಬರಿಯ ಸಂವಿಧಾನಕ್ಕೆ ಒಂದು ಮೆರಗು ನೀಡಿದ್ದಿರಿ. ಬಹುಶಃ ಈ ಸಾಂಸ್ಕೃತಿಕ ಪರಿಸರ ಪಾತ್ರಗಳ ಬದುಕನ್ನು ಶ್ರೀಮಂತವಾಗಿಸಲು ಕಾರಣವಾಗಿರಬಹುದೇ ? ಆಗಿರಬಹುದು ನನ್ನ ಮೇಲೆ ಅತಿಯಾದ ಪ್ರಭಾವ ಬೀರಿದ ಸಂತ ಎಂದರೆ ಕಬೀರದಾಸರು.

ಕಬೀರದಾಸರು ಜ್ಞಾನಾಶ್ರಯ ಭಕ್ತಿ. ದೇವರಿಗೆ ಸವಾಲು ಹಾಕಿದ ಸಂತ ಅವನು.

೯) ಗೋಹರಜಾನ, ಮಾಲತಿ. . . . .ಮುಂತಾದ ಹೋರಾಟದ ಮನೋಭಾವದ ಸ್ತ್ರೀಯರನ್ನು ಚಿತ್ರಿಸುವಾಗ ನಿಮ್ಮ ಕಣ್ಣ ಮುಂದೆ ಯಾವುದಾದರೂ ಪ್ರಭಾವಯಿದೆಯಾ ?

ಇಲ್ಲಾ. ಹಾಗೇನಿಲ್ಲ. ಅವೆಲ್ಲವೂ ಕಾಲ್ಪನಿಕ ಪಾತ್ರಗಳು.

೧೦) ನಾಟಕ ಅಕಾಡೆಮಿ,ಲಲಿತ ಕಲಾ ಅಕಾಡೆಮಿ, ಸಾಹಿತ್ಯ ಅಕಾಡೆಮಿ ಮತ್ತು ರಾಜ್ಯೋತ್ಸವ ಪ್ರಶಸ್ತಿ ಪಡೆದ ಮೊದಲ ಕನ್ನಡಿಗರು ನೀವು. ಇದರ ಬಗ್ಗೆ ನಿಮ್ಮ ಅನಿಸಿಕೆ ?

ಸಂತೋಷವಾಗಿದೆ. . . . ಇವೆಲ್ಲವೂ ಬಯಸದೇ ಬಂದದ್ದು.

ಅನುಬಂಧ-೨

ವಿದ್ವಾಂಸರು ಕಂಡಂತೆ : ಕುಸನೂರು

ಕನ್ನಡ ಸಾಹಿತ್ಯ ಸಂಸ್ಕೃತಿ ಚಿಂತಕರಲ್ಲಿ 'ಚಂದ್ರಕಾಂತ ಕುಸನೂರ' ಪ್ರಮುಖರು ಇವರು ಮಾತು , ಓದು, ಚಿಂತನೆ, ಚಿತ್ರ ಅಷ್ಟೇ ಅಲ್ಲ ಬದುಕೂ ಕೂಡ ಆಪ್ತ. ಅಪ್ಯಾಯಮಾನ, ಅಹಮಿಕೆ ಇಲ್ಲದ ಸರಳ ಜೀವನ, ಜೀವನ ಕಲೆ ಕುರಿತಂತೆಯೇ ನಿರಂತರ ಅಧ್ಯಯನ ಇದರ ಫಲಗಳೇ ಕತೆ, ಕವಿತೆ, ನಾಟಕ, ಕಾದಂಬರಿ, ವಿಮರ್ಶೆ ಮತ್ತು ಚಿತ್ರಕಲಾಕೃತಿಗಳು.

ಅಸಂಗತ ನಾಟಕ, ಜಪಾನಿ ಹೈಕುಗಳನ್ನ ಕನ್ನಡಕ್ಕೆ ಮೊಟ್ಟ ಮೊದಲು ಪರಿಚಯಿಸಿದ ಶ್ರೇಯಸ್ಸು ಇವರದು. ಹೈದರಾಬಾದ ಕರ್ನಾಟಕದ ಭಾಷೆ, ಬದುಕು ಇವರ ಕೃತಿಗಳಲ್ಲಿ 'ಉತ್ಸವ'ದಂತೆ ಬರುವುದುನ್ನ ಓದಿಯೇ ಅನುಭವಿಸಬೇಕು. ಈ ಕಾರಣ ಇವರ ಕಾದಂಬರಿಗಳೆಲ್ಲ ಆ ಭಾಗದ ಸಾಂಸ್ಕೃತಿಕ ಪಠ್ಯಗಳಾಗಿ ಗಮನಾರ್ಹವೆನಿಸಿವೆ.

ರಾಮಕೃಷ್ಣ ಮರಾಠೆ

('ಒಂದು ಕೈಫಿಯತ್' ಬೆನ್ನುಡಿ)

ಶ್ರೀ ಚಂದ್ರಕಾಂತ ಕುಸನೂರರು ಕಲಬುರಗಿ ಜಿಲ್ಲೆಯ ಕುಸನೂರು ಹಳ್ಳಿಯವರು. ಅವರ ಸಾಹಿತ್ಯ ಮತ್ತು ಕಲೆಗಳು ಕುಸನೂರಿನಿಂದ ಕಲಬುರಗಿ, ಕಲಬುರಗಿಯಿಂದ ಕರ್ನಾಟಕ, ಕರ್ನಾಟಕದಿಂದ ದೇಶ ವ್ಯಾಪಿಯಾಗಿ ಹರಡಿದೆ.ಅವರಲ್ಲಿರುವ ತುಡಿತ ಚಿತ್ರಕಲೆ, ಸಾಹಿತ್ಯ, ಸಂಗೀತ ಮುಂತಾದ ಲಲಿತಕಲೆಗಳಲ್ಲಿ ತೊಡಗಿಸಿಕೊಳ್ಳುವಂತೆ ಶ್ರೀ ಕುಸನೂರರನ್ನು ಪ್ರೇರೇಪಿಸಿದೆ.

ಡಾ॥ ರಾಜಶೇಖರ ನೀರಮಾನವಿ

(ಕೆರೂರು ನಾಮಾ ಮುನ್ನುಡಿ)

ಕನ್ನಡಕ್ಕೆ ಮೊದಲ ಅಸಂಗತ ನಾಟಕ ಮತ್ತು ಹೈಕುಗಳನ್ನು ನೀಡಿದ ಹಿರಿಯ ಸಾಹಿತಿ ಚಂದ್ರಕಾಂತ ಕುಸನೂರರು ಬಹುಮುಖ ವ್ಯಕ್ತಿತ್ವ ಉಳ್ಳವರು. ಕತೆ, ಕವಿತೆ, ನಾಟಕ, ಕಲೆ, ಚಿಂತನೆಯ ಮೂಲಕ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿದವರು.

ಡಿ.ಎಸ್.ಚೌಗಲೆ

('ಒಂದು ಕೈಫಿಯತ್'' ಮುನ್ನುಡಿ)

ಶ್ರೀ ಚಂದ್ರಕಾಂತ ಕುಸನೂರವರು ನಮ್ಮ ಹೊಸ ಪೀಳಿಗೆಯ ಲೇಖರರಲ್ಲಿ ಒಬ್ಬರಾಗಿದ್ದರೂ ಅವರ ಬರವಣಿಗೆ ಕನ್ನಡ ಸಾಹಿತ್ಯಕ್ಕೆ ಹೊಸತೇನಲ್ಲ ಅವರ ಕವಿತೆ, ಸಣ್ಣಕತೆ ಮತ್ತು ಅಸಂಗತ ನಾಟಕಗಳು ಈಗಾಗಲೇ ಪ್ರಸಿದ್ಧಿಯನ್ನು ಪಡೆದಿವೆ. ಹೈದರಾಬಾದ್ ಕರ್ನಾಟಕದ ಆಡು ನುಡಿಯ ವೈಶಿಷ್ಟ್ಯದಿಂದ ಜೀವಂತವಾಗಿರುವ ಅವರ ಭಾಷೆ ವಿಮರ್ಶಕರ ಲಕ್ಷ್ಯವನ್ನು ಸೆಳೆದುಕೊಂಡಿದೆ.

ಕೀರ್ತಿನಾಥ ಕುರ್ತುಕೋಟಿ

('ಯಾತನಾ ಶಿಬಿರ' ಮುನ್ನುಡಿ)